Stoneware Pipe Factory near Banasandra, Tumkur District (Proposal to start).

Q.—305. Sri B. HUTCHE GOWDA (Turuvekere).—

Will the Government be pleased to state:—

(*a*) whether they are aware that enough raw materials are available to start a stoneware pipe factory near Banasandra, Tumkur District;

(*b*) whether it is a fact that the Mysore Stoneware and Potteries, Limited, thought of starting a factory at Banasandra and applied for power and got it sanctioned also;

(*c*) whether it is a fact that the said Company has applied for financial assistance from Government;

(*d*) whether it is true that the Company has given up the enterprise due to the Government's delay in arranging the finance;

(*e*) whether they will take up this question of starting a stoneware pipe factory at Banasandra either by arranging finance to the said Company or by starting another company to manufacture pipes, etc., since this district has no factories so far?

A.—Sri H. M. CHANNABASAPPA (Minister for Industries).—

(*a*) Yes.

(*b*) Yes.

(*c*) No.

(*d*) Does not arise in view of reply to clause (*c*)

(*e*) If the Company applies for financial assistance from Government, the matter will be considered under the provisions of the Mysore State Aid to Industries Act, 1951.

Election to Board of Industries

Mr. DEPUTY SPEAKER.—The Chair desires to announce that till the last hour fixed for the receipt of candidature applications only one candidate *viz.*, Sri G. Puttaswamy had signified his intention to stand for election to the Board of Industries. As he is the only candidate standing for the one place to be filled up by election, Sri G. Puttaswamy is declared elected.

BUDGET FOR 1956-57—DEMANDS FOR GRANTS (*Contd*).

Mr. DEPUTY SPEAKER.—Demands Nos. 21, 24 and 25.

DEMAND No. 21—AGRICULTURE, HORTICULTURE AND FISHERIES.

40. AGRICULTURE.

Mr. DEPUTY SPEAKER.—Motion moved:

"That a sum not exceeding Rs. 74,21,641 be granted to the Government to defray the charges which will come in course of payment during the year ending 31st day of March 1957, in respect of 'Agriculture'."

Discussion on this Demand will go on till Ten O'clock. For Demand No. 24, I think about half an hour would be sufficient. For Demand No. 25 between 11 and 12-30. I take it that the House agrees to this arrangement.

MEMBERS.—Yes.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಮಂಡಿಸಲಾಗಿರತಕ್ಕಂಥ ಡಿಮ್ಯಾಂಡನ್ನು ಸ್ವಾಗತ್ತಿಸುತ್ತ ನಾನು ವ್ಯವಸಾಯದ ಇಲಾಖೆಯ ಬಗ್ಗೆ ಕೆಲವು ಸೂಕ್ತ ಸಲಹೆಗಳನ್ನು ಸರ್ಕಾರಕ್ಕೆ ನೀಡಬೇಕೆಂದು ನಿಂತಿದ್ದೇನೆ.

ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದ ಮೇಲೆ ರೈತಾಪಿ ಕಸುಬಿನವರಿಗೆ ಬೇಕಾದ ಸಾಮಾನುಗಳನ್ನು ಒದಗಿಸಲು ನಮ್ಮ ಸರ್ಕಾರದವರು ವಿಪರೀತವಾಗಿ ಹಣವನ್ನು ಖರ್ಚುಮಾಡುತ್ತಿದ್ದಾರೆ. ಅದು ಅಭಿನಂದನೀಯ. ಆದರೆ ಈ ಹಣವನ್ನು ಸರ್ಕಾರದವರು ಒಂದು ಸರಿಯಾದ ಮಾರ್ಗದಲ್ಲಿ ಖರ್ಚು ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಟೌನ್ ಮತ್ತು ನಗರ ಪ್ರದೇಶಗಳು ಎಂದರೆ ಯಾವ ಯಾವ ಸ್ಥಳಗಳು ಬೇಗ ಅಧಿಕಾರವರ್ಗದವರ ಕಣ್ಣಿಗೆ ಬೀಳುತ್ತವೆಯೋ ಅಂಥ ಪ್ರದೇಶಗಳಿಗೆ ಮಾತ್ರವೇ ಈ ದಿವಸ ಸರ್ಕಾರದವರು ಬೇಗ ಹಣವನ್ನೊದಗಿಸಿ, ಅವರಿಗೆ ಬೇಕಾಗತಕ್ಕಂಥ ವಿಶಿಷ್ಟ ಸಾಮಾನುಗಳನ್ನೂ ಒದಗಿಸಲು ಚುರುಕಾಗಿ ಎಲ್ಲರೂ ಕೆಲಸ ಮಾಡುತ್ತಾರೆ.

* Asterisk indicates that the speech has not been revised by the Member concerned.

(ಶ್ರೀ ವೈ. ಎಂ. ಚಂದ್ರಶೇಖರಯ್ಯ)

ಆದರೆ ಅದೇ ರೀತಿಯಲ್ಲಿ ಈ ದಿವಸ ಸರ್ಕಾರದ ಅಧಿಕಾರವರ್ಗ ರೈತನ ಕಷ್ಟಸುಖಗಳನ್ನು ಗಮನಿಸುತ್ತಿಲ್ಲ. ಹಾಗೆ ಅವರ ಗಮನವನ್ನು ಸೆಳೆಯತಕ್ಕಂಥ ಮಾರ್ಗಗಳೂ ಕೂಡ ಇರುವುದಿಲ್ಲ. ಆದರೆ ಸರ್ಕಾರದವರು ರೈತನಿಗೆ ಬೇಕಾಗುವಂಥ ಸಾಮಾನುಗಳ ಬಗ್ಗೆ ಎಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಕುಳ, ಗುಡ, ಇತ್ಯಾದಿ ಸಾಮಾನುಗಳ ವಿಚಾರದಲ್ಲಿ ಒಂದು ಆರ್ಡರನ್ನು ಇನ್ನೂ ಮೊನ್ನೆತಾನೆ ಹೊರಡಿಸಿದ್ದಾರೆ. ಈ ಆರ್ಡರ್ ಪ್ರಕಾರ ಈ ದಿವಸ ರೈತನು ತನಗೆ ಬೇಕಾದ ಒಂದುಕುಳ ಅಥವ ಮತ್ತೆ ಯಾವುದಾದರೂ ಒಂದು ಸಾಮಾನುಬೇಕಾಗಿದ್ದಲ್ಲಿ ಆತನು ರೆವಿನ್ಯೂ ಇನ್ಸ್ಪೆಕ್ಟರವರಲ್ಲಿಗೆ ಹೋಗಿ ಅವರಿಂದ ಒಂದು ಸರ್ಟಿಫಿಕೇಟನ್ನು ಬರೆಸಿಕೊಂಡು ಬರಬೇಕೆಂಬ ನಿರ್ಬಂಧ ಹಾಕಿದ್ದಾರೆ. ಈ ರೀತಿಯಾಗಿ ಒಬ್ಬ ರೈತ ದಿವಸ ಒಂದು ಕುಳಕ್ಕೂ ಸಹ ಆ ರೆವಿನ್ಯೂ ಇನ್ಸ್ಪೆಕ್ಟರ್ ಅಥವಾ ಅಮಲ್ದಾರರ ಬಳಿ ಹೋಗಿ ಒಂದು ಪರ್ಮಿಟ್ ತಂದು ಅದನ್ನು ಕೊಂಡುಕೊಳ್ಳುವಂಥ ಸ್ಥಿತಿ ಬಂತಲ್ಲಾ ಎಂದು ನಾನು ವಿಷಾದಪಡಬೇಕಾಗಿದೆ. ಈ ದಿವಸ ರೈತರು ಈ ಒಂದು ನಾಲ್ಕಾಣೆ ಸಾಮಾನಿಗೂ ಕೂಡ 14-15 ಮೈಲಿ ಹೋಗಿ ಆ ಅಧಿಕಾರಿಗಳಿಂದ ಒಂದು ಚೀಟಿತರಬೇಕೆಂದರೆ ಆತನಿಗೆ ಒಂದು ದಿನದ ಬದುಕೇ ಹೋಯಿತು. ಇನ್ನು ಈ ಚೀಟಿ ತಂದ ನಂತರ ಆತನು ಪುನಃ ಸಾಮಾನಿಗೋಸ್ಕರವಾಗಿ ಸೊಸೈಟಿಯೋ ಅಥವಾ ಸಾಮಾನುಗಳ ಮಾರಾಟದ ಡಿಪೋ ಇರತಕ್ಕಂಥ ತಾಲ್ಲೂಕ್ ಹೆಡ್‌ಕ್ವಾರ್ಟರ್ಸಿಗೆ ಹೋಗಿ ಬರಲು ಮತ್ತೊಂದು ದಿನದ ಬದುಕು ಹಾಳು. ಹೀಗೆ ಈ ದಿವಸ ಈ ರೈತನ ಬಾಳು ನಾಲ್ಕಾಣೆಯ ಸಾಮಾನಿಗೂ ಸಹ ಎರಡು ದಿವಸದ ಬದುಕನ್ನು ಹಾಳುಮಾಡಿಕೊಳ್ಳಬೇಕೆಂದು ಹೇಳುತ್ತಿದ್ದರೆ ಇವರ ಕಷ್ಟಸುಖಗಳನ್ನು ನಾವು ಇನ್ನು ಯಾರ ಮುಂದೆ ಹೇಳಿಕೊಳ್ಳಬೇಕೋ ಅದೇ ನನಗಂತೂ ತಿಳಿಯದಾಗಿದೆ. ಆದರೆ ಹಿಂದೆ ಕಂಟ್ರೋಲ್ ಕಾಲದಲ್ಲಿದ್ದ ಹಾಗೆ ಸಾಮಾನುಗಳು ದೊರಕುವುದಕ್ಕೆ ಈ ದಿವಸ ತೊಂದರೆಯೇನೂ ಇಲ್ಲ. ಸಾಮಾನುಗಳು ಹೇರಳವಾಗಿ ಎಲ್ಲಿಬೇಕಾದರೂ ದೊರೆಯುತ್ತಿವೆ. ಹೀಗಿದ್ದಾಗ್ಯೂ ಸರ್ಕಾರ ದಿನಕ್ಕೊಂದು ಆರ್ಡರನ್ನು ಹೊರಡಿಸುತ್ತಿರುವುದು ನ್ಯಾಯವಾದುದಲ್ಲ. ಅತ್ತಲಾಗಿ ಆ ರೈತನ ಸನುಬಾದರೋ ಆತನು ಒಂದು ದಿವಸ ಕೂಡ ಮನೆ ಬಿಟ್ಟು ಹೊರಗೆ ಹೊರಡಲು ಅವಕಾಶವಿರುವುದಿಲ್ಲ. ಆತನಿಗೆ ವಿರಾಮವೆನ್ನುವುದೇ ಇಲ್ಲ. ಮಳೆಗಾಲದಲ್ಲಿ ಉಳುವುದು, ಬೇಸಿಗೆ ಕಾಲದಲ್ಲಿ ಗೊಬ್ಬರ, ಗೋಡುಗಳನ್ನು ಸಾಗಿಸುವುದು, ಬದುಗಳನ್ನು ಹಾಕುವುದು. ಹೀಗೆ ಆತನಿಗೆ ವರ್ಷಾದ್ಯಂತವೂ ಕೆಲಸಗಳಿದ್ದೇ ಇರುತ್ತವೆ. ಆದಕಾರಣ ಇನ್ನಾದರೂ ಸರ್ಕಾರದವರು ರೈತಾಪಿ ವರ್ಗಕ್ಕೆ ಈ ದಿವಸ ಇರತಕ್ಕ ತೊಂದರೆಗಳನ್ನು ತಪ್ಪಿಸಿ ಅವರಿಗೆ ವ್ಯವಸಾಯ ಸಂಬಂಧದಲ್ಲಿ ಬೇಕಾಗತಕ್ಕಂಥ ಬೀಜ, ಗೊಬ್ಬರ, ನೇಗಿಲು, ಮುಟ್ಟುಗಳು, ಮತ್ತು ಇತರೇ ವ್ಯವಸಾಯದ ಉಪಕರಣಗಳನ್ನು ಯಾವ ಅಡ್ಡಿ ಆತಂಕಗಳೂ ಇಲ್ಲದಂತೆ ಅವರಿಗೆ ದೊರೆಯುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೈತನಿಗೆ ಬೇಕಾಗತಕ್ಕಂಥ ವ್ಯವಸಾಯದ ಮರ ಮುಟ್ಟುಗಳನ್ನು ಕೇಳುವುದಕ್ಕೆ ಹೋದರೆ ಫಾರೆಸ್ಟ್ ಇಲಾಖೆಯವರು ಅವು ಮನ್ನಾಜಂಗಲ್— ಅಂಥ ಜಂಗಲ ಇಂಥ ಜಂಗಲ ಎಂದು ಹೇಳಿ ಅವರಿಗೆ ಅವಕಾಶ ಕೊಡುತ್ತಿಲ್ಲವೆಂದು ಕೇಳುತ್ತಿದ್ದೇನೆ. ಆದುದರಿಂದ ಆ ರೈತರಿಗೆ ಬೇಕಾಗುವಂಥ ಬೇಸಾಯದ ಮುಟ್ಟುಗಳನ್ನು ಯಾವ ಜಂಗಲಿನಿಂದಲೇ ಆಗಲಿ, ಪುಕ್ಕಟ್ಟೆಯಾಗಿ ದೊರೆಯುವಂತೆ ಸರ್ಕಾರದವರೊಂದು ಏರ್ಪಾಡು ಮಾಡಬೇಕು. ನಮಗೆ ಆಹಾರ ಸಾಮಗ್ರಿಗಳನ್ನು ಬೆಳೆದುಕೊಡುತ್ತಿರುವ ರೈತರ ವಿಚಾರದಲ್ಲಿ ತಾವು ಇಷ್ಟಾದರೂ ಉಪಕಾರ ಮಾಡದಿದ್ದರೆ ಮತ್ತೇನು ಸಹಾಯವನ್ನು ತಾವು ಅವರಿಗೆ ಒದಗಿಸಬಲ್ಲಿರಿ! ಹಳ್ಳಿಯ ಜನರು ಆಹಾರ ವಸ್ತುಗಳನ್ನು ದಿವಸ ಬೆಳೆಯದೆ ಹೋದರೆ ಈ ಸಿಟಿಗಳಲ್ಲಿ ಕುಳಿತುಕೊಂಡು ತಿನ್ನತಕ್ಕ ಜನರ ಗತಿ ಏನಾಗಬಹುದು! ಅಥವಾ ನಿಮ್ಮ ಈ ದೊಡ್ಡ ದೊಡ್ಡ ನಗರಗಳಲ್ಲಿ ಬ್ಯಾಂಕುಗಳ, ಫ್ಯಾಕ್ಟರಿಗಳ ಮತ್ತು ಇತರೇ ಕಾರ್ಖಾನೆಯ ಕೆಲಸಗಾರರು ದಿನ ಬೆಳಗಾದರೆ ಹೂಡುತ್ತಿರುವಂಥ ಮುಷ್ಕರಗಳನ್ನೇನಾದರೂ ಒಂದು ವೇಳೆ ಆ ರೈತಾಪಿ ಜನರು ಹೂಡಿಬಿಟ್ಟರೆ ಆ ದಿವಸವೇ ಜಗತ್ತಿನ ಪ್ರಳಯ ಮತ್ತು ಜನ ಜೀವನದ ಕೊನೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೇನಾದರೂ ಆಯಿತೆಂಧರೆ ಯಾರಿಗೂ ಆಹಾರ ಸಿಕ್ಕುವುದಿಲ್ಲ. ಎಲ್ಲರೂ ಕೈಲಾಸವಾಸಿಗಳಾಗಬೇಕಾಗುತ್ತದೆ. ಆದರೆ ಆ ರೈತಾಪಿ ಜನರಿಗೆ ದೇವರು ಇನ್ನು ಅಂಥ ಬುದ್ಧಿಯನ್ನು ಕೊಟ್ಟಿಲ್ಲ. ಪರಮಾತ್ಮನು ಅವರಿಗೆ ಬುದ್ಧಿಯನ್ನು ಕೊಡದಿರಲಿ ಎಂದು ನಾನು ಹಾರೈಸುತ್ತೇನೆ. ಆದರೆ ಸರ್ಕಾರದವರು ಹೀಗೇ ಮಾಡುತ್ತಾ ಬಂದರೆ ಕೊನೆಗೆ ಒಂದಲ್ಲಾ ಒಂದು ದಿನ ಈ ರೈತರೂ ಸಹ ಮುಷ್ಕರಗಳನ್ನೂ ಕೂಡ ಹಿಡಿಯುವಕಾಲ ಬಂದರೂ ಬರಬಹುದು. ಇಂಥಾದ್ದಕ್ಕೆ ಸರ್ಕಾರ ಅವಕಾಶ ಕೊಡದಿರಬೇಕೆಂದು ಸೂಚಿಸುತ್ತೇನೆ. ಈಗಾಗಲೇ ಬೇಸಿಗೆ ಪ್ರಾರಂಭವಾಗಿದೆ. ಆದಕಾರಣ ಇನ್ನು ಮುಂಗಾರು ಮಳೆ ಬೇಗ ಪ್ರಾರಂಭವಾಗಲಿದೆ. ಅದಕ್ಕಾಗಿ ರೈತರಿಗೆ ಬೇಕಾಗುವಂಥ ಬೀಜ, ಗೊಬ್ಬರ, ನೇಗಿಲು, ಇತ್ಯಾದಿ ಉಪಕರಣಗಳನ್ನು ಬೇಗತರಿಸಿಟ್ಟುಕೊಂಡು ಅವು ಸಕಾಲಕ್ಕೆ ಸರಿಯಾಗಿ ಅವರಿಗೆ ಒದಗುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ರೈತನು ದೇಶದ ಬೆನ್ನು ಮೂಳೆ. ಈತನಿಗೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ.

ಇನ್ನು ಈ ಟ್ರಾಕ್ಟರುಗಳ ವಿಚಾರ ತೆಗೆದುಕೊಂಡರೆ ಇವುಗಳನ್ನು ಹೆಚ್ಚಾಗಿ ಶ್ರೀ ಟಿ. ಮರಿಯಪ್ಪನವರ ಕಾಲದಲ್ಲಿ ತರಿಸಲಾಗಿತ್ತು. ಆದರೆ ಈ ದಿವಸ ಅವು ಏತಕ್ಕೂ ಬರದ ಹಾಗೆ ಮೂಲೆಯಲ್ಲಿ ಮುರಿದು ಬಿದ್ದಿವೆ. ನಮ್ಮ ಕಡೂರು ತಾಲ್ಲೂಕಿನಲ್ಲೂ ಕೂಡ ಒಂದು ಟ್ರಾಕ್ಟರ್ ಇದೆ. ಅದು ಹಿಂದಕ್ಕೂ ಹೋಗುವುದಿಲ್ಲ, ಮುಂದಕ್ಕೂ ಹೋಗುವುದಿಲ್ಲ, ನಿಂತಲ್ಲೇ ನಿಂತಿದೆ. ಇಂಥ ಟ್ರಾಕ್ಟರುಗಳಿಂದೇನು ಪ್ರಯೋಜನ? ಇದಕ್ಕೆ ರಿಪೇರಿಗಾಗಿ ಬೇಕಾಗುವಂಥ ಪ್ರತಿಯೊಂದು ಮೊಳೆ, ಮರಡು, ಸ್ಪ್ರಿಂಗ್ ಇತ್ಯಾದಿ ಸಾಮಾನುಗಳಿಗೆ ಬೆಂಗಳೂರಿಗೇ ಬರಬೇಕಾಗಿದೆ. ಮೇಲಾಗಿ ಅದನ್ನು ನಡೆಸತಕ್ಕ ಡ್ರೈವರ್ ಕೂಡ ಈ ಬೆಂಗಳೂರಿಂದಲೇ ಬರಬೇಕು. ಅಂತೂ ಆ ಟ್ರಾಕ್ಟರ್ ಈ ದಿವಸ ಕೆಟ್ಟರೆ 8-10 ದಿವಸಗಳ ತನಕ ಅದು ರಿಪೇರಿ ಆಗಲು ಅವಕಾಶವಿರುವುದಿಲ್ಲ. ಸರ್ಕಾರದವರು ಇಂಥ ಟ್ರಾಕ್ಟರುಗಳ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಚೆಲ್ಲಿದ್ದಾರೆ. ಇನ್ನು ಒಬ್ಬಬ್ಬರು ರೈತರು ಇವುಗಳನ್ನು ಕೊಂಡು ಅವರ ಆಸ್ತಿ, ಒಡವೆ, ಮನೆ, ಮಠಗಳನ್ನೆಲ್ಲಾ ಹಾಳು ಮಾಡಿಕೊಂಡಿದ್ದಾರೆ. ಇವುಗಳನ್ನು ನಡೆಸುವ ಹಾಗಿದ್ದರೆ ಸರಿಯಾಗಿ ನಡೆಸಿ, ಇಲ್ಲವೇ ಸಂಪೂರ್ಣವಾಗಿ ತೆಗೆದು ಹಾಕಿ ಬಿಡಿ. ಅಂತೂ ಸರ್ಕಾರದವರು, ಅದರಲ್ಲೂ ಈ ವ್ಯವಸಾಯ ಮಂತ್ರಿಗಳು, ಈ ಇಲಾಖೆಗೆ ಎಲ್ಲಾ ತಿಳುವಳಿಕೆಗಳನ್ನೂ ಕೊಟ್ಟು ರೈತರಿಗೆ ಎಲ್ಲಾ ಸಾಮಾನುಗಳನ್ನು ಸಕಾಲ

ದಲ್ಲಿ ಒದಗಿಸಿ ಅವರು ಗುಡುಗು—ಮಿಂಚಿನ ವೇಗದಲ್ಲಿ ಕೆಲಸ ಮಾಡುವಂತೆ ಇಲಾಖೆಗೆ ಸೂಕ್ತ ತಿಳುವಳಿಕೆಗಳನ್ನು ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ನೂರಕ್ಕೆ 80 ಜನಗಳು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಈ ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಎಷ್ಟು ಗಮನಕೊಡಬೇಕೋ ಅಷ್ಟು ಗಮನಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಸ್ವಾಮಿ, ಈ ಇಲಾಖೆಗೆ ವರ್ಷಕ್ಕೆ ¾ ಕೋಟಿ ರೂಪಾಯಿಗಳವರೆಗೂ ಸರ್ಕಾರದವರು ಖರ್ಚುಮಾಡುತ್ತಾರೆ. ಈ ಹಣವೆಲ್ಲಾ ಅನ್ಯಾಯವಾಗುತ್ತಾ ಇದೆ ಎಂದು ಹೇಳದೇ ವಿಧಿಯಿಲ್ಲ. ಏಕೆಂದರೆ ಇಷ್ಟು ಹಣ ಖರ್ಚುಮಾಡಿದರೂ ದೇಶದಲ್ಲಿ ರೈತನಿಗೆ ಏನು ಸಹಾಯ ಒದಗಬೇಕೋ ಅದು ಒದಗದೇ ಎಷ್ಟುಮಟ್ಟಿಗೆ ಫಲಕಾರಿಯಾಗಬೇಕೋ ಅಷ್ಟುಮಟ್ಟಿಗೆ ಆಗದೇಹೋಗಿದೆ. ಇದಕ್ಕೆ ಕಾರಣ ಈ ವ್ಯವಸಾಯದ ಇಲಾಖೆಯಲ್ಲಿರತಕ್ಕ ಅಧಿಕಾರಿಗಳೇ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಅವರು ಪೂರ್ವಜನ್ಮದಲ್ಲಿ ಪುಣ್ಯಮಾಡಿದ್ದರು. ಏಕೆಂದರೆ ಅವರು ಏನೂ ಕೆಲಸಮಾಡದೇ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳು ಎಂದು ನನಗೆ ಗೊತ್ತಾಗಿದೆ. ಅವರು ನಿಜವಾಗಿಯೂ ಮೂರುಕಾಸಿನ ಕೆಲಸವನ್ನು ಮಾಡುವುದಿಲ್ಲ. ಬೀಜ ಹಂಚತಕ್ಕ ಕಾಲದಲ್ಲಿ ಬೀಜಗಳನ್ನು ಸರಬರಾಯಿ ಮಾಡುವುದೆಷ್ಟೋ ಅಷ್ಟು ಕೆಲಸ ಮಾಡಿದರೆ ಮುಗಿಯಿತು. ಬಾಕಿ ದಿವಸಗಳಲ್ಲಿ ಸುಖವಾಗಿ ಕಾಲ ಕಳೆದುಕೊಂಡು 30 ದಿವಸ ಆದಕೂಡಲೇ ಸಂಬಳ ತೆಗೆದುಕೊಳ್ಳುತ್ತಾರೆ. ಇಂಥ ಅನ್ಯಾಯ ಯಾವ ಇಲಾಖೆಯಲ್ಲೂ ನಡೆಯುತ್ತಿಲ್ಲ ಎಂದು ಹೇಳುತ್ತೇನೆ. ಒಂದು ತಾಲ್ಲೂಕಿನಲ್ಲಿ ವ್ಯವಸಾಯದ ಇಲಾಖೆಯ ಆಫೀಸರು 10-12 ಜನ ಇರುತ್ತಾರೆ. ಮೂರು ಕಾಸಿನ ಕೆಲಸ ಮಾಡುವುದಿಲ್ಲ! 4-5 ವರ್ಷದ ಹಿಂದೆ ಮಾಡುತ್ತಾ ಇದ್ದ ಕೆಲಸ ಎಂದರೆ ಗುಳ ಮಾರುವುದು, ಗೊಬ್ಬರ ಮಾರುವುದು ಅದೂ ಕೂಡ ಈಗ ತಪ್ಪಿಹೋಗಿದೆ. ನಿರಾಯಾಸವಾಗಿ ಯಾವ ಕೆಲಸವೂ ಇಲ್ಲದೆ ತಿರುಗಾಡಿಕೊಂಡಿದ್ದಾರೆ. ಈ ಅನ್ಯಾಯವನ್ನು ನಮ್ಮ ಸರ್ಕಾರದವರು ಆದಷ್ಟು ಜಾಗ್ರತೆ ಸರಿಪಡಿಸಬೇಕು. ಅವರುಗಳು ದಿನವಹಿ ಇಷ್ಟಿಷ್ಟು ಕೆಲಸಮಾಡಿದ್ದಾರೆ ಎಂಬುದನ್ನು ಬರೆದಿಡುವ ಡೈರಿ ಇಟ್ಟಿದ್ದರೂ ಸಹ ಸುಳ್ಳು ಇಟ್ಟಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಡೈರಿ ಬರೆಯುತ್ತಾರೆ ಎಂಬುದು ಖಂಡಿತವಾದ ಮಾತು. ಆದುದರಿಂದ ಸರ್ಕಾರದವರು ಯಾವ ತರಹದಲ್ಲಿ ಅವರಿಂದ ಕೆಲಸ ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ಪರ್ಯಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಆದಷ್ಟು ಜಾಗ್ರತೆ ಅವರಿಗೆ ಹೆಚ್ಚಿನ ಕೆಲಸ ಕೊಟ್ಟು ತನ್ಮೂಲಕ ಜನಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ತೀವ್ರವಾಗಿ ಆಲೋಚನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಕೆಲವು ಕಡೆ ಸರ್ಕಾರದವರು ಸಂಶೋಧನಾ ಕೇಂದ್ರಗಳನ್ನು ತೆರೆದಿದ್ದಾರೆ. ಅರಸೀಕೆರೆಯಲ್ಲಿ ಒಂದು ಸಂಶೋಧನಾ ಕೇಂದ್ರ ಇದೆ. ಅಲ್ಲಿ ನಾಲ್ಕೈದು ವರ್ಷದಿಂದ ಇದುವರೆಗೂ ಒಬ್ಬ ಅಧಿಕಾರಿ ಇದ್ದರು. ಅವರು ಎಂ.ಎಸ್.ಸಿ. ಪಾಸ್ ಮಾಡಿದವರು. ಎಂ.ಎಸ್.ಸಿ. ಪಾಸ್ ಮಾಡಿದ ಒಬ್ಬ ಅಧಿಕಾರಿಗಳು ವ್ಯವಸಾಯದ ಇಲಾಖೆಯ ಸಂಶೋಧನಾ ಕೇಂದ್ರದಲ್ಲಿದ್ದರೆ ಎಷ್ಟುಮಟ್ಟಿಗೆ ಸಂಶೋಧನೆ ನಡೆಯುತ್ತದೆ. ಅದರಿಂದ ವ್ಯವಸಾಯದಲ್ಲಿ ನಿರತರಾದ ಜನಕ್ಕೆ ಎಷ್ಟುಮಟ್ಟಿನ ಅನುಕೂಲವಾದೀತು ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈಗೇನೋ ಕೆಲವು ದಿವಸಗಳ ಹಿಂದೆ ಬದಲಾಯಿಸಿದ್ದೀರಿ.

ಡಾ॥ ಆರ್. ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಬದಲಾಯಿಸಿ ಒಂದು ವರ್ಷ ಆಯಿತು.

ಶ್ರೀ ಬಿ. ಚಿಕ್ಕಣ್ಣ.—ಈ ಸಂಶೋಧನಾ ಕೇಂದ್ರಗಳಲ್ಲಿ ಯಾವ ಸಂಶೋಧನೆಯನ್ನು ನಡೆಸುತ್ತಾರೋ ಗೊತ್ತಿಲ್ಲ. ರೈತರು ಮೊದಲು ಎಷ್ಟು ಫಸಲು ತೆಗೆಯುತ್ತಾ ಇದ್ದರೋ ಅಷ್ಟೇ ಇವೊತ್ತು ಕೂಡ ಬೆಳೆಯುತ್ತಾ ಇದ್ದಾರೆ. ಈ ಕೇಂದ್ರಗಳಿಗೆ ಕೊಟ್ಟಿರತಕ್ಕ ಫಲವತ್ತಾದ ಭೂಮಿಯನ್ನು ಅವರಿಂದ ತೆಗೆದುಕೊಂಡು ಜಮೀನಿಲ್ಲದವರಿಗೆ ಕೊಟ್ಟರೆ ಅವರೇ ಎಷ್ಟೋ ಚೆನ್ನಾಗಿ ಬೆಳೆ ಮಾಡಿಕೊಳ್ಳುತ್ತಾರೆ. ರೈತ ಎಲ್ಲಿ ಚೆನ್ನಾಗಿ ಬೆಳೆದಿದ್ದನೋ ಅಲ್ಲಿಗೆ ಕರೆದುಕೊಂಡುಹೋಗಿ ಮಂತ್ರಿಗಳ ಕಣ್ಣಿಗೆ ಮಣ್ಣು ಎರಚಿ ಇದು ನಮ್ಮ ಸಂಶೋಧನೆಯಿಂದ ಆದುದು ಎಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಾರೆ. ಇಂಥ ಅನ್ಯಾಯವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಖಂಡಿತವಾಗಿಯೂ ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ.

ಶ್ರೀ ಚಂದ್ರಶೇಖರಯ್ಯನವರು ವ್ಯವಸಾಯದ ಇಲಾಖೆಯಲ್ಲಿ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳು ರೈತರಿಗೆ ಸಿಕ್ಕುವುದು ತುಂಬ ಕಷ್ಟವಾಗಿದೆ ಎಂದು ಹೇಳಿದರು. ಇದೇ ಸಂಬಂಧದಲ್ಲಿ ಒಂದು ಖೋತಾ ನಿರ್ಣಯವನ್ನು ನಾನು ಹಿಂದೆ ಕಳುಹಿಸಿದ್ದೆ. ದೇವರ ದಯೆಯಿಂದ ಮತ್ತು ರೈತರ ಪುಣ್ಯದಿಂದ ಎಂದು ಕಾಣುತ್ತದೆ. ಮಂತ್ರಿಗಳಿಗೆ ತಿಳಿಸಿ ಒತ್ತಾಯಮಾಡಿದಮೇಲೆ ಮೊನ್ನೆತಾನೆ ಡೈರೆಕ್ಟರವರು ಅದನ್ನು ಒಂದು ಸ್ತಿಮಿತಕ್ಕೆ ತಂದಿದ್ದಾರೆ. ಆದರೂ ಕೂಡ ಇನ್ನೂ ಬಹಳ ತೊಂದರೆ ಇದೆ. ಒಂದು ಗುಳ ತೆಗೆದುಕೊಳ್ಳಬೇಕೆಂದರೆ ರೆವಿನ್ಯೂ ಇನ್ಸ್‌ಪೆಕ್ಟರ ಪರ್ಮಿಷನ್ ತೆಗೆದುಕೊಳ್ಳಬೇಕು. ಒಬ್ಬ ರೈತ ಒಂದು ಹಳ್ಳಿಯಿಂದ ಆ ಇನ್ಸ್‌ಪೆಕ್ಟರು ಇರುವ ಜಾಗಕ್ಕೆ ಹೋಗಿ ಅವನಿಗೆ ಲಂಚ ಕೊಟ್ಟು ನಾಲ್ಕು ಆಣೆ ಗುಳಕ್ಕೆ ನಾಲ್ಕು-ಐದು ರೂಪಾಯಿ ಖರ್ಚುಮಾಡಿ ಅದನ್ನು ತೆಗೆದುಕೊಂಡು ಹೋಗಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ನಾವು ಯೋಚನೆಮಾಡಬಹುದು. ಎಂಟು ದಿವಸದಿಂದ ಬಲವಂತಮಾಡಿದ ಮೇಲೆ ಮೊನ್ನೆತಾನೆ ಡೈರೆಕ್ಟರವರು ಆ ಆರ್ಡರನ್ನು ವಾಪಸು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರದವರಿಗೂ ಮತ್ತು ಡೈರೆಕ್ಟರವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈರೀತಿ ರೈತರಿಗೆ ಆಗತಕ್ಕ ತೊಂದರೆಗಳನ್ನು ಆದಷ್ಟು ನಿಗಾ ಕೊಟ್ಟು ಬಹಳ ತೀವ್ರವಾಗಿ ಪರಿಹರಿಸಬೇಕೆಂದು ಹೇಳುತ್ತಾ ಇದ್ದೇನೆ. ಈ ಸಭೆಯಲ್ಲಿರುವ ಮಾನ್ಯಮಂತ್ರಿಗಳಾಗಿರತಕ್ಕ ಶ್ರೀ ನಾಗನಗೌಡರು ರೈತರ ಮನೆತನದಲ್ಲಿ ಹುಟ್ಟಿದವರು, ಬಹಳ ತಜ್ಞರಾದಂಥವರು, ಅಂಥವರ ಕೈಯಲ್ಲಿ ಅಧಿಕಾರವಿರುವಾಗ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ದೇಶದ ಮೇಲೆ ಪರಿಣಾಮಕಾರಿಯಾಗುವಂಥ ಏರ್ಪಾಡನ್ನು ಮಾಡುತ್ತಾರೆ ಎಂದು ಭಾವಿಸುತ್ತೇನೆ.

ಇದಕ್ಕೆ ಸಂಬಂಧಪಟ್ಟ ಹಾಗೆ, ರೈತ ತಾನು ಬೆಳೆದ ಆಹಾರ ಸಾಮಗ್ರಿಗಳನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋಗಿ ಮಾರಿ ಹೆಚ್ಚಿನ ಬೆಲೆ ಸಂಪಾದನೆಮಾಡಲು ಅನುಕೂಲವಾಗುವಂತೆ ಕೆಲವುಕಡೆ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತಂದು ಸಹಾಯಮಾಡಿಕೊಟ್ಟಿದ್ದೀರಿ. ಅದೇ ರೀತಿ ದೇಶಾದ್ಯಂತ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ

(ಶ್ರೀ ಬಿ. ಚಿಕ್ಕಣ್ಣ).

ತಂದು ಆ ಸೌಕರ್ಯವನ್ನು ಏರ್ಪಡಿಸಲು ಆದಷ್ಟು ಜಾಗ್ರತೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಕೆಲವುಕಡೆ ಈ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತಂದು ಇನ್ನು ಕೆಲವುಕಡೆ ಜಾರಿಗೆ ತರದೇ ಇದ್ದರೆ ತಮ್ಮ ಉದ್ದೇಶ ಏನಿದೆಯೋ ಅದು ಫಲಕಾರಿಯಾಗುವುದಿಲ್ಲ. ಗೋಡೌನ್‌ಗಳನ್ನು ಕಟ್ಟಿಸಿಕೊಟ್ಟು ಆಯಾ ಜಿಲ್ಲೆಯಿಂದ ಬರುವ ಸಮಸ್ತ ಆಹಾರ ಪದಾರ್ಥಗಳನ್ನು ಅಲ್ಲಿ ಸ್ಟಾಕ್ ಮಾಡುವಹಾಗೆ ಏರ್ಪಾಡು ಮಾಡಿಕೊಡಬೇಕು. ಹಾಗಲ್ಲದೇ ಈಗಿರುವ ಪರಿಸ್ಥಿತಿಯಲ್ಲಿ ರೈತನಿಗೆ ಯಾವ ಅನುಕೂಲವೂ ಆಗುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಮಾಡುವುದರಿಂದ ಯಾರಿಗೂ ಲುಕ್ಸಾನು ಇಲ್ಲ. ವರ್ಷಕ್ಕೆ 10-20 ಸಾವಿರ ರೂಪಾಯಿ ವರಮಾನ ಇದೆ. ಇಷ್ಟು ವರಮಾನ ಇದ್ದೂಕೂಡ ಸರ್ಕಾರದವರು ಏಕೆ ಹಿಂಜರಿಯುತ್ತಾರೋ ಗೊತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ದೇಶಾದ್ಯಂತ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತರಬೇಕೆಂದು ಸರ್ಕಾರದವರಿಗೆ ಸಲಹೆಮಾಡುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ವ್ಯವಸಾಯದ ಇಲಾಖೆಯ ಮೇಲೆ ಮಾತನಾಡುತ್ತಾ ವ್ಯವಸಾಯಗಾರರು ಬೆಳೆವಂಥಾ ಪದಾರ್ಥಗಳನ್ನು ಮಾರ್ಕೆಟ್‌ನಲ್ಲಿ ಮಾರುವುದಕ್ಕೆ ಸೌಲಭ್ಯಗಳನ್ನು ಏರ್ಪಾಡುಮಾಡಿ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಗ್ರಾಮಾಂತರಗಳಲ್ಲಿ ಬೆಳೆ ಬೆಳೆಯುವುದು ಸುಲಭ, ಆದರೆ ಬೆಳೆದಂಥ ಪದಾರ್ಥಕ್ಕೆ ಮಾರ್ಕೆಟ್‌ನಲ್ಲಿ ಸರಿಯಾದ ಬೆಲೆ ಸಿಕ್ಕುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದಂಥ ವಿಷಯ. ಎಲ್ಲಾ ಕಡೆಯಲ್ಲೂ ಮಾರ್ಗ ಸೌಕರ್ಯ ಮತ್ತು ವಾಹನ ಸೌಕರ್ಯ ಇದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಮಾರ್ಕೆಟ್ಟಿನ ವ್ಯವಸ್ಥೆಯನ್ನು ಮಾಡುವುದು ಅತ್ಯವಶ್ಯಕ ಎಂದು ಹೇಳುತ್ತೇನೆ.

ಅಷ್ಟೇ ಅಲ್ಲದೆ ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲೂ ಗೋಡೌನಿನ ವ್ಯವಸ್ಥೆಯನ್ನು ಮಾಡಿ, ಗ್ರಾಮಾಂತರಗಳಿಂದ ಬಂದ ಆಹಾರ ಪದಾರ್ಥಗಳನ್ನು ಅಲ್ಲಿ ಸ್ಟಾಕ್ ಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕು. ಇಲ್ಲದೇ ಇದ್ದರೆ ಕೆಲವು ದೊಡ್ಡ ದೊಡ್ಡ ಸಂತೆಗಳು ಇವೆ. ಆ ಸಂತೆಗಳಲ್ಲಿ ಬಹಳ ಅನೀತಿಯುತವಾಗಿ ವ್ಯಾಪಾರ ನಡೆಯುತ್ತದೆ. ಆ ರೀತಿ ಆಗದಂತೆ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಡಿಸುವುದು ಉತ್ತಮ. ಹಳ್ಳಿಗಳಿಂದ ದೊಡ್ಡ ದೊಡ್ಡ ಪಟ್ಟಣಗಳಿಗೆ ಬಂದು ತಮ್ಮ ಆಹಾರ ಪದಾರ್ಥಗಳನ್ನು ಮಾರಾಟ ಮಾಡಬೇಕೆಂದರೆ ವ್ಯವಸಾಯಗಾರರಿಗೆ ಬಹಳ ಕಷ್ಟ ಮತ್ತು ಹತ್ತಾರುಕಡೆ ಖರ್ಚು ಹೆಚ್ಚಾಗುತ್ತದೆ. ರೈತ ಬೆಳೆ ಮಾಡುವಾಗಲೇ ಎಷ್ಟೋ ಕಷ್ಟ ಇದೆ, ಎಷ್ಟೋ ನಷ್ಟವಾಗುತ್ತದೆ. ಕಳ್ಳಕಾಕರ ಕಾಟ ಅಲ್ಲದೆ ಅನೇಕ ಪ್ರಾಣಿಗಳ ಕಾಟವೂ ಇದೆ. ಕೋತಿಗಳು, ಇಲಗಳು ಮತ್ತು ಆನೆಗಳು ಇವು ಮೂರನ್ನು ಸರಿಯಾದ ಮಾರ್ಗದಲ್ಲಿ ನೋಡಿಕೊಳ್ಳದಿದ್ದರೆ ದೇಶದಲ್ಲಿ ಎಷ್ಟು ಉತ್ಪನ್ನ ಆಗುತ್ತದೆಯೋ ಆ ಉತ್ಪನ್ನ ಮನುಷ್ಯರಿಗೆ ಬರುವುದಕ್ಕೆ ಬದಲಾಗಿ ಪ್ರಾಣಿಗಳಿಗೆ ಹೋಗುತ್ತದೆ. ಆದ್ದರಿಂದ ಬೆಳೆದ ಆಹಾರದ ಮೇಲೆ ಪ್ರಾಣಿಗಳಿಗೂ ಮನುಷ್ಯರಿಗೂ ಕಾಂಪಿಟಿಷನ್ ಬೀಳುತ್ತದೆ. ಗ್ರಾಮಾಂತರದಲ್ಲಿ ಬೆಳೆದ ದವಸವನ್ನು ಆತ ತಂದು ಎಲ್ಲಿ ಇಡುತ್ತಾನೆಯೋ ಅಂಥ ಸ್ಥಳಗಳಲ್ಲಿ ಇಲಗಳ ಕಾಟ ಇಲ್ಲದಂತೆ ನೋಡಿಕೊಳ್ಳುವುದಕ್ಕೆ ಪ್ರಚಾರಮಾಡಿ ಔಷಧಗಳನ್ನು ಹಂಚುವ ಏರ್ಪಾಡನ್ನು ದೇಶಾದ್ಯಂತ ಮಾಡಬೇಕು. ಹಾಗೆ ಮಾಡದಿದ್ದರೆ ಬಹುಭಾಗದ ಉತ್ಪನ್ನ ಕಡಿಮೆಯಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಪಟ್ಟಣಗಳಲ್ಲಿ ಕೋತಿಗಳು ಅಷ್ಟಾಗಿ ಬರುವುದಿಲ್ಲ. ಇಲ್ಲಿಗೆ ಬಂದರೂ ಹಿಡಿದು ಓಡಿಸುತ್ತಾರೆ. ಅವು ಹಳ್ಳಿಗಳಿಗೆ ಬಂದು ಸೇರುತ್ತವೆ. ಅದರಿಂದಾಗತಕ್ಕ ಅನಾಹುತ ಎಷ್ಟೆಂಬುದನ್ನು ಈಗ ಹೆಚ್ಚು ವಿಷದವಾಗಿ ಹೇಳುವುದು ಅನಾವಶ್ಯಕ. ಆನೆಗಳ ಕಾಟ ತತ್ರಾಪಿ ಚಾಮರಾಜನಗರದಲ್ಲಿ ಬಹಳ ಜಾಸ್ತಿ.

9 A.M.

ಈಗಾಗಲೇ ತಮಗೆ ರಿಪೋರ್ಟ್ ಬಂದಿರಬಹುದು. ಸುಮಾರು 10-12 ದಿವಸದಲ್ಲಿ 8 ಎಕರೆ ಜಾಗದಲ್ಲಿದ್ದ ಸಾವಿರಾರು ತೆಂಗಿನ ಗಿಡಗಳನ್ನು, ಅದರಲ್ಲೂ, ಒಳ್ಳೆಯ ಫಲಕ್ಕೆ ಬಂದಿರುವ ಗಿಡಗಳನ್ನು, ಆನೆಗಳು ಕಿತ್ತು ಎಸೆದುವು. ಇಂಥ ಸ್ಥಳಗಳಲ್ಲಿ ಖೆಡ್ಡ ಆಪರೇಷನ್‌ಗಳನ್ನು ಏರ್ಪಾಡುಮಾಡಿ ಆನೆಗಳನ್ನು ಹಿಡಿದು ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ರೈತನಿಗೆ ಇನ್ನೊಂದು ತೊಂದರೆಯಿದೆ. well subsidy ಕೊಡಬೇಕೆಂದು ತಮ್ಮಲ್ಲಿ ವಿಧಾಯಕವಾಗಿದೆ, ಆದರೆ ತಾಲ್ಲೂಕಿಗೆ 1,000 ರೂಪಾಯಿಗಳನ್ನು ಮಾತ್ರ ಕೊಡುತ್ತೀರಿ. ಈ ಹಣದಲ್ಲಿ ಒಂದು ಬಾವಿಗೆ 250 ರೂಪಾಯಿಗಳನ್ನು ಮಾತ್ರ ಕೊಡಬೇಕೆಂದಿದೆ. Favouritism ಇರತಕ್ಕ ಯಾರೋ ನಾಲ್ಕು ಮಂದಿಗೆ ಈ ಹಣ ಸಿಕ್ಕುತ್ತದೆ. ಅಷ್ಟೆ. ಆದರೆ ವಾಸ್ತವವಾಗಿ ಯಾವ ಸ್ಥಳದಲ್ಲಿ ತಾನೆ 250 ರೂಪಾಯಿಗೆ ಒಂದು ಬಾವಿಯನ್ನು ತೆಗೆಯಬಹುದು ! ಏನೋ ಕೆಲವು ಗುಂಡಿಗಳನ್ನು ತೆಗೆಯಿಸಬಹುದು ಅಷ್ಟೆ. ಹಳೆಯ ಬಾವಿಗಳನ್ನೇ ಹೂಳು ತೆಗೆಯಿಸಿ ಹಣ ಪಡೆಯುತ್ತಾರೆ ಅಷ್ಟೆ. ಆದ್ದರಿಂದ ನಿಮ್ಮ ಉದ್ದೇಶ ನಿಜವಾಗಿ ಸಾರ್ಥಕವಾಗಬೇಕಾದರೆ ಬಾವಿಗಳಿಗೆ ಆಗಬೇಕಾದ ಹಣದಲ್ಲಿ ಅರ್ಧದಷ್ಟನ್ನಾದರೂ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ನೀವು ಏರ್ಪಡಿಸಿರುವ experimental stationಗಳ ವಿಷಯವಾಗಿ ಒಂದು ಮಾತು ಹೇಳುತ್ತೇನೆ. ಇವು ಮುಖ್ಯವಾಗಿ ಸ್ವಯಂ ಪರಿಪೂರ್ಣತೆಯನ್ನು ಹೊಂದಬೇಕು. ನೀವು ಸಾವಿರಗಟ್ಟಲೆ ಖರ್ಚುಮಾಡಿ ಅದಕ್ಕೆ ತಕ್ಕಷ್ಟು ಪ್ರತಿಫಲ ಹೊಂದದೆ ಇದ್ದರೆ ಏನು ಪ್ರಯೋಜನ ! ಹರಪನಹಳ್ಳಿ ಫಾರಂ ತೆಗೆದುಕೊಂಡರೆ, 1950 ನೆಯ ಇಸವಿಯಲ್ಲಿ ತಾವು 8,000 ಚಿಲ್ಲರೆ ಖರ್ಚು ಮಾಡಿರುವುದಕ್ಕೆ ಪ್ರತಿಯಾಗಿ ನಿಮಗೆ ಬಹಳ ಕಡಮೆ, ಕೇವಲ 2,000 ರೂಪಾಯಿಗಳು ಬಂದಿವೆ. ಹೀಗಾಗಿರುವುದಕ್ಕೆ ಏನು ಲೋಪವಿದೆಯೆಂಬುದನ್ನು ಕಂಡುಹಿಡಿದು ತಕ್ಕ ಕಾರ್ಯಕ್ರಮ ಕೈಕೊಂಡಿದ್ದೀರಾ ! ಈ ಸಾರಿ ಸ್ವಲ್ಪ ಹೆಚ್ಚಿಗೆ ಬಂದಿದೆ. ಹಿಂದೆ ಕಡಮೆ ಬಂದಿದ್ದಕ್ಕೂ ಈ ಸಾರಿ ಹೆಚ್ಚಿಗೆಯಾದ್ದಕ್ಕೂ ಕಾರಣವನ್ನು ಕಂಡುಹಿಡಿಯಬೇಕು. ಇನ್ನೂ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿರಬಹುದು. ಆದ್ದರಿಂದ ಇಂಥ experimental stationಗಳ ಬಗ್ಗೆ ಒಂದು ಕಮಿಟಿಮಾಡಿ ಅವರ ಸಲಹೆಯ ಮೇಲೆ ನಡೆಯುವಂತೆ ಮಾಡುವುದು ಒಳ್ಳೆಯದೆಂದು ನಾನು ಸೂಚಿಸುತ್ತೇನೆ.

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಸ್ವಾಮಿ, ಅಗ್ರಿಕಲ್ಚರಲ್ ಇಲಾಖೆಯ ವಿಷಯದಲ್ಲಿ ಇದುವರೆಗೆ ಮೆಂಬರುಗಳಿಂದ ಬಂದಿರುವ ಟೀಕೆಗಳನ್ನು ನಾನೂ ಕೂಡ ಅನುಮೋದಿಸುತ್ತೇನೆ. ಈ ಇಲಾಖೆಗೆ ಇತ್ತೀಚೆಗೆ ಬಹಳ ಹಣ ಖರ್ಚಾಗುತ್ತಿದೆ.

ನಾನು ಆಫೀಸಿನಲ್ಲಿರುವಾಗ್ಗೆ ವರ್ಷಕ್ಕೆ 6 ಲಕ್ಷ-7 ಲಕ್ಷ ರೂಪಾಯಿಗಳ ವರೆಗೆ ಖರ್ಚು ಮಾಡುತ್ತಿದ್ದೆವು. ಆದರೆ, ಈಗಿನ ಬಡ್ಜೆಟ್ ಪ್ರಕಾರ 70 ಲಕ್ಷ ರೂಪಾಯಿಗಳ ವರೆಗೂ ಪ್ರತಿವರ್ಷವೂ ಖರ್ಚಾಗುತ್ತಿದೆ. ಆದರೆ ಎಷ್ಟು ಹಣ ಖರ್ಚು ಮಾಡುತ್ತಿದ್ದರೂ ಹಣಕ್ಕನುಗುಣವಾಗಿ ರೈತನಿಗೆ ಪ್ರತಿಫಲ ದೊರೆಯುತ್ತಿಲ್ಲವೆಂಬ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಸರ್ಕಾರದವರು ಸದುದ್ದೇಶದಿಂದ ಹೆಚ್ಚಿಗೆ ಹಣ ಖರ್ಚು ಮಾಡಬಹುದು. ಆದರೇನೋ ಆ ಇಲಾಖೆಯಿಂದ ರೈತರಿಗೆ ಅಷ್ಟು ಪ್ರಯೋಜನವಾಗುತ್ತಿಲ್ಲ.

ಎರಡನೆಯದಾಗಿ ಈ ಇಲಾಖೆಯಲ್ಲಿ wastage ಬಹಳವಾಗಿದೆ. ಹೋದ ವರುಷ ಇದೇ ವಿಷಯವನ್ನು ಪ್ರಸ್ತಾಪಿಸಿದೆ. ಲಕ್ಷಾಂತರ ರೂಪಾಯಿಗಳನ್ನು ಕೊಂಡು ತಂದು ಬುಲ್‌ಡೋಸರುಗಳನ್ನು ಟ್ರಾಕ್ಟರುಗಳನ್ನು ತಂದುಕೊಟ್ಟರು ಮ.ರಿಯಪ್ಪನವರು. ಆದರೆ ಈ ಟ್ರಾಕ್ಟರುಗಳ ಗತಿ ಏನಾಯಿತು? ಅವುಗಳ ಹೆಸರು ಕೂಡ ಈಗಿಲ್ಲ. ವರ್ಷ ವರ್ಷವೂ ಟ್ರಾಕ್ಟರುಗಳ ಹೆಸರು ಬರುತ್ತಿದ್ದು ಆ ಮಂತ್ರಿಗಳ ಹೆಸರನ್ನು ಜ್ಞಾಪಕಕ್ಕೆ ತರುತ್ತಿದ್ದಂಥಾದ್ದು ಈಗ ಆ ಹೆಸರೂ ಇಲ್ಲದಹಾಗಾಯಿತು. ಹೀಗೆ 50-60 ಲಕ್ಷ ರೂಪಾಯಿಗಳ ನಷ್ಟವಾಯಿತು. Lame ducksನಂತೆ ಈಗಿವೆ. ಹೋದ ವರ್ಷ ಕೇಳಿದಾಗ 150 ಟ್ರಾಕ್ಟರುಗಳಲ್ಲಿ 120 ಟ್ರಾಕ್ಟರುಗಳು sick ಆಗಿವೆಯೆಂದು ಹೇಳಿದರು ಈಗ ಆಗ sick ಆಗಿರುವಂತವು ಸತ್ತುಹೋದುವೇ ಅಥವಾ ಇನ್ನೂ ಉಳಿದಿವೆಯೋ ಎಂಬುದನ್ನ ಈ ಸಭೆಯಲ್ಲಿ ತಿಳಿಸಬೇಕೆಂದು ಕೇಳುತ್ತೇನೆ.

ಆದ್ದರಿಂದ ನಾನು ಹೇಳುವುದೇನೆಂದರೆ, ಇಂಥ ideological schemeಗಳನ್ನು ತೆಗೆದುಕೊಳ್ಳುವುದರಿಂದ ಸರ್ಕಾರದವರಿಗೆ ಎಷ್ಟು ನಷ್ಟ, ರೈತರಿಗೆ ಎಷ್ಟು ನಷ್ಟ!

ಆಮೇಲೆ ಬಡ್ಜೆಟ್ಟಿನಲ್ಲಿ 11 ಲಕ್ಷ ರೂಪಾಯಿಗಳನ್ನು Value of shortages and losses on account of distribution of seeds and manures to raiyats in written off ಎಂದು ಹೇಳಿದ್ದಾರೆ. So, it is not subsidy. We are asked to vote Rs. 14,60,000. I have been representing to Government that this Department has been incurring a good deal of loss and we have also pointed out that the system of distribution of manure is not free from doubt; and there has been good deal of flaws and shortages. I am afraid the Government did not take proper care nor has it taken any step to prevent such leakages and losses. Who is responsible for this loss; have they fixed any responsibility on any; have they made any attempt to recover this amount? In my opinion, I must hold the Minister in-charge of the portfolio to be responsible as well as the officers concerned in this Department. I think this amount requires to be recovered from the Minister concerned. 14 lakhs of rupees is not an ordinary amount. In these days of financial stringency, certainly, Government cannot afford to incur such a heavy loss. After all on whom does the loss fall? It is on the common man. The Government management, I must say, has been very lax, irresponsible and wasteful. This policy of Government really deserves to be condemned. So, I would like to know how this loss was incurred; is it a continuing loss or is it a loss for one year? If it is continuing loss, it covers a number of years. Why did not the Government arrange for auditing the accounts of the Department, or for the timely scrutiny of the accounts; and why did they not take effective steps to check this loss? They have allowed the loss to accumulate and so much of money has been made to go unaccounted for. This is really a very sad state of affairs. So, I demand an explanation from the Government as to how they are going to reconcile this loss and why did they allow such a leakage to occur.

Another thing which I must submit with great regret is, though we have been urging the Government to reduce the expenditure, to minimise the expenditure, Government is still persisting in inflating the expenditure and burdening the expenditure on the people. Last year, a provision of Rs. 58 lakhs was made and under the revised estimate it was Rs. 56 lakhs and in this year's budget Rs. 70 lakhs has been provided. Thereby there has been an increase in the expenditure to the extent of Rs. 12 lakhs. This is perhaps due to the loss that the Government has incurred and for which they want money. Instead of asking us to vote so much amount, they should have taken every care to reduce the expenditure. The Government is still persisting to inflate the expenditure and commit the Government to more and more expenditure. On these grounds, Sir, I oppose the demand.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ಸ್ವಾಗತಿಸುತ್ತಾ, ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಹೀಗೆ ಸ್ವಾಗತಿಸುವಾಗ, ಮಂತ್ರಿಗಳಲ್ಲಿ ಒಂದು ರೀತಿಯ ಮನೋಭಾವವಿರುತ್ತದೆ, ಅದರ ವಿಷಯ ಹೇಳಬೇಕಾಗಿದೆ. ನಮ್ಮ ದುರದೃಷ್ಟವಶಾತ್ ನಮ್ಮ ವ್ಯವಸಾಯ ಸಚಿವರು, ನಾವು ಯಾವುದಾದರೂ ಲೋಪದೋಷಗಳನ್ನು ಸರ್ಕಾರದ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಮುಂದೆ ತಿಳಿಸಿ ಅದನ್ನು ಸರಿಪಡಿಸಬೇಕೆಂದು ಹೇಳಿದರೆ, ಜಾಗ್ರತೆ ಮಾಡುತ್ತೇನೆಂಬು ಹೇಳುತ್ತಾರೆ; ಆದರೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಮಾಡುವುದಿಲ್ಲ. ಅವರಿಗೆ ವ ರವು ಜಾಸ್ತಿ ಎಂದು ಕಾಣುತ್ತದೆ, ಅದರಿಂದ ಅವರು ಹೀಗೆ ಮಾಡುತ್ತಾರೆ. ಹೋದಸಾರಿ ಹೇಳಿದ ಕೆಲವು ವಿಷಯಗಳನ್ನ 'ನಾನು ಜ್ಞಾಪಕ ಇಟ್ಟುಕೊಂಡಿದ್ದೇನೆ, ಮಾಡುತ್ತೇನೆ' ಎಂದು ಹೇಳಿದರು. ಹೀಗೆ ಪದೇಪದೇ ಹೇಳುವುದರಲ್ಲಾಗಿದೆಯೇ ಹೊರತು ಕಾರ್ಯತಃ ಮಾಡುವುದಿಲ್ಲ. ನಮಗೇನು ತೊಂದರೆಗಳಿವೆ ಎಂಬುದನ್ನು ಸರ್ಕಾರದ ಮುಂದಿಡುತ್ತೇವೊ ಅವುಗಳನ್ನು ನಿವಾರಿಸಲು ತಕ್ಕ ಕಾರ್ಯ ಸರ್ಕಾರ ನಡೆಸುತ್ತಿಲ್ಲವಲ್ಲಾ ಎಂಬ ದೃಷ್ಟಿಯಿಂದ ಈಗ ನಾನು ಕೆಲವು ವಿಷಯಗಳನ್ನ ಸಭೆಯ ಮುಂದಿಡಬೇಕೆಂದಿಚ್ಛಿಸುತ್ತೇನೆ.

ಶ್ರೀಮಾನ್ ಇಮಾಂರವರು 'ನಾವು ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಬಾಬಿಗೆ ವರ್ಷಕ್ಕೆ ಆರೇಳು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೆವು, ಈಗ ಎಪ್ಪತ್ತೈದು ಲಕ್ಷ ಖರ್ಚು ಮಾಡುತ್ತಿದ್ದಾರೆ' ಎಂದು ಹೇಳಿದರು. ಆದರೆ ಅವರಿಗೂ ಗೊತ್ತಿರುವಂತೆ, ಆಗ ಜನರಿಗೆ ವ್ಯವಸಾಯ ಇಲಾಖೆ ಇದೆಯೋ ಇಲ್ಲವೋ ಎಂಬುದೇ ಗೊತ್ತಿರಲಿಲ್ಲ. ಈಗಲಾದರೂ 75 ಲಕ್ಷ ಖರ್ಚು ಮಾಡಿದರೂ ಎಷ್ಟೋ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ ಎಂದು ಹೇಳುವಾಗ ಇದರಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಸರ್ಕಾರ ಸರಿಪಡಿಸಲಿ ಎಂಬ ಉದ್ದೇಶದಿಂದ ಕೆಲವು ಅಂಶಗಳನ್ನು ಹೇಳುವುದು ಸ್ವಾಭಾವಿಕ. ಎಷ್ಟುಮಟ್ಟಿಗೆ ಪ್ರಗತಿಯಾದರೂ ಅಷ್ಟುಮಟ್ಟಿಗೆ ಮನವಿಗಳೂ ಹೆಚ್ಚುವುದು ಸ್ವಾಭಾವಿಕ. ಆದರೂ ಇರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಬುಲ್‌ಡೋಜರುಗಳು ಮತ್ತು ಟ್ರ್ಯಾಕ್ಟರುಗಳ ವಿಚಾರ ಹೇಳಿದರು. ಹಿಂದೆ ಯಾವ ಯಾವ ಡಿಸ್ಟ್ರಿಕ್ಟುಗಳಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ನಾನು ಕೇಳಿದ್ದೆ. ಇವುಗಳನ್ನು ಹಂಚತಕ್ಕ ಕಾಲದಲ್ಲಿ ಎಲ್ಲಿ ಅಗತ್ಯ ಜಾಸ್ತಿ ಇದೆಯೋ ಅಲ್ಲಿಂದ ಮನವಿ ಬಂದರೆ ಅದನ್ನು ಪರಿಶೀಲಿಸಿ ಅಲ್ಲಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಿದ್ದರು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಅಗತ್ಯವಿದೆ ಎಂಬುದು ಅವರಿಗೂ ಗೊತ್ತು. ಆದರೆ ಅಲ್ಲಿ ಹೆಚ್ಚು ಕೆಲಸವನ್ನು ಸಾಧಿಸಿಲ್ಲವೆಂದು ಹೇಳಬೇಕಾಗಿದೆ. ಎರಡನೆಯದಾಗಿ ವ್ಯವಸಾಯಾಭಿವೃದ್ಧಿಯಾಗಬೇಕೆಂಬ ಅಭಿಲಾಶೆಯುಳ್ಳ ಶ್ರೀಮಾನ್ ಮರಿಯಪ್ಪನವರಿದ್ದ ಕಾಲದಲ್ಲಿ ಏನು ರೇಟಿತ್ತೋ ಈಗ ಅದಕ್ಕ ರಷ್ಟರಷ್ಟು ಹೆಚ್ಚಾಗಿದೆ. ಎಕರೆಗೆ ಐದು ರೂಪಾಯಿ ಇದ್ದುದನ್ನು ಹತ್ತು ಹದಿನೈದು ರೂಪಾಯಿ ಕೊಡಬೇಕೆಂದು ಮಾಡಿದ್ದಾರೆ. ಯಾವ ರೈತ ಇಷ್ಟು ಹಣ ಕೊಟ್ಟು ವ್ಯವಸಾಯ ಮಾಡುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ಭೂಮಿಯನ್ನು ಅಭಿವೃದ್ಧಿ ಮಾಡಬೇಕಾದರೆ, ಅವರಿಂದ ಬರುವ ಆದಾಯವೇನೆಂಬುದನ್ನು ನೋಡುತ್ತಾರೆ, ಅವರಿಗೆ ಬರುವ ಆದಾಯಕ್ಕಿಂತ ಹೆಚ್ಚು ಖರ್ಚು ಕೊಡಬೇಕೆಂದರೆ ಕಷ್ಟ. ವ್ಯವಸಾಯ ಸಂಪತ್ತು ಹೆಚ್ಚಾದರೆ, ದೇಶದ ಸಂಪತ್ತು ಹೆಚ್ಚಾಗುತ್ತದೆ. ಇದನ್ನು ಪರಿಶೀಲನೆ ಮಾಡಿ ಹಿಂದಿದ್ದ ಹಾಗೆ ಇದರ ದರವನ್ನು ಆರು ಅಥವಾ ಎಂಟು ರೂಪಾಯಿ ಮಾಡಬೇಕೆಂದು ಹೇಳುತ್ತೇನೆ.

ಹಿಂದೆ ವ್ಯವಸಾಯ ಇಲಾಖೆಯವರು ಒಂದು ಮನವಿಯನ್ನು ಹೊರಡಿಸಿದ್ದರು. 'ಗ್ಲಿರಿಸೀಡಿಯಾ ಡಯಾಂಚ' ಬೀಜವನ್ನು ಹಾಕಿ ಬೆಳೆಸಿ ಎಂದು ರೈತರಿಗೆ ತಿಳಿಸಿದ್ದರು. ಅದು ಒಳ್ಳೆಯ ಗೊಬ್ಬರ, ಬೆಳೆಯುವುದು ಸುಲಭ ಎಂದೆಲ್ಲಾ ತಿಳಿಸಿದ್ದರು. ಆದರೆ ಅದನ್ನು ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅವರು ನನ್ನಲ್ಲಿಲ್ಲ ಎಂದು ಹೇಳಿದರು. ಇದರಿಂದೇನು ಪ್ರಯೋಜನ? ಇಂಥ ಪ್ರಕಟಣೆ ಹೊರಡಿಸಿದರೆ, ಅದು ಎಲ್ಲಿ ಸಿಕ್ಕುತ್ತದೆ ಎಂಬುದನ್ನು ತಿಳಿಸಿ, ರೈತರಿಗೆ ಅದು ದೊರಕುವ ಏರ್ಪಾಡು ಮಾಡಬೇಕು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಕರಲು ಭೂಮಿ ಇದೆ. ಇದರಲ್ಲಿ ಒಂದು ರೀತಿಯ ಬೀಜವನ್ನು ಬಿತ್ತಿದರೆ ಒಳ್ಳೆಯದು, ಕರಲು ಕೂಡ ಕಡಮೆಯಾಗುತ್ತದೆ ಎಂದು ಹೇಳುತ್ತಾರೆ. ಹೀಗೆ ಹೇಳಿದಮೇಲೆ ಆ ಪ್ರದೇಶಕ್ಕೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿ ಸಹಾಯ ಮಾಡಬೇಕು.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ವ್ಯವಸಾಯದ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಸಭೆಯು ಮುಂದೆ ಪದೇ ಪದೇ ವ್ಯವಸಾಯ ಇಲಾಖೆಯ ವಿಚಾರದಲ್ಲಿ ಪ್ರಸ್ತಾಪನಾಡಿದಾಗ, ಈ ಇಲಾಖೆಯನ್ನು ಮುಚ್ಚಬೇಕೆಂದು ಒಂದಾನೊಂದು ಕಾಲದಲ್ಲ ಶ್ರೀ ಭೀಮಪ್ಪನಾಯಕರೇ ಹೇಳಿದ್ದಾರೆ. ಅದು ಜ್ಞಾಪಕವಿದೆ. . . .

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಸುಮ್ಮನೆ ಮಾತಿನ ಭರದಲ್ಲಿ ಹಾಗೆ ಹೇಳಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ವ್ಯವಸಾಯ ಇಲಾಖೆ ಬರಿಯ theoretical ಆಗಿ ಹೋಗುತ್ತಿದೆಯೇ ವಿನಾ ಕಾರ್ಯಕ್ಕಿಳಿದು ಭೂಮಿಗಿಳಿದು, ಈ ರೀತಿ ಮಾಡಬೇಕೆಂದು ತಾವೇ experimental farms ನಲ್ಲಿ ಮಾಡಿ ತೋರಿಸಿ, ಹೀಗೆ ಕೆಲಸ ಮಾಡಿದರೆ ವ್ಯವಸಾಯಾಭಿವೃದ್ಧಿಯಾಗುತ್ತದೆಂದು ತೋರಿಸಲು ಕೆಲಸ ಮಾಡುವುದಿಲ್ಲ. ಈ ಕಾಲದಲ್ಲಿ ವಿಜ್ಞಾನ ಶಾಸ್ತ್ರ ಬೇಕಾದಷ್ಟು ಬೆಳೆದಿದೆ. ಶಾಸ್ತ್ರದಲ್ಲಿ ಬೇಕಾದಷ್ಟಿದೆ. ಹೀಗಿರುವಾಗ ಇಂಥಾ ಭೂಮಿಗೆ ಇಂಥಾ ಬೀಜವನ್ನು ಹಾಕಿದರೆ, ಇಂಥಾ ಕಾಲದಲ್ಲಿ ಹಾಕಿದರೆ, ಉತ್ಪತ್ತಿ ಜಾಸ್ತಿಯಾಗುತ್ತದೆ ಎಂಬುದನ್ನು ಕಾರ್ಯತಃ ತೋರಿಸುತ್ತಿಲ್ಲ. ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಅನೇಕ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಟ್ಟು 18 ಸಾವಿರ ರೂಪಾಯಿ ಖರ್ಚುಮಾಡಿ ಆರುನೂರು ರೂಪಾಯಿ ಉತ್ಪತ್ತಿಮಾಡುತ್ತಾರೆ. ಉದಾಹರಣೆಗೆ, 'ಹರದನಹಳ್ಳಿ ಫಾರಂನಲ್ಲಿ' ಹೀಗೆ ಮಾಡಿದ್ದಾರೆ. ಏಕೆ ಹೀಗಾಗಿದೆಯೆಂದರೆ, ನಮ್ಮ ನಾಯಕರು ಹೇಳಿದ ಹಾಗೆ, 14 ಲಕ್ಷ ರೂಪಾಯಿನ ಗೊಬ್ಬರ ಬೀಜ ಅನ್ಯಾಯವಾಗಿದೆ. ತಾಲ್ಲೂಕುಗಳಲ್ಲಿ ಫೀಲ್ಡ್‌ಮನ್, ಇನ್‌ಸ್ಪೆಕ್ಟರು ಮುಂತಾದವರು ದಾಕ್ಷಿಣ್ಯಕ್ಕೊಳಗಾಗಿ, ಅನೇಕ ಸದಸ್ಯರಿಗೂ ಮಂತ್ರಿಗಳಿಗೂ ಹೆದರಿ, ಕೆಲವರಿಗೆ ಗೊಬ್ಬರವನ್ನೂ ಬೀಜವನ್ನೂ ಮುಫತ್ತಾಗಿಯೂ ರಿಯಾಯಿತಿಯ ಮೇಲೆಯೂ ಕೊಟ್ಟಿದ್ದಾರೆ. ಈರೀತಿ ಅನ್ಯಾಯಮಾಡಿದ್ದಾರೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಲ್ಲೆ. . . .

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಅದರಿಂದ ಈ ನಷ್ಟವೇನೂ ಆಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದರಿಂದ ಹೀಗೆ ನಷ್ಟವಾಗಿದೆ ಎನ್ನುವುದನ್ನು ಅಂಕಿಅಂಶಗಳಿಂದ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಪುಗಸಟ್ಟೆ ಕೊಟ್ಟಿದ್ದೇ ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದು ಎಷ್ಟೋ ಲೆಕ್ಕಕ್ಕೇ ಬರುವುದಿಲ್ಲ.

ಇದಲ್ಲದೆ defalcation ಆಗಿರುವುದಕ್ಕೂ ಗಮನ ಕೊಟ್ಟಿಲ್ಲ. ಅದನ್ನು ಸರ್ಕಾರ ಇತ್ಯರ್ಥ ಪಡಿಸಿಲ್ಲ. ಈ ರೀತಿ ಅನೇಕ ಲೋಪದೋಷಗಳನ್ನಿಟ್ಟುಕೊಂಡಿರುವಾಗ ಹೇಗೆ ಅಭಿವೃದ್ಧಿಯಾಗುತ್ತದೆ? ನಮ್ಮ ದೇಶದ ಶೇಕಡ 80ರಷ್ಟು ಜನಸಂಖ್ಯೆ ವ್ಯವಸಾಯದಲ್ಲಿರುವುದರಿಂದ ಎಷ್ಟೋ ಶಾಸ್ತ್ರೀಯ ರೀತಿಯಲ್ಲಿ ವ್ಯವಸಾಯ ನಡೆಸಬಹುದು. ಬೇಕಾದಷ್ಟು ಅವಕಾಶವಿದೆ. ಅನೇಕ ಅಧಿಕಾರಿಗಳು ವಿದೇಶಗಳಿಗೆ ಹೋಗಿ ಶಿಕ್ಷಣ ಪಡೆದು ಬಂದಿದ್ದಾರೆ. ಆದರೂ ಹೀಗೇಕೆ ಆಗುತ್ತಿದೆ? ಏಕೆ ವ್ಯವಸಾಯದ ಇಲಾಖೆಯಲ್ಲಿ ಹೀಗೆ ತಾತ್ಸಾರ ಮಾಡುತ್ತಿದ್ದಾರೆ? ನಮ್ಮ ವ್ಯವಸಾಯ ಮಂತ್ರಿಗಳು, ಅವರೇ ಸ್ವತಃ ವ್ಯವಸಾಯದಲ್ಲಿ ಉಚ್ಚಶಿಕ್ಷಣ ಪಡೆದಿದ್ದಾರೆ, ಅನುಭವವಿದೆ. ಹಣ ಖರ್ಚಾದರೂ ಚಿಂತೆಯಿಲ್ಲ ದೇಶದ ಉನ್ನತಿಗಾಗಿ ವರ್ಷವರ್ಷವೂ ಹೆಚ್ಚು ಹೆಚ್ಚು ಅಭಿವೃದ್ಧಿ ಸಾಧಿಸಬೇಕು, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇಷ್ಟು ಹೇಳಿ ಈ ಡಿಮ್ಯಾಂಡನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ಹಿಂದೆ ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ ಟ್ರಾಕ್ಟರುಗಳು ಎಲ್ಲಿ ನೋಡಿದರೂ ಕೆಲಸ ಮಾಡುತ್ತಿದ್ದುವು; ಎಲ್ಲಿ ನೋಡಿದರೂ ಉಳುತ್ತಿದ್ದುವು. ನಾನು ಹಳ್ಳಿಗಳಕಡೆ ಹೋಗುತ್ತಿದ್ದಾಗ ನೋಡಿದ್ದೇನೆ. ಎಲ್ಲಿಯಾದರೂ ಈ ಟ್ರಾಕ್ಟರುಗಳು ಕೆಟ್ಟುಹೋದರೆ ತಕ್ಷಣವೇ ಮೆಕ್ಯಾನಿಕ್ ಆ ಸ್ಥಳಗಳಿಗೆ ಬಂದು ಅವುಗಳನ್ನು ಸರಿಪಡಿಸಲು ಏನು ಮಾಡಬೇಕೋ ಅದನ್ನೆಲ್ಲಮಾಡಿ ಪುನಃ ಕೆಲಸಮಾಡುವಂತೆ ಮಾಡುತ್ತಿದ್ದರು. ಈಗ ಎಲ್ಲಿ ನೋಡಿದರೂ ಟ್ರಾಕ್ಟರುಗಳು ಅಲ್ಲಲ್ಲೇ ಬಿದ್ದಿರುತ್ತವೆ. ಅವನ್ನು ಸರಿಪಡಿಸಿ ಕೆಲಸಮಾಡುವ ಹಾಗೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಉದ್ಯಾನವನಗಳು ಮೈಸೂರಿನಲ್ಲಿ ಕೀರ್ತಿಪಡೆದಿವೆ. ಉದ್ಯಾನವನಗಳ ಶಾಖೆಗೆ ಅಧಿಕಾರಿಗಳಾಗಿರುವ ಶ್ರೀಮಾನ್ ಮರೀಗೌಡರು ನಮಗೆ ಸಿಕ್ಕಿರುವುದು ವಿಶೇಷದ ಸಂಗತಿ. ಅವರು ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ತೋಟಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಪರಿಶ್ರಮವನ್ನು ಪಡೆದು ಬಂದಿರುತ್ತಾರೆ. ಇದು ಶ್ಲಾಘನೀಯವಾದದ್ದು. ಇವೊತ್ತು ದೇಶಗಳಲ್ಲಿರುವ ನಾಯಕರು ಬೆಂಗಳೂರಿಗೆ ದಯಮಾಡಿಸಿದಾಗ ಅವರಿಗೆ ಔತಣ ಕೂಟಗಳನ್ನು ಲಾಲ್‌ಬಾಗಿನಲ್ಲಿ ಏರ್ಪಾಡುಮಾಡುತ್ತಿದ್ದಾರೆ. ಆದರೆ ಇತ್ತೀಚೆಗೆ ಈ ಉದ್ಯಾನವನಗಳಲ್ಲಿರುವ ರಸ್ತೆಗಳು ತುಂಬ ಅವ್ಯವಸ್ಥೆಯಿಂದ ಕೂಡಿವೆ. ಈ ರಸ್ತೆಗಳಿಗೆ, ಸಂಬಂಧ ಪಟ್ಟವರು ಹೆಚ್ಚು ಹಣವನ್ನು ಸಹಾಯಮಾಡಿ ಇವುಗಳನ್ನು ಉತ್ತಮ ಸ್ಥಿತಿಯಲ್ಲಿಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ. ಈ ಉದ್ಯಾನವನಗಳನ್ನು ವ್ಯವಸಾಯದ ಇಲಾಖೆಗೆ ಸೇರಿಸಿದರೆ ಬಹಳ ತೊಂದರೆಯಾಗುತ್ತದೆ. ಇವು ಬೇರೆಯಾಗಿಯೇ ಕೆಲಸಮಾಡುತ್ತಿರಬೇಕೆಂದು ಹೇಳುತ್ತೇನೆ.

ರೈತರ ವಿಷಯದಲ್ಲಿ, ಕ್ಷಮಾಪಣೆ ಬೇಡಿ, ಒಂದು ವಿಷಯವನ್ನು ಹೇಳುತ್ತೇನೆ. ರೈತರ ಮತ್ತು ಕಾರ್ಮಿಕ ಅಂತಸ್ತು ಹೆಚ್ಚಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ ಈಗಿನ ಪರಿಸ್ಥಿತಿ ಏನಾಗಿದೆ ಎಂಬುದನ್ನು ಯೋಚಿಸಬೇಕು. ಭೂಮಿಯನ್ನು ಉಳುತ್ತಿದ್ದ ರೈತನಾದವನು ಮನೆಯೊಳಗೆ ನಿಂತ, ಮನೆಯೊಳಗಿನ ರೈತ ಬೆಂಗಳೂರಿಗೆ ಬಂದು ಬಿಟ್ಟ ಎಂಬಂತೆ ರೈತರು ಪಟ್ಟಣಗಳನ್ನು ಸೇರುತ್ತಿದ್ದಾರೆ. ಮತ್ತು ಜಮೀನಿನಲ್ಲಿ ಬೇಸಾಯ ಮಾಡುವುದನ್ನು ಬಿಡುತ್ತಿದ್ದಾರೆ. ಇವೊತ್ತು ಉಳುವವನು ಯಾರು ಎಂದರೆ ತಮಿಳರವನು, ತಿರುವಣ್ಣಾಮಲೆಕಡೆಯಿಂದ ಬಂದಿರುವವನು. ರೈತರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ರಾಜ್ಯವಾಳಬೇಕು; ಅಸೆಂಬ್ಲಿಯಲ್ಲಿ ಕುಳಿತುಕೊಳ್ಳಬೇಕು, ಮುಖ್ಯಮಂತ್ರಿ ಆಗಬೇಕು ಎಂಬ ಈ ಬಯಕೆಗಳೆಲ್ಲವು ಇದ್ದರೆ ಹೊಲವನ್ನು ಉಳುವವರು ಯಾರು? ಆದುದರಿಂದ ಇಂಥ ಹಂಬಲಗಳನ್ನು ಬಿಡಬೇಕು ಮತ್ತು ಈ ಅಸೆಂಬ್ಲಿ ಸದಸ್ಯರುಗಳಾಗಿರುವ ರೈತರು ಹೊಲ ಉಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, Agriculture, Horticulture and Fisheriesಗೆ ಸಂಬಂಧಪಟ್ಟ 74,21,641 ರೂಪಾಯಿಗಳ ಮನವಿಗೆ ಬೆಂಬಲವನ್ನು ಕೊಡುತ್ತ ಈ ಇಲಾಖೆಗೆ ಇನ್ನೂ ಹೆಚ್ಚು ಹಣ ಕೊಡಬೇಕು ಎಂದು ಹೇಳುತ್ತೇನೆ. ಇವೊತ್ತಿನ ದಿವಸ ದೇಶದ ಪ್ರಗತಿ ವ್ಯವಸಾಯದ ಇಲಾಖೆಯ ಮೇಲೆ ನಿಂತಿದೆ. ಎಲ್ಲಕ್ಕೂ ಮೂಲಭೂತವಾದದ್ದು ವ್ಯವಸಾಯ. ಇಂಥದರಲ್ಲಿ ನಮ್ಮ ಸ್ನೇಹಿತರು ಕೆಲವರು ಇದನ್ನು ಟೀಕಿಸಿದರಲ್ಲ ಎಂದು ಶೋಚನೀಯವಾಗುತ್ತಿದೆ. ಈ ಇಲಾಖೆಯಿಂದ ಪ್ರಯೋಜನವಾಗಿಲ್ಲ, ಇದನ್ನು ರದ್ದುಪಡಿಸುವುದು ಉತ್ತಮವೆಂದು ಹೇಳಿದ್ದಂತೂ ಬಹಳ ಶೋಚನೀಯವಾಗಿದೆ. ಈ ದೇಶದ ಆಹಾರಾಭಾವ ಕಾಲದಲ್ಲಿ, ದೇಶಕ್ಕೆ ಬಂದ ಆಪತ್ಕಾಲದಲ್ಲಿ ವ್ಯವಸಾಯದ ಇಲಾಖೆ ಮಾಡಿರತಕ್ಕ ಕೆಲಸಕಾರ್ಯಗಳನ್ನು ಇನ್ನೂ ಸ್ವಲ್ಪ ಮಟ್ಟಿಗೆ ಜ್ಞಾಪಕಕ್ಕೆ ತೆಗೆದುಕೊಳ್ಳಬಹುದು. ಇವೊತ್ತಿನ ದಿವಸ ಮಾನ್ಯ ಮಂತ್ರಿಗಳಾದ ಡಾಕ್ಟರ್ ಆರ್. ನಾಗನಗೌಡರು ಅಮೇರಿಕಾದಲ್ಲಿ ಕೊಂಚಕಾಲ ವಿದ್ದು ವ್ಯವಸಾಯದಲ್ಲಿ ಹೆಚ್ಚಿನ ಪರಿಶ್ರಮವನ್ನು ಹೊಂದಿದ್ದಾರೆ. ಅಮೆರಿಕಾ ದೇಶದಲ್ಲಿ ಸರ್ಕಾರ ಯಾವ ರೀತಿ ವ್ಯವಸಾಯ ಇಲಾಖೆಗೆ ಹೆಚ್ಚಿನ ದರ್ಜೆಯನ್ನು ಕೊಟ್ಟಿದೆ, ಯಾವ ಕೆಲಸ ಕಾರ್ಯಗಳು ನಡೆಯಬೇಕಾದರೂ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದ್ದಾರೆನ್ನುವುದನ್ನು ನಮ್ಮ ಮಂತ್ರಿಗಳು ಅರಿತಿದ್ದರೂ ಸಹ ವ್ಯವಸಾಯ ಇಲಾಖೆಯಲ್ಲಿ ಸಾಕಾದಷ್ಟು ಪ್ರಗತಿದಾಯಕವಾದ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತಿಲ್ಲ. ರೈತರಲ್ಲಿನ ಏರುಪೇರುಗಳು ಮತ್ತು ಧಾರಣೆ ವಾಸಿಗಳ ಹತೋಟಿ ಇವು ವ್ಯವಸಾಯ ಇಲಾಖೆಯ ಜವಾಬ್ದಾರಿ. ಇವೊತ್ತಿನ ದಿವಸ ಧಾರಣೆವಾಸಿಗಳು ಹತ್ತುವುದಕ್ಕೂ ಇಳಿಯುವುದಕ್ಕೂ ಇಲಾಖೆಯೇ ಕಾರಣವೆಂದು ಹೇಳಬಹುದು. ಅಮೆರಿಕಾದಲ್ಲಿ ಇಂಥಿಂಥ ಜಾಗಗಳಲ್ಲಿ ಇಂಥಿಂಥ ದವಸ ಬೆಳೆಯಬೇಕು ಎನ್ನುವುದನ್ನು ಅಲ್ಲಿಯ ವ್ಯವಸಾಯ ಇಲಾಖೆಯವರು ಮೊದಲೇ forecast ಮಾಡುತ್ತಾರೆ. ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿಯೂ ಸಹ forecast ಮಾಡಿ, ನಮಗೆ ಎಷ್ಟು ಬೇಕಾಗುತ್ತದೆ, ಹೊರಗಡೆಗೆ ಎಷ್ಟು ಕಳುಹಿಸಬೇಕಾಗುತ್ತದೆ, ಹೊರಗಡೆಯ ಡಿಮ್ಯಾಂಡ್ ಎಷ್ಟಿದೆ ಎನ್ನುವುದನ್ನು ತಿಳಿದುಕೊಂಡು ಸರಿಯಾದ statistics collect ಮಾಡಿ ರೈತರಿಗೆ ಅವಕಾಶ ಕಲ್ಪಿಸಿದರೆ ಅವರು ಇನ್ನೂ ಚೆನ್ನಾಗಿ ಬೆಳೆದು ಉತ್ತಮ ರೀತಿಗೆ ಬರುತ್ತಾರೆ. ಈ ರೀತಿ ಮಾಡಲು ಬೇಗ ಗಮನ ಕೊಡಬೇಕು.

ಹಳ್ಳಿಗಳ ಕಡೆ ರೈತರು ಎಷ್ಟು ಕಷ್ಟಪಟ್ಟು ಉತ್ತಮವಾದ ಬೆಳೆಗಳನ್ನು ಬೆಳೆಸಿದರೂ ಸಹ ಅದಕ್ಕೆ ಬರತಕ್ಕ ರೋಗರುಜಿನಾದಿಗಳನ್ನು ತಡೆಗಟ್ಟು

(ಶ್ರೀ ಕೆ. ವಿ. ಬೈರೇಗೌಡ)

ವುದಕ್ಕೆ, ಸಾಮಾನ್ಯ ರೈತವೃತ್ತಿಯನ್ನು ಮಾಡುವವನಿಗೆ ಆಗುವುದಿಲ್ಲ. ಇಲಾಖೆಯಲ್ಲಿ ಒಂದು scientific research section ಕೆಲಸ ಮಾಡುತ್ತಿದ್ದರೂ ಸಹ ರೈತನಿಗೆ ಇದರಿಂದ ಸಹಾಯವಾಗುತ್ತಿಲ್ಲ. ರೈತರು ಹೋಗಿ ಹೇಳಿದರೆ ಆಗ ಬಂದು ನೋಡುತ್ತಾರೆಯೇ ಹೊರತು ಇಲ್ಲದೆ ಇದ್ದರೆ ಬರುವುದಿಲ್ಲ. ಇಂಥ research section ಗಳನ್ನು ತಾಲ್ಲೂಕುಗಳಲ್ಲಿಯೂ ಪ್ರಾರಂಭಮಾಡಿ ಅದರಿಂದ ರೈತನಿಗೆ ಉಪಯೋಗ ವಾಗುವಂತೆ ಮಾಡಬೇಕು. ಅಲ್ಲದೆ ಈ ಶಾಖೆಗೆ ಸಂಬಂಧಪಟ್ಟ ಸಿಬ್ಬಂದಿಯವರು ಆಗಾಗ್ಗೆ ಹಳ್ಳಿಗಳ ಕಡೆ ಹೋಗಿ ಎಲ್ಲೆಲ್ಲಿ ಬೆಳೆಗೆ ರೋಗರುಜಿನಗಳು ಬಂದಿರುತ್ತವೆಯೋ ಅಂಥ ಕಡೆಗಳಲ್ಲೆಲ್ಲ ತಕ್ಷಣ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಶ್ರೀ ಎಸ್. ಗೋಪಾಲಗೌಡ.—ಒಬ್ಬೊಬ್ಬರಿಗೆ ಐದೈದು ನಿಮಿಷ ಮಾತ್ರ ಅವಕಾಶ ಕೊಟ್ಟರೆ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ,

Mr. DEPUTY SPEAKER.—Time is fixed. At Ten we close this demand. There is no time ; what is to be done ?

Sri Mulka GOVINDA REDDY.—What is the use of giving two or three minutes, Sir ? We cannot say anything about policies.

Mr. DEPUTY SPEAKER.—You must understand my difficulties. There are very many members who have sent cut motions. They are all anxious to say something about the Department. You cannot curtail their privilege. They must have the opportunity to say a few words. In the interest of members themselves I am compelled to restrict the time for speeches. If it is the desire of the House that any one member may speak at length and others must not press their claim to speak, I have no objection.

Sri A. BHEEMAPPA NAIK.—What is it that we can say in two or three minutes ? I wanted to protest even at the beginning ; it is better we decide the question. What is the meaning of limiting speeches to two or three minutes ? With due respect to the Chair, I must say that we cannot say anything in two minutes.

Mr. DEPUTY SPEAKER.—I leave it to the House. I will put it to the House. We have already taken a decision on this aspect. There must be some sanctity to the decisions taken by the House. 10 O'Clock is the time fixed by the consent of the House, for this Demand. We have to cover many subjects and many Hon'ble Members are anxious to speak. The Hon'ble Minister requires at least 15 minutes for his reply. Please tell me how to proceed.

Sri M. LINGANNA (Nanjangud).—So far as the time limit is concerned, I think it must be left to the good sense of the Chair. If an Hon'ble Member is referring to good points and giving good suggestions which will be appealing to the Ministers, it may be left to the Chair to allow some latitude and the time limit may not be very rigidly enforced in such cases.

Mr. DEPUTY SPEAKER.—Even now there is discretion given to the Chair. If an Hon'ble Member gives statisticla details and speaks on facts and figures, I will show some latitude in his case. Hon'ble Members must have observed that by now.

Sri P. R. RAMAIYA (Basavangudi).—In spite of observing the time limit, some of us have not got chances.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಕೆಲವು ಸದಸ್ಯರು ವ್ಯವಸಾಯದ ಇಲಾಖೆ ಕೆಲಸಮಾಡುತ್ತಿಲ್ಲ, ಅದನ್ನು ರದ್ದುಪಡಿಸ ಬೇಕು ಎಂದು ಹೇಳಿದರು. ವಾಸ್ತವವಾಗಿ ನೋಡಿ ದರೆ ದೇಶದಲ್ಲಿರತಕ್ಕ ವ್ಯವಸಾಯಾಭಿವೃದ್ಧಿಗೆ, ನಮ್ಮ ದೇಶದಲ್ಲಿರುವ ವ್ಯವಸಾಯದ ಇಲಾಖೆ ಬಹಳ ಸಹಾಯಕವಾಗಿದೆ. ಶ್ರೀ ಇಮಾಂ ಸಾಹೇಬರು ಹೇಳಿರುವಂತೆ ಹಿಂದೆ ಈ ಇಲಾಖೆಗೆ ಐದು ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರು ಎಂದು ಹೇಳಬಹುದಾದರೂ ಈ ಹಣವೆಲ್ಲ ಬರೀ ಸಂಬಳಸಾರಿಗೆ ಗಳನ್ನು ಕೊಡುವುದಕ್ಕೆ ವೆಚ್ಚಮಾಡುತ್ತಿದ್ದರೇ ವಿನಾ experiments, demonstration, ಮುಂತಾದ ಯಾವ ಕೆಲಸಗಳನ್ನೂ ಹಿಂದೆ ಮಾಡುತ್ತ ಇರಲಿಲ್ಲ. ಈಗ ಆಯವ್ಯಯದಲ್ಲಿ ತೋರಿಸಿರುವ 70,47,000 ರೂಪಾಯಿಗಳನ್ನು ತೆಗೆದುಕೊಂಡರೆ ಎಲ್ಲ ವ್ಯವ ಸಾಯದ ಇಲಾಖೆಗೆ ಎಂದು ಇದ್ದರೂ ಕೂಡ ಅದರಲ್ಲಿ 18,74,000 ರೂಪಾಯಿಗಳು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೂ, 22,63,000 ರೂಪಾಯಿಗಳು ಡೆವಲಪ್‌ಮೆಂಟ್ ಸ್ಕೀಮ್ಸ್ ಎಂದರೆ ಅಭಿವೃದ್ಧಿ ಯೋಜನೆಗಳಿಗೂ ವೆಚ್ಚವಾಗುತ್ತದೆ. ಇದಾದನಂತರ 29,10,000 ರೂಪಾಯಿಗಳು ಇಲಾಖೆಗೆ ಉಳಿಯು ತ್ತವೆ. ಇದರ ಪೈಕಿ Agricultural demonstration and propaganda ಎಂಬುದಕ್ಕೆ 7,52,000 ರೂಪಾಯಿಗಳೂ Agricultural Experiments and research ಬಾಬಿಗೆ 1,88,000 ರೂಪಾಯಿಗಳೂ ಮತ್ತು Agricultural Education ಬಾಬಿಗೆ 3,65,000 ರೂಪಾಯಿಗಳೂ ಒಟ್ಟು 13 ಲಕ್ಷ ರೂಪಾಯಿಗಳು ಖರ್ಚಾಗಿ ಉಳಿಯುವ 14 ಲಕ್ಷ ರೂಪಾಯಿಗಳು ಇಲಾಖೆಗೆ ಖರ್ಚಾಗುತ್ತವೆ. ಹೋದವರ್ಷದ ಅಂದಾಜು ಬಡ್ಜೆಟ್ಟಿನಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿ write off ಮಾಡಬೇಕು. manure ನಲ್ಲಿ ನಷ್ಟವಾಗಿದೆ ಎಂದಿತ್ತು. ವಾಸ್ತವ

ವಾಗಿ ಯಾರು ಈ ನಷ್ಟಕ್ಕೆ ಜವಾಬ್ದಾರರೋ ಅವರ ಮೇಲೆ ಕಾರ್ಯಕ್ರಮ ನಡಿಸಿ, ವಿಚಾರಣೆ ನಡೆಸಿ ಹಣವನ್ನು ವಸೂಲ್ಮಾಡುವ ಪ್ರಯತ್ನ ಮಾಡಬೇಕು. ಅದೂ ಅಲ್ಲದೆ ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು manure losses ಗಾಗಿ ಒದಗಿಸಿದ್ದಾರೆ. ಪದಾರ್ಥಗಳು ರೈಲ್ವೆಯಲ್ಲಿ ಬಂದಿದ್ದು, ತೂಕ ವಗೈರೆಗಳಲ್ಲಿ ಕಮಿಮೆ ಬಂದು ನಷ್ಟವಾಗುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದೆ, ಮುಂದೆ ಆಗಬಹುದಾದ ನಷ್ಟಕ್ಕೆ ಈಗಲೇ ಹಣ ಒದಗಿಸಲಾಗಿದೆ. ಹೀಗೆ ಮಾಡಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಗಾದರೂ ನಷ್ಟ ಬರುತ್ತದೆಂದು ಹಣವನ್ನು ಒದಗಿಸಿದ್ದಾರೆ, ಎಂಬ ಧೈರ್ಯ ಬಂದು ಹೆಚ್ಚು ನಷ್ಟವಾಗುವುದಕ್ಕೆ ಕಾರಣವಾಗಬಹುದು. ಹೀಗೆ ಮಾಡಿರುವುದು ಯುಕ್ತವಾದದ್ದಲ್ಲ. ಆಡಿಟ್ ಇಲಾಖೆಯವರು ಲೆಕ್ಕಗಳನ್ನು ತನಿಖೆ ಮಾಡಿದ ಮೇಲೆ ಅವಶ್ಯಕ ಕಂಡುಬಂದಲ್ಲಿ ಆ ಬಾಬನ್ನು ಸೇರಿಸುವುದು ಒಳ್ಳೆಯದು. ಹಾಗೆ ಮಾಡದೆ ಮುಂದೆಯಾಗಬಹುದಾದ ನಷ್ಟಕ್ಕೆ ಈಗಲೇ ಹಣವನ್ನೊದಗಿಸುವುದರಿಂದ ಅಧಿಕಾರಿಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

Research ಬಗ್ಗೆ ಎರಡು ವಿಷಯ ಹೇಳುತ್ತೇನೆ. ಅಗ್ರಿಕಲ್ಚರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಾರೆ. Experts, First-Class ಮತ್ತು ಬರೀ ತೇರ್ಗಡೆ ಹೊಂದಿರುವವರುಗಳಲ್ಲಿ ಮೂರನೆ ದರ್ಜೆಯಲ್ಲಿ ತೇರ್ಗಡೆಯಾಗಿರುವವರನ್ನು ಈ ಕಾಲೇಜಿಗೆ ಸೇರಿಸಿಕೊಳ್ಳುತ್ತಾರೆ. First-Class ನಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಉತ್ತೇಜನ ಕೊಟ್ಟು, ಅವರಿಗೆ ವಿದ್ಯಾರ್ಥಿ ವೇತನಗಳನ್ನು ಕೊಟ್ಟರೆ research section ನಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. Third Class ನಲ್ಲಿ ತೇರ್ಗಡೆಯಾಗಿರುವವರು, ತೇರ್ಗಡೆಯಾದ ತಕ್ಷಣ administration ಇರತಕ್ಕ ಜಾಗಗಳಿಗೆ ಹೋಗುವುದಕ್ಕೆ ನೋಡುತ್ತಾರೆಯೇ ವಿನಾ ವಾಸ್ತವವಾಗಿಯೂ research ಮಾಡುವುದಕ್ಕೆ ಆಗುತ್ತಿಲ್ಲ. Research ಕೆಲಸಕ್ಕೆ ಹಣವನ್ನು ಅಭಿವೃದ್ಧಿ ಯೋಜನೆಗಳಲ್ಲಿ ಒದಗಿಸಿದ್ದಾರೆ. ಈ Research ಕೆಲಸ ಮಾಡುವುದಕ್ಕೆ ಯೋಗ್ಯತೆಯುಳ್ಳವರು ನಮ್ಮಲ್ಲಿ ಇಲ್ಲದೆ ಹೋದಪಕ್ಷದಲ್ಲಿ, ಈ ಶಾಖೆಯಲ್ಲಿ ಕೆಲಸ ಚೆನ್ನಾಗಿ ನಡೆಯಬೇಕಾದರೆ, ಉತ್ತಮವಾಗಿ ತೇರ್ಗಡೆ ಹೊಂದಿರುವವರನ್ನು ಹೊರಗಡೆಯಿಂದಲಾದರೂ ಕರೆದುಕೊಂಡು ಬಂದು ಈ ಕೆಲಸಕ್ಕೆ ನೇಮಿಸಬೇಕೇ ವಿನಾ Third-Class ನಲ್ಲಿ ತೇರ್ಗಡೆಯಾಗಿರುವವರಿಗೆ, ರಿಸರ್ಚ್ ಮಾಡಲು ಅಭಿಲಾಷೆ ಇಲ್ಲದವರಿಗೆ, ಈ ಕೆಲಸಗಳನ್ನು ವಹಿಸಿದರೆ ಅದರಿಂದ ಅನುಕೂಲವಾಗುವುದಿಲ್ಲವೆಂದು ಕಂಡುಬರುತ್ತದೆ.

9-30 A.M.

ಶ್ರೀ ಎ. ಭೀಮಪ್ಪನಾಯಕ್.—ಹಾಗಾದರೆ ಇಂಜನಿಯರಿಂಗ್ ಕಾಲೇಜು ಮುಂತಾದ ಬೇರೆ ಕಾಲೇಜುಗಳನ್ನು ಮುಚ್ಚಬೇಕೇ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿಸರ್ಚ್ ಇನ್‌ಸ್ಟಿಟ್ಯೂಟುಗಳಲ್ಲಿ ಕೆಲಸಮಾಡುವವರಿಗೆ ಹೆಚ್ಚಾಗಿ ವಿದ್ಯಾರ್ಥಿವೇತನ ಕೊಟ್ಟರೆ ಅಲ್ಲಿಗೆ ಫಸ್ಟ್‌ಕ್ಲಾಸ್ ಸ್ಟೂಡೆಂಟ್ಸ್ ಬಂದೇ ಬರುತ್ತಾರೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯಮಿತ್ರರು ವ್ಯವಸಾಯದ ಇಲಾಖೆ ವಿಚಾರದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ರೈತರಿಗೆ ಬೇಕಾದ ಬಿತ್ತನೆ ಬೀಜ ಸಕಾಲದಲ್ಲಿ ಒದಗುತ್ತಿಲ್ಲ. ಸೊಸೈಟಿಗಳಲ್ಲೇನೋ ಅದನ್ನು ಮಾರಾಟ ಮಾಡುತ್ತಾರೆ. ಆದರೆ ಯಾವ ಕಾಲದಲ್ಲಿ ಯಾವ ಬೀಜ ಬೇಕೋ ಆಗ ಸೊಸೈಟಿಗಳಿಗೆ ಹೋಗಿ ಕೇಳಿದರೆ ಆ ಬೀಜವಿರುವುದಿಲ್ಲ. ಸೊಸೈಟಿಗೆ ಯಾವಾಗ ಬರುತ್ತದೆಂಬುದು ರೈತರಿಗೆ ಗೊತ್ತಾಗುವುದಿಲ್ಲ. ಇದನ್ನು ಗಮನಿಸಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜಗಳು ಒದಗುವುದಕ್ಕೆ ಸರಿಯಾದ ಏರ್ಪಾಡು ಮಾಡಬೇಕು. ಜೋಳ, ಬತ್ತ ವಗೈರ ಬೇಕಾದ ಎಲ್ಲ ಬೀಜಗಳೂ ರೈತರಿಗೆ ಸುಲಭವಾಗಿ ಬೇಕಾದಾಗ ಸಿಕ್ಕಲು ಅವಕಾಶ ಕಲ್ಪಿಸಿಕೊಡಬೇಕು. ಅಲ್ಲದೆ ರೈತಬಾಂಧವರಿಗೆ ಗುಳ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಬೇಕಾದ ವೇಳೆಯಲ್ಲಿ ಸಿಕ್ಕುತ್ತಿಲ್ಲ. ಅವುಗಳೂ ಕೂಡ ಸಕಾಲಕ್ಕೆ ಸಿಕ್ಕುವಂತೆ ಏರ್ಪಾಡು ಮಾಡಬೇಕು.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ವಿರೋಧಿಸಿ ಮಾತನಾಡಬೇಕಾಗಿದೆ. ಈ ದೇಶದ ಸೇಕಡ 80 ಜನರ ಕಸಬು ವ್ಯವಸಾಯ. ಇಂಥ ವ್ಯವಸಾಯದ ಡಿಮ್ಯಾಂಡನ್ನು ಯಾವಾಗ್ಯೂ ವಿರೋಧಿಸಬೇಕಾಗಿರುವುದು ಸಂಕಟಕರವಾದ ವಿಚಾರ. ಏಕೆಂದರೆ ಇದರ ಕಡೆ ಸರಿಯಾದ ಗಮನ ಕೊಟ್ಟಿಲ್ಲ. ಸಾಯಿಲ್ ಎರೋಷನ್ ನಡೆದೇ ನಡೆಯುತ್ತಿದೆ. ಅನೇಕ ವರ್ಷಗಳಿಂದ ಇದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದೂ ರೈತರಿಗೆ ಅನುಕೂಲಮಾಡಿಕೊಡಬೇಕೆಂದೂ ಹೇಳುತ್ತಿದ್ದರೂ ಕೂಡ ಇದನ್ನು ಗಮನಿಸಿಲ್ಲ. ಮತ್ತು ರೈತರಿಗೆ ಮುಖ್ಯವಾಗಿ ಬೇಕಾದ ಗುಳ, ನೇಗಿಲು, ಗುದ್ದಲಿ ಮೊದಲಾದ ಉಪಕರಣಗಳು ಸಿಕ್ಕಬೇಕಾದರೆ ಬಹಳ ಕಷ್ಟವಿದೆ. ಇಲ್ಲದಿರುವ ತೊಂದರೆ ಮಾಡುತ್ತಾರೆ. ರೈತರ ಮನೆಗಳ ಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡುವಷ್ಟು ಸಿಬ್ಬಂದಿಯಿದ್ದರೂ ಸಹ ಸಕಾಲದಲ್ಲಿ ಕೊಡುವುದಿಲ್ಲ. ಮಳೆಗಾಲದಲ್ಲಿ ಬೇಕಾದ ಗುಳ ಬೇಸಿಗೆ ಕಾಲಕ್ಕೆ ಬರುತ್ತದೆ, ಮಳೆಗಾಲದಲ್ಲಿ ಸಿಕ್ಕುವುದಿಲ್ಲ.

ಇದಲ್ಲದೆ ಡೆವಲಪ್‌ಮೆಂಟ್ ಬಾಬಿನಲ್ಲಿ ಅಡ್ಮಿನಿಸ್ಟ್ರೇಷನ್‌ಗೆ 1,60,000 ರೂಪಾಯಿಗಳ ಪ್ರಾವಿಷನ್ ಇದ್ದರೆ 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ನಷ್ಟದ ವಿಚಾರ ಶ್ರೀ ಬೈರೇಗೌಡರು ಹೇಳಿದರು. 13 ಲಕ್ಷ ಹೆಚ್ಚಾಗಿ ಖರ್ಚುಮಾಡಿರುವುದನ್ನು ನೋಡಿದರೆ ಜವಾಬ್ದಾರಿ ಎಷ್ಟಿದೆಯೆಂಬುದು ತಾನೇ ಗೊತ್ತಾಗುತ್ತದೆ. ಸುಮ್ಮನೆ ಟೀಕೆ ಮಾಡುತ್ತಿಲ್ಲ. ಈ ನಷ್ಟವನ್ನು ಕಾಂಗ್ರೆಸ್ ಪಕ್ಷದಲ್ಲಿರುವ 80 ಜನರ ಮೇಲೆ ಸರ್‌ಚಾರ್ಜ್ ಹಾಕಿ ವಸೂಲು ಮಾಡಬೇಕು. ಲೋಕಲ್ ಬಾಡಿಯಲ್ಲಿ ಒಂದು ರೂಪಾಯಿ ಟಿ. ಎ. ಹೆಚ್ಚಾಗಿ ತೆಗೆದುಕೊಂಡರೆ ಎಷ್ಟೋ ಗಲಾಟೆಯಾಗುತ್ತದೆ. ಹಾಗಿರುವಾಗ ಒಂದು ಲಕ್ಷ ಒದಗಿಸಿರುವಾಗ 7 ಲಕ್ಷ, 20 ಲಕ್ಷ ಹೀಗೆಲ್ಲಾ ಖರ್ಚುಮಾಡಿದರೆ ಹೇಗೆ? ಸಿಕ್ಕಾಪಟ್ಟೆ ಖರ್ಚುಮಾಡಿ ಅದರ ಮೇಲೆ ಟೀಕೆ ಮಾಡಿದಾಗ ಅದರಲ್ಲಿ ಅರ್ಥವಿಲ್ಲವೆಂದು ಹೇಳಿದರೆ ಹೇಗೆ? ಇಷ್ಟು ವರ್ಷ ಏನು ಮಾಡುತ್ತಿದ್ದರು? ವರ್ಷೇ ವರ್ಷೇ ಜಡ್ತಿ ಮಾಡುತ್ತಿದ್ದರೇ ಅಥವಾ ಇಲ್ಲವೇ? ಈ ರೀತಿಯಾಗುವುದಕ್ಕೆ ಅವಕಾಶ ಕೊಟ್ಟಿರುವಾಗ 13 ಲಕ್ಷವನ್ನು ಓಟು ಪಡೆದು ತೆಗೆದುಕೊಂಡಿದ್ದರೆ, ಹೇಗೆ ಯಾರಿಂದ ತಂದರು ಎಂದು ಪ್ರತಿಯೊಂದು ಕಾಸಿಗೂ ಜವಾಬು ಕೊಟ್ಟರೆ ಒಪ್ಪಿಕೊಳ್ಳಬಹುದು. ಹಾಗಿಲ್ಲದೆ ಏಕ್‌ದಂ 13 ಲಕ್ಷ ವಜಾ ಮಾಡಿ ಎಂದು ಹೇಳಿದರೆ ಹೇಗೆ? ಮುಂದೆ ಇದು ಒಂದು ಕೋಟಿ 30 ಲಕ್ಷ

(ಶ್ರೀ ಬಿ. ಹುಚ್ಚೇಗೌಡ)

ಅಥವಾ 13 ಕೋಟಿ ನಿಕಾಗಬಾರದು ಎಂಬುದನ್ನು ಅರಿತುಕೊಳ್ಳಬೇಕು. ಸುಮ್ಮನೆ ಟೀಕೆ ಮಾಡುತ್ತಾರೆಂದು ಸೋಗು ಹಾಕಿಕೊಂಡು ಆಡಳಿತ ನಡೆಸುವುದಕ್ಕಿಂತ ಯಾವ ಟೀಕೆಯೂ ಬರಬಾರದೆಂದು ನಿರೀಕ್ಷಿಸಿದ್ದರೆ ಬಿಟ್ಟು ಹೋಗುವುದು ಕ್ಷೇಮ.

ತುಮಕೂರಿನಲ್ಲಿ ಒಂದು ಹಾರ್ಟಿಕಲ್ಚರಲ್ ಫಾರಂ ಇದೆ. ಅದಕ್ಕೆ ಒಂದು ಬಾವಿಯಿದೆ. ಅದಕ್ಕೊಂದು ಪಂಪು ಹಾಕಿಸಿಕೊಡಿ ಎಂದು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಬೇಸಗೆಯಲ್ಲಿ ಆ ಫಾರಂ ಒಣಗುತ್ತಿದೆ, ಅದಕ್ಕೆ ಮೂರು ಸಾವಿರ ರೂಪಾಯಿಗಳನ್ನಾದರೂ ಒದಗಿಸಿ ಪಂಪು ಹಾಕಿಸಿಕೊಡಿ ಎಂದು ಎಷ್ಟೋ ಹೇಳಿದರೂ ಆರು ತಿಂಗಳಿಂದಲೂ ಆ ಕೆಲಸ ಮಾಡಿರುವುದಿಲ್ಲ. ಈ ದಿವಸವಾದರೂ ಜರೂರಾಗಿ ಅದನ್ನು ಮಂಜೂರು ಮಾಡಬೇಕು.

* ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಈಗ ಹಾರ್ಟಿಕಲ್ಚರಲ್ ಆಫೀಸಿದೆ. ಅದು ಈಗ ಏನು ಕೆಲಸ ಮಾಡುತ್ತಿದೆಯೆಂದರೆ ನಿಜವಾಗಿಯೂ ಕೇವಲ ಸಂಬಳ ತೆಗೆದುಕೊಂಡು ಹೂವಿನ ಬೀಜ ಮಾರುತ್ತಿದೆಯೇ ವಿನಾ ಅಂಥ ಉಪಯುಕ್ತವಾದ ಕೆಲಸವನ್ನೇನೂ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳಿದ್ದಾಗ ಆಫೀಸರುಗಳಿಗೆ ಬಲವಂತಮಾಡಿ ಬಹಳ ಚುರುಕಾಗಿ ಕೆಲಸ ನಡೆಯುವಂತೆ ಮಾಡಲಾಯ್ತು, ಅಲ್ಲಿ ಒಂದು ಫಾರಂ ಆದರೂ ಇಟ್ಟು ಹೂವಿನ ಬೀಜ ಮತ್ತು ಹಣ್ಣಿನ ಗಿಡ ಬೆಳೆದು ಜನರಿಗೆ ಒದಗಿಸಿದರೆ ಉಪಯುಕ್ತವೇ ಹೊರತು ಬರೀ ಬೀಜ ಮಾರಿದರೆ ಅನುಕೂಲವಾಗುವುದಿಲ್ಲ ಎಂದು ಒತ್ತಾಯಪಡಿಸಿ ಆ ರೀತಿ ಮಾಡುವಹಾಗೆ ಏರ್ಪಾಡು ಮಾಡಿದ್ದರು. ಇತ್ತೀಚೆಗೆ ರೂರಲ್ ಡೆವಲಪ್‌ಮೆಂಟ್ ಕಮಿಟೀಸ್ ಹೋದುವು, ಈ ಫಾರಂಗಳೂ ಸಹ ಹೋದುವು. ಈ ದಿವಸ ಕೇವಲ ಅಂಗಡಿಯಿರುವ ಹಾಗೆ ಇದ್ದುಕೊಂಡು ಹೂವಿವ ಬೀಜವನ್ನು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಖಂಡಿತ ಯಾರಿಗೂ ಉಪಕಾರವಾಗುವುದಿಲ್ಲ ಮತ್ತು ಸರ್ಕಾರದ ಹಣ ವ್ಯರ್ಥವಾಗುತ್ತಿದೆ. ಇದನ್ನು ಪರಿಶೀಲಿಸಿ ಈಗಲಾದರೂ ಸಂಬಂಧಪಟ್ಟ ಇಲಾಖೆಗೆ ಸೂಚಿಸಿ ಒಂದು ಫಾರಂ ತೆರೆಯುವಂತೆ ಮಾಡಬೇಕು. ಹಾಗೆ ಮಾಡಿ ಆ ಮೂಲಕ ಹಣ್ಣುಗಳ ಗಿಡಗಳು ಮತ್ತು ಹೂವಿನ ಗಿಡಗಳು ಜನರಿಗೆ ದೊರೆಯುವ ಹಾಗೆ ಮಾಡುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ಅಗ್ರಿಕಲ್ಚರಲ್ ಇಲಾಖೆ ಸಾಧಿಸಿರುವ ಕೆಲಸಗಳಲ್ಲೆಲ್ಲಾ ಬಹಳ ಮುಖ್ಯವಾದುದು ಜಪಾನ್ ಮೆಥಡ್ ಆಫ್ ಕಲ್ಟಿವೇಷನ್ ಪ್ರಕಾರ ವ್ಯವಸಾಯ ಮಾಡಿಸಿ ಆ ಮೂಲಕ ದೇಶದಲ್ಲಿ ಆಹಾರದ ಉತ್ಪತ್ತಿ ಜಾಸ್ತಿ ಮಾಡಿರುವುದು. ಈ ಒಂದು ಸನ್ನಿವೇಶ ವ್ಯವಸಾಯದ ಇಲಾಖೆ ಸಾಧಿಸಿರುವ ಕೆಲಸಗಳಲ್ಲೆಲ್ಲಾ ಮುಖ್ಯವಾದುದು ಅನ್ನಿಸುತ್ತದೆ. ಅನೇಕ ವರ್ಷಗಳಿಂದ ಈ ಇಲಾಖೆಯು ಇಷ್ಟು ಉಪಯುಕ್ತವಾದ ಕೆಲಸವನ್ನು ಸಾಧಿಸಿರಲಿಲ್ಲ. ಈಚೆಗೆ ಮೂರು ವರ್ಷಗಳಿಂದ ಸಂಸ್ಥಾನಾದ್ಯಂತ ಅನೇಕ ರೈತರು ಇದರ ಅನುಕೂಲ ತಿಳಿದು ವರ್ಷೇ ವರ್ಷೆ ಇದನ್ನು ಜಾಸ್ತಿ ಮಾಡುತ್ತಾ ತನ್ಮೂಲಕ ಹೆಚ್ಚು ಆಹಾರ ಬೆಳೆದು ದೇಶದ ಆಹಾರ ಪರಿಸ್ಥಿತಿ ಸುಧಾರಿಸಲು ಅವರು ಪ್ರಯತ್ನಪಟ್ಟಿದ್ದಾರೆ. ಇದನ್ನು ವರ್ಷೇ ವರ್ಷೆ ಇನ್ನೂ ಹೆಚ್ಚಾಗಿ ಪ್ರಚಾರಮಾಡಿ ಇನ್ನೂ ಹೆಚ್ಚು ವಿಸ್ತೀರ್ಣದಲ್ಲಿ ಈ ವ್ಯವಸಾಯವನ್ನು ಜಾರಿಗೆ ತಂದು ತನ್ಮೂಲಕ ದೇಶಕ್ಕೆ ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಇದಕ್ಕೆ ಹೆಚ್ಚು ನಿಗ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ. ಮತ್ತು ಇದರ ಉಪಯೋಗ ಎಷ್ಟಿದೆಯೆಂಬುದು ಜನರಿಗೆ ಮನದಟ್ಟಾಗುವ ರೀತಿಯಲ್ಲಿ ಸರ್ಕಾರದವರು ತಮ್ಮ ಉತ್ತರ ಕೊಡುವಾಗ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಪ್ರದೇಶದಲ್ಲಿ ಇದನ್ನು ಬೆಳೆದಿದ್ದಾರೆ ಮತ್ತು ಎಷ್ಟು ಅದರಿಂದ ಉತ್ಪತ್ತಿಯಾಗಿದೆ ಎಂದು ಅಂಕೀಅಂಶ ಸಹ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

* ಶ್ರೀ ವಿ. ವೆಂಕಟಪ್ಪ ಚನ್ನಪಟ್ಟಣ).—ಸ್ವಾಮಿ, 14 ಲಕ್ಷ ರೂಪಾಯಿಗಳು ಗೊಬ್ಬರ ಮತ್ತು ಬೀಜಗಳನ್ನು ಕೊಡುವುದರಲ್ಲಿ ಲುಕ್ಸಾನಾಗಿದೆ, ಅದನ್ನು ರೈಟಾಫ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸಾವಿರ ರೂಪಾಯಿಗಳು ಯಾವುದಕ್ಕಾದರೂ ಬೇಕೆಂದು ಕೇಳಿದರೆ ಕೊಡುವುದು ಕಷ್ಟ ಎಂದು ಹೇಳುವ ಸರ್ಕಾರ 13-14 ಲಕ್ಷ ರೂಪಾಯಿಗಳನ್ನು ಯಾವ ಸಂದರ್ಭದಲ್ಲಿ, ಏತಕ್ಕೆ, ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋಯಿತು, ಎಷ್ಟು ವರ್ಷಗಳಿಗೆ ಸಂಬಂಧಪಟ್ಟಿದೆ, ಒಂದೇ ವರ್ಷದಲ್ಲಿ ಈ 14 ಲಕ್ಷ ರೂಪಾಯಿಗಳ ನಷ್ಟವಾಯಿತೆ ಎಂದು ಏನೂ ವಿವರಣೆಯಿಲ್ಲದೆ, ಈ ರೀತಿಯಾಗಿದೆ, ಮುಂದಿನವರ್ಷ ಇದಕ್ಕೆ ಪ್ರೊವೈಡ್ ಮಾಡಬೇಕು, ಇಂಥಾದ್ದು ರೈಟಾಫ್ ಮಾಡಬೇಕು, ಎಂಬ ವಿವರಗಳನ್ನು ನಮ್ಮ ಮುಂದಿಡದೆ, ಏಳು ಲಕ್ಷ ಪ್ರೊವೈಡ್ ಮಾಡಿದ್ದರೆ 20 ಲಕ್ಷ ಖರ್ಚುಮಾಡಿ, ಖರ್ಚಾಗಿದೆ ಎಂದು ರಿವೈಸ್ಡ್ ಎಸ್ಟಿಮೇಟ್ ತೋರಿಸಿ, ಹೀಗೆ ಈ ಸರ್ಕಾರದವರು ಹಣ ಖರ್ಚು ಮಾಡುತ್ತಿದ್ದಾರೆಂದು ಹೇಳುವುದಾದರೆ ನನಗಂತೂ ಅರ್ಥವಾಗುವುದಿಲ್ಲ. ಇದಕ್ಕೆಲ್ಲಾ ನಾನು ಏನು ಹೇಳಲಿ? ಇವರು ಈ ಕೆಲಸಗಳನ್ನೆಲ್ಲಾ ಯಾರ ಜವಾಬ್ದಾರಿಯಮೇಲೆ ಮಾಡಿದರು? ಇದಕ್ಕೇನಾದರೂ ಒಂದು ಲೆಜಿಸ್ಲೇಷನ್ ಕ್ರಮವಿದೆಯೇ ಅಥವಾ ಇಲ್ಲವೇ ಎಂಬುದೊಂದೂ ಗೊತ್ತಾಗುತ್ತಿಲ್ಲ. ಇವರು ಈ ಲೆಜಿಸ್ಲೇಟಿವ್ ಅಸೆಂಬ್ಲಿಯ ಮುಂದೆ ಈ ವಿಚಾರಗಳನ್ನೆಲ್ಲಾ ತಂದು ಪ್ರತಿನಿಧಿಗಳಿಗೆ ಸರಿಯಾಗಿ ಅವುಗಳ ಬಗ್ಗೆ ವಿವರಣೆ ಕೊಟ್ಟು, ಅವರ ಒಪ್ಪಿಗೆಯನು ಪಡೆದನಂತರ ಇವರು ಇವುಗಳನ್ನೆಲ್ಲಾ ಹೀಗೆ ವಜಾ ಮಾಡಬಹುದಿತ್ತು. ಆ ರೀತಿ ಮಾಡಲು ಇವರಿಗಿದ್ದ ತೊಂದರೆ ಏನು? ಇವರು ಈ ವಿಚಾರಗಳನ್ನೆಲ್ಲ ಈ ಸಭೆಯಮುಂದೆ ಇಟ್ಟು ಇಂತಿಂಥ ಕಾರಣಗಳಿಂದ ಇಂತಿಂಥಾ ಬಾಬಿನಲ್ಲಿ ಇಷ್ಟು ಲುಕ್ಸಾನಾಗಿದೆ, ಇಂತಿಷ್ಟು ಮೊಬಲಗನ್ನು ರಿಕವರ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಈ ಮೊಬಲಗನ್ನು ಈ ಸಭೆ ಒಪ್ಪಿಗೆ ಪಡೆದು ರೈಟ್‌ಆಫ್ ಮಾಡಬಹುದಾಗಿತ್ತು. ಹಾಗೇಕೆ ಮಾಡಲಿಲ್ಲ? ಈರೀತಿ ಇದನ್ನು ಮಾಡಬೇಕಾಗಿದ್ದುದು ಕ್ರಮವೋ ಅಥವಾ ಇವರಿಗೆ ಮನಸ್ಸಿಗೆ ಬಂದಹಾಗೆ ಯಾರ್ಯಾರಿಗೆ ಬೇಕೋ ಅವರಿಗೆ ರೈಟ್ ಆಫ್ ಮಾಡಿದ್ದೇವೆಂದು ಹೇಳಿ ಯಾವುದೋ ಲೆಕ್ಕದಲ್ಲಿ ಸೇರಿಸಿ ಈ ರೀತಿಯೆಲ್ಲಾ ಮಾಡತಕ್ಕದ್ದು ನೋಡಿದರೆ ಈ ಆಡಳಿತ ಒಂದು ಶಾಸನಬದ್ಧವಾದ ರೀತಿಯಲ್ಲಿ ನಡೆಯುತ್ತಿದೆಯೆಂದು ನಾನಂತೂ ನಂಬುವುದಕ್ಕಾಗುವುದಿಲ್ಲ. ಇನ್ನು ಸರ್ಕಾರದವರು ಈ ವ್ಯವಸಾಯದ ಹೆಡ್ಡಿನಲ್ಲಿ—ಬೊಟಾನಿಕಲ್ ಮತ್ತು ಇತರ ಸಾರ್ವಜನಿಕ ಉದ್ಯಾನವನಗಳು ಎಂಬ ಬಾಬಿಗಾಗಿ ಈ ವರ್ಷ 18 ಲಕ್ಷ ಚಿಲ್ಲರೆ ರೂಪಾಯಿಗಳ ವೆಚ್ಚವನ್ನು ತೋರಿಸಿದ್ದಾರೆ. ವಿಧಾನಸೌಧದ ತೋಟಗಳಿಗೆ ನೀರನ್ನು ಸರಬರಾಯಿ ಮಾಡಲು "ಬೋರ್‌ವೆಲ್" ಬಾವಿಗಳನ್ನು ತೋಡಿಸುವುದಕ್ಕೂ ಮತ್ತು ಅಲ್ಲಿ ಉಪ

ಯೋಗಿಸುವುದಕ್ಕಾಗಿ ಟ್ರಾಕ್ಟರನ್ನೂ ಕೊಳ್ಳುವುದಕ್ಕಾಗಿ ಹಣವನ್ನೊದಗಿಸಿದ್ದಾರೆ. ಈ ವ್ಯವಸಾಯದ ಬಾಬಿಗೋಸ್ಕರ ಖರ್ಚುಮಾಡಲು ತೆಗೆದಿಟ್ಟಿರುವ ಹಣಕ್ಕೂ ಮತ್ತು ಈ ವಿಧಾನಸೌಧದ ಉದ್ಯಾನವನಕ್ಕೂ ಏನು ಸಂಬಂಧವಿದೆ? ಆ ದಿವಸ ಈ ವಿಧಾನಸೌದದ ಬಗ್ಗೆ ಆಗತಕ್ಕಂಥಾ ಒಟ್ಟು ವೆಚ್ಚದ ಮೊಬಲಗು ಒಂದು ಕೋಟಿ 30 ಲಕ್ಷ ಎಂಬುದಾಗಿ ತಿಳಿಸಿ ಪುನಃ ಈ ದಿವಸ ಈ ವ್ಯವಸಾಯದ ಬಾಬಿನಲ್ಲಿ ಒಂದು 10 ಲಕ್ಷ ವಿದ್ಯುಚ್ಛಕ್ತಿ ಬಾಬಿನಲ್ಲಿ, ಒಂದು 10-15 ಲಕ್ಷ ಇನ್ನೊಂದು ಬಾಬಿನಲ್ಲಿ, ಇನ್ನಷ್ಟು ದುಡ್ಡು ಇನ್ನೊಂದು ಬಾಬಿನಲ್ಲಿ ಹೀಗೆಲ್ಲಾ ಒದಗಿಸಿ ಹೀಗೆ ಕಣ್ಣು ಮುಚ್ಚಿ ಜನರನ್ನು ಮೋಸಗೊಳಿಸತಕ್ಕ ರೀತಿಯಲ್ಲಿ ಕೆಲಸಮಾಡತಕ್ಕದ್ದು ಸರ್ಕಾರಕ್ಕೆ ಸರಿಯಾದ ನೀತಿಯಲ್ಲ. ವ್ಯವಸಾಯದ ಇಲಾಖೆಗೆ ಒದಗಿಸಿದಂಥ ಮೊಬಲಗು ಸಂಪೂರ್ಣವಾಗಿ ಆ ಇಲಾಖೆಯ ಕೆಲಸಕಾರ್ಯಗಳಿಗೇ ವೆಚ್ಚವಾಗಬೇಕು. ಆಯಾ ಇಲಾಖೆಗೆ ಒದಗಿಸತಕ್ಕಂಥ ಮೊಬಲಗು ಆಯಾಯ ಇಲಾಖಾ ಕೆಲಸಕಾರ್ಯಗಳಿಗೇ ಉಪಯೋಗಿಸಲ್ಪಡಬೇಕು. ಈ ರೀತಿಯ ಒಂದು ಸಾಂಪ್ರದಾಯ ಹಿಂದಿನಿಂದಲೂ ಆಚರಣೆಯಲ್ಲಿ ನಡೆದುಕೊಂಡು ಬಂದಿದೆ. ಆದರೆ ಈ ದಿವಸ ಆ ವಿಧಾನಸೌಧದ ಬಗ್ಗೆ ಆಗತಕ್ಕ ಖರ್ಚುಗಳ ಸಂಬಂಧವಾಗಿ ಪ್ರತಿಯೊಂದು ಇಲಾಖೆಗೂ ಅಷ್ಟಷ್ಟು ಸೇರಿಸಿ ಆ ವಿಧಾನಸೌಧಕ್ಕೆ ಕೇವಲ ಒಂದು ಕೋಟಿ 30 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಯಿತು ಎಂದು ಹೇಳುವುದು ಸರಿಯಾದ್ದಲ್ಲ. ಅದೇನೋ ಕೆಲವರು ಹೇಳುತ್ತಿದ್ದರು "ಆ ಮಂತ್ರಿಗಳ ಕಣ್ಣಿಗೆ ಮಣ್ಣೆರಚುವ ಕೆಲಸ" ಎಂದು. . . .

ಉಪಾಧ್ಯಕ್ಷರು.—ಆ ಮೊಬಲಗನ್ನು ವಿಧಾನಸೌಧದ ಗಾರ್ಡನ್ ಬಗ್ಗೆ ಉಪಯೋಗಿಸಲಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಆ ವಿಧಾನಸೌಧದ ಬಿಲ್ಡಿಂಗ್ ಬಗ್ಗೆ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿಗೂ, ಇನ್ನು ಅದಕ್ಕೆ ಸಂಬಂಧಪಟ್ಟ ರೋಡುಗಳನ್ನು ಮತ್ತೊಂದು ಇಲಾಖೆಗೂ, ಹೀಗೇ ಒಂದೊಂದು ಐಟಂ ಕೆಲಸವನ್ನೂ ಒಂದೊಂದು ಬೇರೆ ಇಲಾಖೆಗೂ ಸೇರಿಸಿಬಿಟ್ಟರೆ ಆ ಕಟ್ಟಡಕ್ಕಾಗಿ ಏನೂ ಖರ್ಚಾದಂತೆಯೇ ಆಗುವುದಿಲ್ಲ. ಆದರೆ ಈ ವಿಷಯಗಳನ್ನೆಲ್ಲಾ ಜನರಿಗೆ ಸರಿಯಾಗಿ ತಿಳಿಸದೆ ಇರುವುದು ಸರ್ಕಾರಕ್ಕೆ ಸರಿಯಾದ ಮಾರ್ಗವಲ್ಲವೆಂದು ಹೇಳುತ್ತೇನೆ.

Mr. DEPUTY SPEAKER.—What time does the Hon'ble Minister require to reply? Does he require 15 minutes or 10 minutes?

Dr. R. NAGAN GOWDA.—10 minutes will be all right.

*ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ವಿಧಾನಸೌಧದ ತೋಟಗಳಿಗಾಗಿ ವೆಚ್ಚಮಾಡಬೇಕಾದ ಹಣವನ್ನು ಈಗ ಅಗ್ರಿಕಲ್‌ಚರಲ್ ಇಲಾಖೆಗೆ ಸೇರಿಸಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಅದನ್ನು ತಿಳಿಯಲು, ಪ್ರಾಯಶಃ ಅವರು ವಿಧಾನಸೌಧದ ಬಳಿ ಇರಬಹುದು, ಆದ್ದರಿಂದ ಅವರನ್ನು ಬರಮಾಡಿಕೊಂಡಿದ್ದರೆ ಚೆನ್ನಾಗಿರುತ್ತದೆಂದು ಹೇಳುತ್ತೇನೆ.

Mr. DEPUTY SPEAKER.—That is not my responsibility.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಜೇನು ಸಾಕುವುದು ಲಾಭದಾಯಕವಾಗಿರುವುದಿಲ್ಲವೆಂದು ಹೇಳುತ್ತೇನೆ. ಈ ಬಾಬಿನಲ್ಲಿ ಸುಮಾರು ಲಕ್ಷಾಂತರ ರೂಪಾಯಿಗಳು ಕೇವಲ ಸಂಬಳ ಸಾರಿಗೆ ರೂಪದಲ್ಲಿ ಖರ್ಚಾಗುತ್ತಿವೆ, ಜೇನು ಸಾಕುವುದರಿಂದ ಸಂಸ್ಥಾನಕ್ಕೆ ಏನು ಆದಾಯ ಬರುತ್ತಿದೆ ಎಂಬುದನ್ನು ಕಂಡುಹಿಡಿಯುವುದಕ್ಕೇ ಸಾಧ್ಯವಿಲ್ಲ.

ಇನ್ನು ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡುವುದರ ಬಗ್ಗೆ ಪ್ರದರ್ಶನ ಮತ್ತು ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲು ಈ ಡಿಮ್ಯಾಂಡಿನಲ್ಲಿ ಮೊಬಲಗನ್ನು ಸೇರಿಸಲಾಗಿದೆ. ಆದರೆ ಈ ದಿವಸ ಆ ರೀತಿಯಾಗಿ ಯಾವ ಒಬ್ಬ ಫೀಲ್ಡ್‌ಮನ್ ಕೂಡ ಹಳ್ಳಿಗಳಲ್ಲಿ ಪ್ರಚಾರ ಕಾರ್ಯಗಳನ್ನು ನಡೆಸುತ್ತಿಲ್ಲ. ಸರ್ಕಾರದವರು ಮತ್ತೆ ಎಲ್ಲಿ ಪ್ರಚಾರಗಳನ್ನು ನಡೆಸುತ್ತಾರೋ ಗೊತ್ತಾಗುವುದಿಲ್ಲ. ಆದಕಾರಣ ಇದೊಂದುವೇಳೆ ಹಾಗೆ ಅನುಕೂಲವಾಗುವುದಾದರೆ ಈ ಕಾರ್ಯವನ್ನು ಸ್ಕೌಟ್‌ಗಳ ಮೂಲಕ ನಡೆಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಜಿ.ಎಂ.ಎಫ್. ಸ್ಕೀಮಿನ ಬಗ್ಗೆ ನೇಮಿಸಿಕೊಂಡಿದ್ದ ಸಿಬ್ಬಂದಿ, ಆ ಬಾಬು ಮುಗಿದುಹೋಗಿದ್ದಾಗ್ಯೂ ಇನ್ನೂ ಹಾಗೆಯೇ ಇದೆ. ಅವರನ್ನು ಕೂಡಲೆ ಕೆಲಸದಿಂದ ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹಾರ್ಟಿಕಲ್‌ಚರ್ ಎಂಬ ಬಾಬಿನಲ್ಲಿ ಮೈಸೂರಿನ ಜೂಆಲಾಜಿಕಲ್ ಉದ್ಯಾನವನವನ್ನು ಉತ್ತಮಪಡಿಸಲು 40 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲಿಯ ಪ್ರಾಣಿಗಳ ಆಹಾರಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತಿದೆ. ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್‌ನಲ್ಲೂ, ಅನುಪಯೋಗವಾಗುತ್ತಿರುವಂಥ ಆಕಳು ಇತ್ಯಾದಿಗಳನ್ನು ಅಲ್ಲಿಯ ಸ್ಲಾಟರ್ ಹೌಸುಗಳಿಗೆ ಕಳುಹಿಸಲು ಸೂಕ್ತ ರೀತಿಯಲ್ಲಿ ಈ Cow Slaughter Actನ್ನು ತಿದ್ದುಪಡಿ ಮಾಡಿ ಈ ಮುದಿರಾಸುಗಳನ್ನೆಲ್ಲಾ ಅಲ್ಲಿಗೆ ಕಳುಹಿಸಿದರೆ ಅಲ್ಲಿರುವ ಮೃಗಗಳ ಆಹಾರಕ್ಕಾಗಿ ಇವುಗಳನ್ನು ಉಪಯೋಗಿಸಬಹುದು.

ಇನ್ನು ಟ್ರಾಕ್ಟರುಗಳ ವಿಚಾರ ಹೇಳುವುದಾದರೆ ಅವು ಸದಾ ಸಿಕ್‌ನಲ್ಲೇ ಇರುತ್ತವೆ; ಎಂದರೆ ಖಾಯಿಲೆ ಬಿದ್ದಿರುತ್ತವೆ. ಆದರೆ ನಮ್ಮ ಡಾಕ್ಟರ್ ಅವರು ಅವುಗಳ ಬಗ್ಗೆ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಂಡಿಲ್ಲ. ಇವರು ಕುಳಿತಲ್ಲಿಯೇ ಕುಳಿತಿದ್ದಾರೆ; ಎಂದರೆ ಇವರು ಇಲ್ಲಿಯೇ ಕುಳಿತು ಕೆಲಸ ಮಾಡುತ್ತಿದ್ದಾರೆ. ಇವರು ಬೇಗ ಅವುಗಳನ್ನು ಉತ್ತಮಪಡಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

Mr. DEPUTY SREAKER.—The Hon'ble Minister will now reply.

Sri T. MARIAPPA.—I want the Hon'ble Minister to clarify the position with regard to the tractors. It was initiated by Sri L. Siddappa; it was continued for some time and stopped.

Sri A. BHEEMAPPA NAIK.—With regard to the losses, I want to know whether it is on account of the subsidies; even now I feel that it is on account of the subsidies that have been

(SRI A. BHEEMAPPA NAIK.)

granted for manure, seeds and other things. I want him to clarify the position and from how long these losses have been incurred; is it from the last year?

Mr. DEPUTY SPEAKER.—I hope the Hon'ble Minister will reply satisfactorily to all the points raised.

Sri M. PALANIYAPPAN (Ulsoor).—We have tabled several cut motions. I would also request the Hon'ble Minister to answer the points raised in all those cut motions.

*ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಈ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಈಗ ಅನೇಕ ವಿಷಯಗಳನ್ನು ಹೇಳಿದ್ದಾರೆ. ಹೋದವರ್ಷ ನಾವು ಹದಿನೈದು ನೂರು ಟನ್ ಕಬ್ಬಿಣವನ್ನು ಕೇಳಿದ್ದೆವು. ಅವರು ನಮಗೆ 190 ಟನ್‌ಗಳನ್ನು ಮಾತ್ರವೇ ಕೊಟ್ಟರು. ಹೀಗೆ ಇದು ಬಹಳ ಕಡಮೆ ಪ್ರಮಾಣದಲ್ಲಿ ಸರಬರಾಯಿ ಆಯಿತು. ಆದರೆ ಈಗ ಅವರು 15 ನೂರು ಟನ್ ಕಬ್ಬಿಣ ಕೊಡಲು ಒಪ್ಪಿಕೊಂಡಿದ್ದಾರೆ. ಅದನ್ನು ಬೇಗ ಕಳುಹಿಸುವುದಾಗಿ ತಿಳಿಸಿದ್ದಾರೆ. ಈ 15 ನೂರು ಟನ್ ಕಬ್ಬಿಣವನ್ನು ವ್ಯವಸಾಯೋದ್ದೇಶಗಳಿಗಾಗಿ ಮಂಜೂರಾಗಿದೆ. ಇಷ್ಟೇ ಅಲ್ಲದೆ ಇದರ ಜೊತೆಗೆ 15 ನೂರು ಟನ್ rounds ಗಳನ್ನೂ ಕೂಡ ಮಂಜೂರುಮಾಡಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗೆ ಅಲಾಟ್ ಮಾಡಿದ್ದೇವೆ. ಈಗಾಗಲೇ ಚಿಕ್ಕಮಗಳೂರು, ತರೀಕೆರೆ, ಚನ್ನಪಟ್ಟಣ ಈ ಸೊಸೈಟಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಅಲಾಟ್ ಮಾಡುವವರು ಯಾರು?

ಡಾ॥ ಆರ್. ನಾಗನಗೌಡ.—ಅಲಾಟ್ ಮಾಡುವವರು ಯಾರೇ ಆದರೂ ಈ ವರ್ಷ ಆ ಪ್ರಶ್ನೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ಗುಳದ ವಿಷಯ ಅನೇಕ ಸದಸ್ಯರುಗಳು ಹೇಳಿದರು, ಸಣ್ಣ ಪ್ರಮಾಣದಲ್ಲಿ ರೈತರಿಗೆ ಗುಳ ಬೇಕಾದಾಗ ರೆವಿನ್ಯೂ ಇನ್ಸ್‌ಪೆಕ್ಟರಿಂದ ಪರ್ಮಿಷನ್ ತೆಗೆದುಕೊಂಡು ಹೋಗಬೇಕೆಂದರೆ ಕಷ್ಟವಾಗುತ್ತದೆ ಎಂದು ಹೇಳಿದ ಮೇಲೆ ಈಗ 18 ಅಡಿ ಉದ್ದದ ಬಾರು ಪರ್ಮಿಷನ್ ಇಲ್ಲದೆ ತೆಗೆದುಕೊಳ್ಳಬಹುದು ಎಂದು ಹೇಳಿ ಆಜ್ಞೆ ಮಾಡಿದ್ದೇವೆ. ಆ ರೀತಿ ಕೊಡುತ್ತಾ ಇದ್ದಾರೆ. ಇನ್‌ಸ್ಟ್ರಕ್ಷನ್ ಇಷ್ಯೂ ಮಾಡಿ ಸರ್ಕ್ಯುಲರ್ ಕಳುಹಿಸಿದ್ದೇವೆ. ಆದಕಾರಣ ಕಬ್ಬಿಣದ ವಿಷಯದಲ್ಲಿ ನಾವು ಈ ವರ್ಷ ಎಲ್ಲಾ ಸೊಸೈಟಿಗಳಿಗೂ ಕಾಗದ ಬರೆದು ಇಷ್ಟು ನಿಮಗೆ ಅಲಾಟ್ ಮಾಡಿದ್ದೇವೆ, ನೀವು ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಸರ್ಕ್ಯುಲರ್ ಹೊರಡಿಸಿದ್ದೇವೆ. ಎಷ್ಟು ತೆಗೆದುಕೊಂಡಿದ್ದಾರೆ ಎಂಬ ಲೆಕ್ಕ ಕೂಡ ಇಟ್ಟುಕೊಂಡಿದ್ದೇವೆ. ಈ ವರ್ಷ ಕಬ್ಬಿಣದ ವಿಷಯದಲ್ಲಿ ತೊಂದರೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಇಮಾಂರವರು ಟ್ರ್ಯಾಕ್ಟರ್ ವಿಷಯ ಹೇಳಿದರು. ಅವರ ಗಮನಕ್ಕೆ ನಾನು ಈ ವಿಷಯದಲ್ಲಿ ಒಂದು ಅಂಶವನ್ನು ತರಬೇಕೆಂದು ಇದ್ದೇನೆ. ಈ ಟ್ರ್ಯಾಕ್ಟರುಗಳನ್ನು ಕೊಂಡದ್ದು 1948ರಲ್ಲಿ.

ಶ್ರೀ ಟಿ. ಮರಿಯಪ್ಪ.—1945-46ರಲ್ಲೇ ಕೊಂಡುಕೊಳ್ಳಲಾಗಿತ್ತು.

ಡಾ॥ ಆರ್. ನಾಗನಗೌಡ.—1948ರಲ್ಲಿ ನಮ್ಮ ಹತ್ತಿರ 23 ಟ್ರ್ಯಾಕ್ಟರುಗಳು ಇದ್ದವು. 19 8 ರಿಂದ ಇತ್ತೀಚೆಗೆ ನಾವು 128 ಟ್ರ್ಯಾಕ್ಟರುಗಳನ್ನು ಕೊಂಡಿದ್ದೇವೆ. ಯಾವಾಗ ಎಂದರೆ ಸೆಪ್ಟೆಂಬರ್ 48ರಲ್ಲಿ 80, ನವೆಂಬರ್ 48ರಲ್ಲಿ 28, ಆಮೇಲೆ 20 ಟ್ರ್ಯಾಕ್ಟರುಗಳನ್ನು ಕೊಂಡೆವು. ಈ ಟ್ರ್ಯಾಕ್ಟರುಗಳಲ್ಲಿ youngest ಅನ್ನುವುದಕ್ಕೆ ಏಳು ವರ್ಷ ವಯಸ್ಸಾಗಿದೆ. ಈ ಟ್ರ್ಯಾಕ್ಟರ್‌ಗಳು ಕೆಲಸ ಮಾಡುವುದಕ್ಕೆ ಪ್ರತಿ ಟ್ರ್ಯಾಕ್ಟರಿಗೂ 10 ಸಾವಿರ ಘಂಟೆ ಕೆಲಸ ಮಾಡಬಹುದು ಎಂಬ ಒಂದು ಟೈಂಲಿಮಿಟ್ ಇದೆ. ನಾನು ಮೊದಲೇ ಹೇಳಿದ ಹಾಗೆ ಬಹಳ ಕಮ್ಮಿ ವಯಸ್ಸಾಗಿರುವುದು ಎನ್ನುವುದಕ್ಕೆ ಏಳು ವರ್ಷ ವಯಸ್ಸಾಗಿದೆ. ಇನ್ನೂ ಮಿಕ್ಕದಕ್ಕೆ 8-10 ವರ್ಷ ಆಗಿದೆ. ಆದಕಾರಣ ವಯಸ್ಸಾದ ಹಾಗೆಲ್ಲಾ parts wear out ಆಗುತ್ತದೆ, wear out ಆದ ಪಾರ್ಟ್ಸನ್ನು ರೀಪ್ಲೇಸ್ ಮಾಡಬೇಕಾಗುತ್ತದೆ. ರೀಪ್ಲೇಸ್ ಮಾಡಿದರೂ ಕೆಲವು ಕೆಲಸ ಮಾಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಯಾವ ಒಂದು ಟ್ರ್ಯಾಕ್ಟರ್ ಆದರೂ ಸಾವಿರ ಘಂಟೆ ಕೆಲಸ ಮಾಡಿದೆಯೇ ಎಂಬುದನ್ನು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ದೀರ್ಘ ಕಾಲ ಟ್ರ್ಯಾಕ್ಟರುಗಳು ಕೆಲಸ ಮಾಡಿವೆ ಎಂಬುದನ್ನು ತಮ್ಮ ಗಮನಕ್ಕೆ ತಂದೆ, 10 ಸಾವಿರ ಘಂಟೆ ಕೆಲಸ ಮಾಡಬಹುದು, ಐದು ವರ್ಷದೊಳಗೆ ಆ ಲಿಮಿಟ್ ಮೀರುತ್ತದೆ. ಅದೂ ಅಲ್ಲದೆ rust and other things like that happen with regard to them.

Mr. DEPUTY SPEAKER.—Sri Venkatappa has raised a point. He wants a definite reply about the loss of Rs. 14 lakhs.

Dr. R. NAGAN GOWDA.—That is the position with regard to tractors. The losses amounting to Rs. 14 lakhs, that was mentioned, are due to subsidy as per the policy of the Government at that time to sell manure at a reduced price.

ಅದನ್ನು ನಾವು ಅಕೌಂಟ್ಸ್‌ನಲ್ಲಿ ರೀಕೂಪ್ ಮಾಡಿರಲಿಲ್ಲ, ಈಗ ಮಾಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇದರಲ್ಲಿ ಬಂದಿರುವುದು shortage and loss ಎಂದು, subsidy ಎಂದಲ್ಲ, ಇಲ್ಲಿ ಯಾವುದು ಸಬ್ಸಿಡಿ, ಸಬ್ಸಿಡಿ ಎಷ್ಟು, loss ಎಷ್ಟು, shortage ಎಷ್ಟು ಎಂಬ ವಿವರಗಳನ್ನು, I think the Government is bound to give. It is not found in the Budget.

Mr. DEPUTY SPEAKER.—You have got better opportunity to speak about these at the time of debate on the Appropriation Bill.

Dr. R. NAGAN GOWDA.—The Government had decided to give manure at half the rate and that is being adjusted now. We have got a mobile unit which has been taken into account now and hence the Demand is now asked for.

Sri A. BHEEMAPPA NAIK.—Why don't you give details with regard to subsidy and how much is the loss and how much is the shortage? If the Hon'ble Minister gives those details, the House will be satisfied.

Sri B. HUTCHE GOWDA.—Then that must come in the Budget.

Mr. DEPUTY SPEAKER.—You may raise all these points at the time of discussion on the Appropriation Bill.

Dr. R. NAGAN GOWDA.—I am able to give all those details later on. Now we have allowed about two per cent for shortages, etc. But wherever there had been shortages of more than two per cent, in those cases we have taken action on the people that have been responsible for them. About the details under three Heads, I will be able to give them later on. With regard to the point raised by Sri Byre Gowda about stabilisation of prices, that is a very big problem by itself. ಅದನ್ನು ಸ್ಟೆಬಿಲೈಸ್ ಮಾಡುವುದು ಅಷ್ಟು ಸುಲಭವಾಗಿ ಆಗುವುದಿಲ್ಲ. ಇಷ್ಟೇ ವಿಸ್ತೀರ್ಣ ಬೆಳೆಯಬೇಕು ಹೆಚ್ಚಾಗಿ ಬೆಳೆದರೆ ಮಾರ್ಕೆಟ್ ಸಪ್ಲೈ ಹೆಚ್ಚಾಗಿ ಧಾರಣೆ ಕಮ್ಮಿ ಆಗುತ್ತದೆ ಎಂದು ಹೇಳಿ U.S.A. ನಿದರ್ಶನ ಕೊಟ್ಟರು. ಅದನ್ನು ಮಾಡಿದರೂ ಕೂಡ ಕೆಲವು ಮಟ್ಟಿಗೆ ಫಲಕಾರಿಯಾಯಿತೇ ಹೊರತು ಪೂರ್ಣವಾಗಿ ಫಲಕಾರಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ.

Mr. DEPUTY SPEAKER.—The question is:

> "That a sum not exceeding Rs. 74,21,641 be granted to the Government to defray the charges which will come in course of payment during the year ending 31st day of March 1957, in respect of 'Agriculture'."

The motion was adopted.

DEMAND No. 24—VETERINARY.

41. VETERINARY.

Mr. DEPUTY SPEAKER.—Motion moved:

> "That a sum not exceeding Rs. 37,09,444 be granted to the Government to defray the charges which will come in course of payment during the year ending 31st day of March 1957, in respect of 'Veterinary'."

10 A.M.

I would request the Whips of the parties concerned to select some few speakers so that I can give them sufficient time to meet all the points; otherwise, it is very difficult for me to allow members to speak.

Sri A. BHEEMAPPA NAIK (Molakalmuru).—This suggestion has just now come from the Chair. Even to select speakers, we need time. Therefore it will be difficult to select persons.

Mr. DEPUTY SPEAKER.—You can realise my difficulty. There are so many Hon'ble Members who have tabled cut motions; we have to give them time. That difficulty also must be realised by you.

*ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಪಶು ವೈದ್ಯ ಶಾಖೆ ಇದುವರೆಗೂ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಮೈಸೂರು ದೇಶದಲ್ಲಿ ಪ್ರತಿ 28,000 ದನಗಳಿಗೂ ಒಂದು ವೈದ್ಯ ಶಾಲೆಯಿರುವ ರೀತಿಯಲ್ಲಿ ಏರ್ಪಾಡು ಮಾಡಿದ್ದೇವೆ. ಇದು ಬಹಳ ಅಭಿನಂದನೀಯವಾಗಿದೆ. ಆದರೆ ಪಶು ವೈದ್ಯಶಾಲೆಗಳು ಎಷ್ಟರಮಟ್ಟಿಗೆ ಸಾಮಾನುಗಳನ್ನು ಹೊಂದಿವೆ, ಔಷಧಿಗಳನ್ನು ಹೊಂದಿವೆ ಎಂಬುದನ್ನು ಯೋಚನೆಮಾಡಿದರೆ ವಿಷಾದವಾಗುತ್ತದೆ. ಸುಮ್ಮನೆ ಒಬ್ಬರು ಇನ್ಸ್ಪೆಕ್ಟರಿದ್ದರೆ ಅಥವಾ ಡಾಕ್ಟರಿದ್ದರೆ ಅದನ್ನು ಪಶು ವೈದ್ಯಶಾಲೆಯೆಂದು ಕರೆಯುವುದು ಸರಿಯೇ? ನಾರಾಯಣಸ್ವಾಮಿ ನಾಯ್ಡುರವರು ಬಹಳ ದಿವಸಗಳು ಪಶು ವೈದ್ಯಶಾಲೆಯ ಡಾಕ್ಟರಾಗಿ ಕೆಲಸ ಮಾಡಿಕೊಂಡು ಬಂದರು. ಅವರು ಯಾವ ಕಾರಣಕ್ಕಾಗಿಯೋ ಹೊರಟು ಹೋದರು. ಅವರಾದಮೇಲೆ ಇನ್ನೊಬ್ಬರನ್ನು ನೇಮಿಸಿದರು, ಅವರು ಡ್ಯೂಟಿಗೆ ಬರಲಿಲ್ಲ. ಅದರಮೇಲೆ ಇನ್ನೊಬ್ಬರನ್ನು ನೇಮಕ ಮಾಡಿದರು. ಈಗ ಅದರ ಆಡಳಿತ ಅವರಿಂದ ನಡೆಯುತ್ತಿದೆಯೋ ಅಥವಾ ಇನ್ನಾರಿಂದ ನಡೆಯುತ್ತಿದೆಯೋ ಗೊತ್ತಿಲ್ಲ. ಇದು ಆಡಳಿತದ ಏರ್ಪಾಡಿನ ವೈಖರಿ.

ಇನ್ನೊಂದೇನೆಂದರೆ, ಈ ಇಲಾಖೆಗೆ ಸಂಬಂಧಪಟ್ಟ ಪೋರ್ಟ್ ಫೋಲಿಯೋ ಮಂತ್ರಿಗಳು ಈ ಇಲಾಖೆಯ ವಿಚಾರವನ್ನು ನೋಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಒಂದು ಸಾರಿ ರಿಂಡರ್‌ಪೆಸ್ಟ್ ರೋಗ ಮೂರು ತಿಂಗಳು ಕಾಲ ಚಳ್ಳಕೆರೆ ತಾಲ್ಲೂಕಿನಲ್ಲಿತ್ತು. ಒಂದೇ ಸಮನೆ ಹೇಳಿದರೂ ಅದಕ್ಕೆ ಜವಾಬೇ ಇಲ್ಲ! ಜ್ವರಬಂದರೆ ಬಾಯಿದ್ದವರಾದರೆ ಹೇಳಿಕೊಳ್ಳಬಹುದು, ಆದರೆ ಆ ಮೂಕ ಪ್ರಾಣಿಗಳು ಯಾರಿಗೆ ಹೇಳಿಕೊಳ್ಳಬೇಕು?

ಡಾ॥ ಆರ್ ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಯಾವಾಗ ಬಂತು?

ಶ್ರೀ ಎ. ಭೀಮಪ್ಪನಾಯಕ್.—ಹೋದ ವರ್ಷ 5-6 ತಿಂಗಳ ಹಿಂದೆ ನಾನೇ ಬಂದು ಹೇಳಿದೆ. ಕೊನೆಗೆ ಖುದ್ದಾಗಿ ಡೈರೆಕ್ಟರ್ ಆಫೀಸಿಗೆ ಹೋಗಿ ಹೇಳಿದಮೇಲೆ ಬೇಕಾದ serum, ಇಂಜಕ್ಷನ್ ವಗೈರೆಗಳನ್ನು ಕಳುಹಿಸಿದರು. ಅಷ್ಟು ಹೊತ್ತಿಗೆ ಏನಿಲ್ಲವೆಂದರೂ 200-300 ದನಗಳು ಸತ್ತು ಹೋಗಿದ್ದುವು. ಈ ಪ್ರಕಾರ ಈ ಇಲಾಖೆಯ ಆಡಳಿತ ಸರಿಯಾಗಿ ನಡೆಯು

(ಶ್ರೀ ಎ. ಭೀಮಪ್ಪನಾಯಕ್.)

ತ್ತಿಲ್ಲ. I charge the Minister in this respect. ಕಾರಣ ಇಷ್ಟೆ. ಇಂಥ ಇಲಾಖೆಯಲ್ಲಿ ಇಂಥವರು ಅದರ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುವವರು ಎಂದು ಒಂದು ಖಾಯಂ ಏರ್ಪಾಡನ್ನು ಮಾಡದೆ ಇದ್ದರೆ ಹೇಗೆ ಈ ಇಲಾಖೆ efficient ಆಗಿ ನಡೆಯುತ್ತದೆಂದು ಕೇಳುತ್ತೇನೆ. ಯಾವ ಆಸ್ಪತ್ರೆಗೆ ಹೋಗಿ ನೋಡಿದರೂ ನಿರ್ದಿಷ್ಟವಾಗಿ ಏನೇನು ಸಾಮಾನುಗಳು ಬೇಕೋ ಅವು ಸಪ್ಲೈ ಆಗುತ್ತಿಲ್ಲ. ಇದು ವಿಷಾದಕರ. ಸರ್ಕಾರದವರಿಗೆ ಸರಿಯಾಗಿ ಏರ್ಪಾಡುಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಬೇಕು, ಇಲ್ಲದಿದ್ದರೆ ಎಲ್ಲವನ್ನೂ ಮುಚ್ಚಿಬಿಡುವುದು ಲೇಸು.

ಇದೇ ರೀತಿ ವ್ಯವಸಾಯದ ಇಲಾಖೆಯೂ ಆಗಿದೆ. ಅದನ್ನೂ ಮುಚ್ಚಬೇಕೆಂದು ಹೇಳುತ್ತಾರೆ. ಉದ್ದೇಶ ಇಷ್ಟೆ. ಸರಿಯಾಗಿ efficient ಆದ ಏರ್ಪಾಡುಗಳನ್ನಾವುದನ್ನೂ ಮಾಡುತ್ತಿಲ್ಲ. ಅಜ್ಜಂಪುರ ಅಮೃತ ಮಹಲ್ ಫಾರಂ ತೆಗೆದುಕೊಳ್ಳಿ. ಲಕ್ಷಾಂತರ ಎಕರೆಗಳಷ್ಟು ಎಕರೆಗಳನ್ನು ಅವರು ಇಟ್ಟುಕೊಂಡಿದ್ದಾರೆ. ಅನೇಕ ದನಗಳಿವೆ. ಆದರೆ ವರ್ಷೇ ವರ್ಷೇ ನೋಡಿದರೆ ಅಲ್ಲಿ ಹುಟ್ಟುವ ಕರುಗಳಿಗಿಂತ ಸಾಯುವ ದನಗಳ ಸಂಖ್ಯೆಯೇ ಜಾಸ್ತಿಯಾಗಿದೆ. ಇತ್ತೀಚೆಗೇನೋ savings ತೋರಿಸುತ್ತಿದ್ದೇವೆಂದು ಹೇಳುತ್ತಾರೆ. ಇದು ಹೇಗೆ ಆಗಿದೆಯೆಂದರೆ, ದನಗಳಿಗೆ ಹುರುಳಿ ಹಾಕದೆ ಇದ್ದರೆ savings ಆಗಿಯೇ ಆಗುತ್ತದೆ. Savings ಮಾಡುವುದೆಂದರೆ ಈ ರೀತಿ ಅಲ್ಲ. ದನಗಳು ಜಾಸ್ತಿಯಾಗುವುದಕ್ಕೇನಾದರೂ ಮಾಡಿದ್ದೀರಾ? ಕುರಿ ಕುಪ್ಪೆ ಫಾರಂ ಮಾಡಿದ್ದೀರಿ. ಅಲ್ಲಿನ ಖರ್ಚನ್ನು ನೋಡಿದರೆ, ನೀವೇನು ಖರ್ಚುಮಾಡಿ ಎಷ್ಟು ದನಗಳನ್ನು ಸಾಕುತ್ತೀರೋ ಅದಕ್ಕೆರಡರಷ್ಟು ದನಗಳನ್ನು ನೀವು ಖರ್ಚುಮಾಡುವ ಹಣದಿಂದಲೇ ಕೊಳ್ಳಬಹುದು. ಇದು ಪರಿಶೋಧನಾ ರೀತಿಯೇ! ದನಗಳನ್ನು ಅಟ್ಟಿಕೊಂಡು ಹೋಗಿ ಮೇಯಿಸುವುದು, ತಂದು ಕಟ್ಟಿಹಾಕುವುದು—ಇವೇ ನಿಮ್ಮ ಪರಿಶೋಧನಾ ರೀತಿಗಳು ? Artificial Insemination ಎಂದು ಹೇಳುತ್ತಲೇ ಇದ್ದೀರಿ. ಎಲ್ಲೆಲ್ಲಿ ಮಾಡಿದ್ದೀರೆಂಬುದನ್ನು ಹೇಳುತ್ತೀರಾ? ಕೇಳಿದರೆ, ಅದಕ್ಕೆಲ್ಲಾ aeroplane ಬೇಕಾಗುತ್ತದೆ, Artificial Insemination ಮಾಡಬೇಕಾದರೆ 24 ಗಂಟೆಗಳೊಳಗೇ ಮಾಡಬೇಕಾಗುತ್ತದೆ, ಅದನ್ನು cold storageನಲ್ಲಿಡಬೇಕೆಂದು ಹೇಳುತ್ತಾರೆ. ಚಿತ್ರದುರ್ಗದಲ್ಲಿ ನಾನಿದ್ದಾಗ ಈ ಬಗ್ಗೆ ಕೇಳಿದ್ದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಭಾಗದ ಕೋಟಾ ಕೊಟ್ಟಿಲ್ಲ, ಅವರು ಕೊಟ್ಟಮೇಲೆ ಮಾಡುತ್ತೇವೆ ಎಂದು ಹೇಳಿದರು. ಅವರಿಂದ ಕೋಟಾ, ಇವರಿಂದ ಕೋಟಾ ತೆಗೆದುಕೊಂಡು 100 ಕಡೆ ಏರ್ಪಾಡು ಮಾಡುತ್ತೇವೆನ್ನುವುದಕ್ಕೆ ಬದಲಾಗಿ ಹತ್ತು ಕಡೆ ನೀವೇ ಸ್ವಂತವಾಗಿ ಏರ್ಪಾಡು ಮಾಡಿ.

Castration of Scrub Bulls ಎಂದು ಹೇಳಿ ಶ್ರೀ ಮರಿಯಪ್ಪನವರು ಒಂದು ಕಾನೂನನ್ನೇ ತಂದರು. ಆದರೆ ಅದು ಅದೇ ರೀತಿ ನಿಂತಿದೆ. ಒಂದು ರೀತಿ, ನೀತಿ, ತತ್ವಹಾಕಿಕೊಂಡು ಈ ಇಲಾಖೆಯನ್ನು ಅಭಿವೃದ್ಧಿಪಡಿಸದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಎಷ್ಟು ಬೇಕಾದರೂ ಖರ್ಚುಮಾಡಿ; ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ಇದರಿಂದ ಮನುಷ್ಯನ ಬೆನ್ನುಮೂಳೆಯಾದಂಥ ಗೋಧನ ಬೆಳೆಯದೆ ಹೋದರೆ ಏನೂ ಪ್ರಯೋಜನವಿಲ್ಲ. ಎಷ್ಟೇ ವ್ಯವಸಾಯಗಾರರಾದರೂ ಗಂಡ ಹೆಂಡತಿ ಕೂಡಿ ತಾವೇ ಏನನ್ನು ಎಳೆಯುವುದಕ್ಕಾಗುತ್ತದೆಯೇ ? ಗೋಧನವೇ ರೈತನಿಗೆ ಮುಖ್ಯವಾದ ಶಕ್ತಿ. ಅದನ್ನು ಉಳಿಸಿಕೊಂಡು ಬಂದು ರೈತರನ್ನು ಕಾಪಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಇಲಾಖೆಯ ಕಾರ್ಯಕಲಾಪಗಳು ಇತ್ತೀಚೆಗೆ ಹೆಚ್ಚಾಗಿವೆಯೆಂದು ಪುಸ್ತಕದಲ್ಲಿ ಓದಿಕೊಂಡು ಭಾಷಣಗಳಿಂದ ತೃಪ್ತಿಪಡುವುದಿಲ್ಲ. ಅನುಭವದಲ್ಲಿ ಈ ಇಲಾಖೆ ಹೇಗಿದೆಯೆಂಬುದನ್ನು ನೋಡಬೇಕು. ಕೋಳಿ ಸಾಕುವುದು, ಕೋಳಿಯ ತಳಿಯ ಅಭಿವೃದ್ಧಿ ಮಾಡುವುದು—ಈ ಕಾರ್ಯಕ್ರಮವನ್ನು ಈ ಇಲಾಖೆಯವರಿಗೆ ವಹಿಸಿದ್ದಾರೆ. ಇವರು ಒಂದು ಡಜನ್ ಮೊಟ್ಟೆಗೆ ಆರು ರೂಪಾಯಿನಂತೆ ಒಳ್ಳೆಯ ತಳಿಯ ಮೊಟ್ಟೆಗಳನ್ನು ಕೊಡುತ್ತಿದ್ದಾರೆ. ನಾನು ಒಂದು ಡಜನ್ ಮೊಟ್ಟೆಗಳನ್ನು ಕೊಂಡು ಕೊಂಡೆ. ಅವುಗಳಿಂದ ಮೂರು ಮರಿ ಆಯಿತು. ಆ ಮೂರರಲ್ಲೂ ಎರಡು ಸತ್ತು, ಒಂದು ಸಾಯುವುದೂ ಇಲ್ಲ ಬದುಕುವುದೂ ಇಲ್ಲ ಹಾಗಿದೆ! ಈ ಇಲಾಖೆಯವರನ್ನು ಏಕೆ ಹೀಗಾಯಿತು ಎಂದು ಕೇಳಿದರೆ, ಸ್ಥಳದಿಂದ ಸ್ಥಳಕ್ಕೆ ಹೋಗುವಾಗ ಮೊಟ್ಟೆ ಅಲ್ಲಾಡಿ ಹೋಗುತ್ತದೆ, ಒಳಗೆಲ್ಲಾ ನೀರಾಗಿ ಸರಿಯಾಗಿ ಮರಿಯಾಗುವುದಿಲ್ಲ ಎಂದು ಸಮಜಾಯಿಷಿ ಹೇಳುತ್ತಾರೆ. ಹಾಗಾದರೆ ಇದಕ್ಕಿನ್ನು ಏರೋಪ್ಲೇನ್ ಬರಬೇಕೇ, ಹೀಗೆ ಪ್ರತಿಯೊಂದು ಹಳ್ಳಿ ಹಳ್ಳಿಯಲ್ಲೂ ಎಲ್ಲರೂ ಮೊಟ್ಟೆ ತೆಗೆದುಕೊಳ್ಳಬೇಕೆಂದು ಹೇಳಿ ಇಂಥ ಮೊಟ್ಟೆಗಳನ್ನು ಕೊಟ್ಟು ರೈತರಿಗೆ ನಷ್ಟಪಡಿಸುವುದು ಸರಿಯಲ್ಲ.

ಇನ್ನೊಂದು, ನನ್ನ ಅನುಭವ ಹೇಳುತ್ತೇನೆ. ನನ್ನ ಹತ್ತಿರ ಒಂದು ಹುಂಜ ಇತ್ತು. ಈ ಇಲಾಖೆಯವರು ಬಂದು, ನಾಡುಹುಂಜಕ್ಕೆ ಬದಲು ಒಂದು ಸೊಗಸಾದ ಹುಂಜ ಕೊಡುತ್ತೇವೆ ಎಂದು ಹೇಳಿದರು. ನಾನು ಅದೂ ನಿಜವೆಂದು ಭಾವಿಸಿ ಎಲ್ಲರಿಗೂ ಅದೇ ರೀತಿ ಪ್ರಚಾರಮಾಡಿ, ಬದಲು ಹುಂಜಗಳನ್ನು ಎಲ್ಲರಿಗೂ ಕೊಡಿ ಎಂದು ಕೇಳಿದರೆ, ಈಗ ಇಲಾಖೆಯವರು ಎಲ್ಲವೂ ತೀರಿ ಹೋಯಿತು ಎಂದು ಹೇಳುತ್ತಾರೆ. ಹೀಗೇಕೆ ಪ್ರಚಾರ ಮಾಡಬೇಕು ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಮೇಲೆ ?

ಆಮೇಲೆ, ರೋಡ್ ಐಲೆಂಡ್ ಜಾತಿಯ ಕೋಳಿ ಇಟ್ಟುಕೊಂಡಿದ್ದೇನೆ. ಒಂದು ದಿನ ನಮ್ಮ ಮನೆಗೆ ಕೋಳಿ ಪ್ರಚಾರ ಮಾಡುವುದಕ್ಕೆ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರೂ ನಮ್ಮೂರಿನಲ್ಲಿರುವ ಪಶುವೈದ್ಯ ಡಾಕ್ಟರು ಬಂದರು. ಕೆಲವು ಮೊಟ್ಟೆಗಳನ್ನು ಗಂಟು ಹಾಕಿ ಹೋದರು. ನನ್ನಲ್ಲಿದ್ದ ಕೋಳಿಗಳಿಗೆ ಇಂಜಕ್ಷನ್ ಕೊಡಿಸಿದಿರಾ ಎಂದು ಕೇಳಿದರು. ಇಲ್ಲವೆಂದು ಹೇಳಲು, ಮಾರನೆಯದಿನ ಬಂದು ಅದನ್ನೂ ಕೊಟ್ಟರು. ಹೀಗೆ ಕೊಟ್ಟ ಮೇಲೆ ಎರಡು ಮೂರು ಕೋಳಿಗಳು ಭೇದಿಯಿಂದ ಸತ್ತುಹೋದವು. ಇನ್ನೊಂದು ಕತ್ತನ್ನು ಬಗ್ಗಿಸಿಕೊಂಡು ಬಿದ್ದಲ್ಲೇ ಬಿದ್ದು ಕೊಂಡಿತು. ಇದೇನು ಸಂಶೋಧನೆ? ಹೀಗಾಗುವುದೇ ಇಲ್ಲ ಎಂದು ನಾನು ಹೇಳುವುದಿಲ್ಲ. ಆಸ್ಪತ್ರೆಗಳಲ್ಲಿ ಕೂಡ ಕೆಲವು ಸಂದರ್ಭಗಳಲ್ಲಿ ಆಪರೇಷನ್ ಮಾಡುವಾಗ, ಇಂಜಕ್ಷನ್ ಕೊಡುವಾಗಲೇ ಸತ್ತು ಹೋಗುತ್ತಾರೆ. ಆದರೆ ಹೀಗೆ, ನಾನು ತೆಗೆದು ಕೊಂಡ ಮೊಟ್ಟೆಗಳಲ್ಲಿ ಮೂರು ಮರಿಯಾದರು ಎರಡು ಮೊಟ್ಟೆ ಹೋಯಿತು, ಇನ್ನೊಂದು ಒದ್ದಾಡುತ್ತಾ ಇದೆ. ಯಾರು ನನಗೆ ಪ್ರಚಾರ ಮಾಡಲು ಬಂದರೋ ಆ ಅಧಿಕಾರಿ ಮತ್ತೆ ಬಂದರೆ? ವಿಚಾರ ಮಾಡಿದರೆ? ಇಂಜಕ್ಷನ್ ಕೊಟ್ಟ ಮೇಲೆ ಏಕೆ ಹೀಗಾಯಿತು ಎಂದು

ವಿಚಾರಿಸಬೇಡವೇ? ಹಳ್ಳಿಗಳಲ್ಲಿ ಕೊಂಡ ಕೋಳಿಗಳ ಬೆಲೆ ಕಡಮೆಯೇನಿಲ್ಲ, ನಾಲ್ಕಾರು ರೂಪಾಯಿ ಒಂದೊಂದಕ್ಕಾಗುತ್ತದೆ. ಹೀಗಿರುವಾಗ ಅವರು ಹೀಗೆ ಮಾಡಿದರೆ ಹೇಗೆ?

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಸ್ವಾಮಿ, ಕೋಳಿಗಳ ವಿಚಾರದಲ್ಲಿ ನಾನು ಒಬ್ಬ victim. ಈ ಇಲಾಖೆಯವರು Poultry farms ಗಳನ್ನು ಎಲ್ಲಾ ಕಡೆಯೂ ಮಾಡಬೇಕು, ಇದಕ್ಕೆ ಉತ್ತೇಜನ ಕೊಡಬೇಕೆಂದು ಹೇಳುತ್ತಾರೆ. ನಿಜ, ಇದರಿಂದ ರೈತರಿಗೆ ಒಳ್ಳೆಯದು. ಈ ಇಲಾಖೆಯವರು ಜಗಳೂರಿಗೆ ಕೋಳಿ ಮೊಟ್ಟೆಯನ್ನು ಕಳುಹಿಸಿದರು. ನಾನೂ ಒಂದು ಡಜನ್ ಮೊಟ್ಟೆಗಳನ್ನು ತೆಗೆದುಕೊಂಡೆ, ಅದರಲ್ಲಿ ಒಂಭತ್ತು ಕೋಳಿ ಬಂದವು, ಚೆನ್ನಾಗಿ ಬೆಳೆದವು. ಆಮೇಲೆ ಅವನ್ನು ಅಭಿವೃದ್ಧಿಪಡಿಸಿ ಅವುಗಳಿಂದ 25 ಕೋಳಿಗಳಾದವು. ಹುಡುಗರು ಅವನ್ನು ನೋಡಿ ಬಹಳ ಚೆನ್ನಾಗಿವೆ, ಅವನ್ನು ಕುಯ್ಯಬೇಡಿ ಎಂದು ಹೇಳಿದರು. ಆದರೆ ಈಗ್ಗೆ ಎರಡು ತಿಂಗಳ ಕೆಳಗೆ 'ರಾನಿಕೆಟ್' ರೋಗ ಬಂತು. ಮೊನ್ನೆ ನಾನು ಹೋಗಿ ನೋಡಿದರೆ ಎದೆ ಒಡೆಯಿತು. ಅಲ್ಲಿ ಒಂದು ಕೋಳಿ ಕೂಡ ಇಲ್ಲ! ನೋಡುವುದಕ್ಕೆ ಬಹಳ ಚೆನ್ನಾಗಿದ್ದವು. ಆ ಕಾಯಿಲೆ ಬರದಿದ್ದರೆ 200 ಕೋಳಿಗಳನ್ನು ಮಾಡುತ್ತಿದ್ದೆ. ಆದರೆ ರೋಗ ಬಂದದ್ದರಿಂದ ಎಲ್ಲವೂ ಪಡ್ಡೆ ಆಗಿ ಹೋದುವು. Preventive ಕೊಟ್ಟರೂ ಕೂಡ ಏಕೆ ಅದರಿಂದ ಪ್ರಯೋಜನವಾಗಲಿಲ್ಲ? ರೈತರು ತಾವೇ ಕೋಳಿಗಳನ್ನು ಬೆಳಸುತ್ತಾರೆ. ಆದರೆ ಈ ಪೌಲ್ಟ್ರಿ ಫಾರಂ ಕೋಳಿಗಳನ್ನು ಒಬ್ಬ ಬೆಳಸಿದ್ದ; 120 ಕೋಳಿಗಳನ್ನು ಮಾಡಿದ್ದ, ಅಷ್ಟೂ ಹೋದುವು. ನನ್ನಲ್ಲಿ 25 ವೈಟ್ ಟಾಕ್ಸ್ ಮತ್ತು ರೆಗ್ ಹಾರ್ನ್ ಇದ್ದವು, ಎರಡನೇ ದಿವಸದಲ್ಲಿ ಎಲ್ಲಾ ಸತ್ತುಹೋದುವು. ಆ ಖಾಯಿಲೆ ಈ ಖಾಯಿಲೆ ಎಂದು ಹೇಳುತ್ತಾರೆ. ರಾನಿಕೆಟ್ ಖಾಯಿಲೆಗೆ ಇನಾಕ್ಯುಲೇಷನ್ ಮಾಡಿಸಿದರೂ ಏಕೆ ಎಲ್ಲಾ ಸತ್ತುಹೋದುವು ಎಂಬುದನ್ನು ಪೌಲ್ಟ್ರಿ ಫಾರಂ ಇಲಾಖೆಯವರು ನೋಡಿ, ರೋಷ ದೋಷಗಳನ್ನು ಸರಿಪಡಿಸಬೇಕು. ಆಗ ಮಾತ್ರ ಇದು ಯಶಸ್ವಿಯಾಗಿ ನಡೆಯುತ್ತದೆ. ಇದಕ್ಕೆ ಮಾಡುವ ಖರ್ಚು ಸಾರ್ಥಕವಾಗುತ್ತದೆ.

ಎರಡನೆಯದಾಗಿ, ವೆಟರಿನರಿ ಇಲಾಖೆ. ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕೆಂದು ಜನ ಕೇಳುತ್ತಿದ್ದಾರೆ. ಹೆಚ್ಚು ಮಾಡಲು ಸರ್ಕಾರ ಹೆಚ್ಚಿನ ಸಿಬ್ಬಂದಿ ಸಲಕರಣೆ ಒದಗಿಸಬೇಕೆಂದು ಮಾಡಿಕೊಂಡಿದ್ದಾರೆ. ಒಂದು ಹೊಸ ಬಾಬಿಗೆ 5,33,000 ರೂಪಾಯಿ ಒದಗಿಸಿದ್ದಾರೆ: Establishment of Cattle Breeding Stations ಎಂದಿದೆ. ಈಗಿನ ಪರಿಸ್ಥಿತಿಯಲ್ಲಿ ಇಷ್ಟು ಹೆಚ್ಚು ಖರ್ಚು ಮಾಡುವುದಕ್ಕೆ ಹಣವಿದೆಯೇ, ಅವಕಾಶವಿದೆಯೆ, ಎಂಬುದನ್ನು ಯೋಚನೆ ಮಾಡಬೇಕು. ಅಲ್ಲದೆ ಒಂದೊಂದು ಆಸ್ಪತ್ರೆಯಲ್ಲಿ ಒಂದೊಂದು breeding bull, Murra buffaloe ಇಡಬೇಕೆಂದು ಕೇಳುತ್ತಿದ್ದೇವೆ. ಇಲ್ಲಿ ಒದಗಿಸುವ ಹಣದಲ್ಲಿ most of it is spent towards buildings, staff, high price and dearness allowances. ಇದರಿಂದ cattle breeding ಎಷ್ಟು ಜಾಸ್ತಿಯಾಗುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಹೊಸದಾಗಿ ಎಲ್ಲವನ್ನೂ ಪ್ರಾರಂಭ ಮಾಡಿ, ಕಷ್ಟವಾಗುತ್ತದೆ. We will be committing the State to a permanent recurring expenditure. Is it advisable to incur this extra expenditure and to add to the permanent liability of the State? You know what our resources are. Resources ಇಲ್ಲದೆ ಹಣ ಎಲ್ಲಿಂದ ಬರುತ್ತದೆಯೋ ಗೊತ್ತಿಲ್ಲ. ಇಂಥಾ ideological schemes ಮಾಡಿ, ಇದರ ಮೇಲೆ ಹಣ ಖರ್ಚು ಮಾಡಿದರೆ, ಜನರ ಗತಿ ಏನು? How can we sanction this new item of additional expenditure to the tune of 5,33,000 rupees? I think this can be deleted as well. The Government will not be able to carry it out. They won't have funds. ಎಷ್ಟು breeding stations ಮಾಡುತ್ತೀರಿ, ವರ್ಷಕ್ಕೆ ಎಷ್ಟು ಕೆಲಸ ನಡೆಯುತ್ತದೆ ಎಂಬುದನ್ನು ಹೇಳಬೇಕು. ಅದಿಲ್ಲದೆ ಹೊಸದಾಗಿ ಒಂದು ಬಾಬನ್ನು ಸೇರಿಸಿ ಅದಕ್ಕೆ ಖರ್ಚು ಮಾಡಲು ಹಣ ಕೊಡಿ ಎಂದರೆ ಹೇಗೆ? ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಬಹುದು; ಆದರೂ ಅದಕ್ಕೂ ಸಾಕಷ್ಟು resources ಇಲ್ಲ.

Sri A. BHEEMAPPA NAIK.—Even if it is carried out, it will be a great loss and not a gain.

ಶ್ರೀ ಜೆ. ಮಹಮ್ಮದ್ ಇಮಾಂ.—ಹೌದು; ಹೊಸ ಸಿಬ್ಬಂದಿ ನೇಮಿಸಿ, ಸಿಬ್ಬಂದಿ ಹೆಚ್ಚಾಗುತ್ತದೆಯೇ ಹೊರತು ಪ್ರಯೋಜನವೇನೂ ಇಲ್ಲ. ಆದುದರಿಂದ ಈ 5,33,000 ರೂಪಾಯಿ ಇದರಿಂದ ತೆಗೆದು ಹಾಕಿ ಎಂದು ನಾನು ಹೇಳುವುದು.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ನಾನು ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. Experimental Farms ಎಂದು ಹೇಳುತ್ತಾರೆ ಅಲ್ಲಿ ಏನೂ experiment ಪ್ರಯೋಜನಕರವಾದುದನ್ನು ಮಾಡುತ್ತಿಲ್ಲ. ಅಜ್ಜಂಪುರದಲ್ಲಿ ಹೆಚ್ಚು ಸಿಬ್ಬಂದಿಯನ್ನಿಟ್ಟಿದ್ದಾರೆ; ಕುರಿ ಕುಪ್ಪೆಯಲ್ಲಿಯೂ ಹೀಗೆಯೇ ಆಗಿದೆ. ದನಗಳನ್ನು ಕೊಂಡುಕೊಳ್ಳಬಹುದು. Dairy Farm ಎಂದು ಕೇಳಿಕೊಂಡಿದ್ದರು. ಒಂದು ಯೋಜನೆ ಮಾಡಿ 300 ಎಕರೆ ಜಮೀನಿನಲ್ಲಿ ಏಳು ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡಬೇಕೆಂದು ಮಾಡಿದರು, ಅದೂ ಸರಿಯಾಗಲಿಲ್ಲ. Poultry Farming 30 ಎಕರೆ ಜಮೀನಿನಲ್ಲಿ ಆರು ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡುತ್ತೇವೆಂದರು; Pig farmingಗೆ 100 ಎಕರೆ ಜಮೀನು ಎಂಟು ಲಕ್ಷ ರೂಪಾಯಿ ಖರ್ಚು; Fowls farmingಗೆ 20 ಸಾವಿರ; ಹೀಗೆ ಕೊಟ್ಟು ನಡೆಸಿಕೊಂಡು ಹೋಗುತ್ತಾರೆ. ಸರ್ಕಾರ ಮಾಡಿದುದು ಒಂದಾದರೂ ಸರಿಯಾಗಿ ಮಾಡುತ್ತಿಲ್ಲ. ಇಂಡಿಯಾ ಸರ್ಕಾರದಿಂದ ಬರತಕ್ಕ ಹಣವನ್ನು ಖಾಸಗಿ ಜನರಿಗೆ ಕೊಟ್ಟು ಅವರೇ ನಡೆಸಿಕೊಂಡು ಹೋಗುವಂತೆ ಮಾಡಬೇಕು. 20 ಸಾವಿರ ಕೋಳಿ ಮೊಟ್ಟೆಗಳನ್ನು ಮಾರಿದ್ದೇವೆಂದು ಹೇಳಿದರು. ಇಷ್ಟು ಹಣ ಕೊಟ್ಟು ರೈತರು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಒಂದು ಮೊಟ್ಟೆಗೆ ಆರಾಣೆ ಕೊಟ್ಟು ರೈತರು ಕೊಂಡುಕೊಳ್ಳಬೇಕೆಂದು ಹೇಳುವುದರಲ್ಲಿ ಅರ್ಥವೇನು?

ಅಮೃತ ಮಹಲ್ ಜಮೀನು ಬೇಕಾದಷ್ಟಿದೆ ಎಂದು ಮಂತ್ರಿಗಳು ಹೇಳಿದರು. ಹುಲ್ಲು ಗಾವಲುಗಳನ್ನು ಅಭಿವೃದ್ಧಿ ಮಾಡಿ, ಇರತಕ್ಕ ಅರ್ಧ ಜಮೀನಿನಲ್ಲಿ ದನಗಳನ್ನು ಮೇಯಿಸಿಕೊಂಡು ಉಳಿದ ಜಮೀನನ್ನು ಬಿಡುಗಡೆ ಮಾಡಿ ಜನರಿಗೆ ಕೊಡಬಹುದು. ಇಂಡಿಯಾ

(ಶ್ರೀ ಬಿ. ಹುಚ್ಚೇಗೌಡ.)
ಸರ್ಕಾರದವರು ಗ್ರಾಂಟು ಕೊಡುತ್ತಾರೆ. ಎಷ್ಟು ಹಣ ಅಗತ್ಯವೋ ಅಷ್ಟು ಹಣವನ್ನು ಕೊಟ್ಟು ಆ ಹುಲ್ಲು ಗಾವಲುಗಳಲ್ಲಿ ನೀರನ್ನೊದಗಿಸುವುದಕ್ಕೂ ಹುಲ್ಲು ಗಾವಲು ಅಭಿವೃದ್ಧಿ ಮಾಡುವುದಕ್ಕೂ ಸಹಾಯ ಕೊಡಬೇಕೆಂದು ಹೇಳುತ್ತೇನೆ.

*ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀಮಾರ್ ಭೀಮಪ್ಪ ನಾಯಕರು ಚಳ್ಳಕೆರೆಯಲ್ಲಿ Rinderpest ನಿಂದ ಬಹಳ ಅನಾಹುತವಾಗಿದೆ ಎಂದು ತಿಳಿಸಿದರು. ಈಗ ನಾವು ಚಿತ್ರದುರ್ಗ, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದು campaign ಪ್ರಾರಂಭ ಮಾಡಿದ್ದೇವೆ. ಈ ಮೂರು border district ಗಳಲ್ಲಿಯೂ ಎಲ್ಲ ದನಗಳಿಗೂ Rinderpestಗೆ preventive protection ಕೊಡುತ್ತಿದ್ದೇವೆ, immunisation ಮಾಡಿದ್ದೇವೆ. ಅದಕಾರಣ I don't think it will recur again in that area.

ಈಗ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಡಾ॥ ಪಿ. ಎಂ. ನಾರಾಯಣಸ್ವಾಮಿ ನಾಯ್ಡುರವರು ಕೇಂದ್ರ ಸರ್ಕಾರಕ್ಕೆ ಹೋದಮೇಲೆ ಡಾ॥ ಜೆ. ಮುನಿಯಪ್ಪನವರು ಅವರಿಗೆ next senior ಆದ್ದರಿಂದ, ಆ ಕೆಲಸಕ್ಕೆ ಬಂದರು. ಅವರಿಗೆ ಮೈಸ್ವಸ್ಥವಿಲ್ಲದ್ದರಿಂದ ರಜದಮೇಲಿದ್ದಾರೆ. It is unfortunate that he is ill. I think as soon as he comes back he will occupy that place again.

ಅಜ್ಜಂಪುರದ ಫಾರಂ ವಿಷಯದಲ್ಲಿ there are more deaths than births ಎಂದು ಹೇಳಿದರು. ಇತ್ತೀಚೆಗೆ ಆ figures. . . .

ಶ್ರೀ ಎ. ಭೀಮಪ್ಪನಾಯಕ್.—Economic farms ಎಂದು ಇದೆ. ದನಗಳನ್ನು ಈ farm ನಿಂದ ಮುದಿಯಾಗಿರುವುದನ್ನು ಅಲ್ಲಿಗೆ ಬದಲಾಯಿಸಿ ಚೆನ್ನಾಗಿರುವುದನ್ನು ಇಲ್ಲಿಗೆ ಬದಲಾಯಿಸಿ, ದನಗಳ ಸಾವಿನ ಸಂಖ್ಯೆ ಕಡಿಮೆ ತೋರಿಸುತ್ತಾರೆ. Economic farms ಮತ್ತು ಎಲ್ಲವೂ ಸೇರಿ deaths and births ಎಷ್ಟು?

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಅಜ್ಜಂಪುರ ಫಾರಂ ನೋಡಿಕೊಳ್ಳಲು ಒಬ್ಬ Stationary Officer ಇದ್ದಾರೆಂದು ಹೇಳುತ್ತೀರಿ. ಅವರು ಬೆಂಗಳೂರಿನಲ್ಲಿಯೇ ಇದ್ದುಕೊಂಡು ಅಜ್ಜಂಪುರಕ್ಕೂ ಮತ್ತು Kunigal Stud Farm ಗೂ ಭೇಟಿಕೊಡುತ್ತಾರಲ್ಲವೇ?

ಡಾ॥ ಆರ್. ನಾಗನ ಗೌಡ.—ಹಾಗೇನೂ ಇಲ್ಲ. ಅವರು ಅಲ್ಲೇ ಇದ್ದಾರೆ. Dr. Chandrasekhar is the Research Officer, Animal Husbandry. He is there. He is not here at all.

Sri M. PALANIYAPPAN (Ulsoor).—Is there any idea of shifting the Ajjampur Farm to Bangalore and Bangalore Farm to Ajjampur ?

Dr. R. NAGAN GOWDA.—It cannot be done. ಯಾಕೆಂದರೆ ಅಜ್ಜಂಪುರದಲ್ಲಿರುವುದು ಅಮೃತ ಮಹಲ್ ದನಗಳು, ಈ ಪ್ರಾಂತಕ್ಕೆ ಅವು ಹೊಂದಿಕೊಳ್ಳುವುದಿಲ್ಲವಾದ್ದರಿಂದ ಇಲ್ಲಿಗೆ ಬದಲಾಯಿಸುವುದಿಲ್ಲ. ಅಮೃತ ಮಹಲ್ ದನಗಳು ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ suit ಆಗುತ್ತವೆ. ಅವನ್ನು ಇಲ್ಲಿಗೆ ತರುವುದಿಲ್ಲ.

ಶ್ರೀಮಾರ್ ಭೀಮಪ್ಪನಾಯಕರು ಸಾಯುವಂಥ ದನಗಳನ್ನು ತೆಗೆದುಬಿಟ್ಟರಿ ಎಂದು ಹೇಳಿದರು. ಯಾವಯಾವವು 10-12 ವರ್ಷಗಳಿಗಿಂತ ಜಾಸ್ತಿ ವಯಸ್ಸಾಗಿರುತ್ತವೆಯೋ ಅಂಥವುಗಳನ್ನು. ತಮಗೆಲ್ಲ ಗೊತ್ತಿರುವ ಹಾಗೆ ಇಲ್ಲಿ ವಯಸ್ಸಾದ ದನಗಳು ಇರಕೂಡದು. . . .

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ನಮ್ಮ ದೇಶದಲ್ಲಿ ದನಗಳನ್ನು ಕೊಲ್ಲಬಾರದು ಎಂದು ಕಾನೂನು ಜಾರಿಯಲ್ಲಿದೆ. ಆದುದರಿಂದ ಇಲ್ಲಿಂದ ದನಗಳನ್ನು ಮದರಾಸು ಪ್ರಾಂತಕ್ಕೆ ಸಾಗಿಸಿ. . . .

Dr. R. NAGAN GOWDA.—I bring to your notice, Sir, that it does not arise here. ಅದಕಾರಣ breeding stations ನಿಂದ experimental farm ನಲ್ಲಿ ಇಡುತ್ತಾರೆ. Breeding ಆಗದ, ವಯಸ್ಸಾದ ದನಗಳನ್ನು ಇಟ್ಟುಕೊಂಡರೆ ಏನು ಅನುಕೂಲವಾಗುತ್ತದೆ? ಆದ್ದರಿಂದ ಎಲ್ಲ ವಯಸ್ಸಾದ ದನಗಳನ್ನೂ ಇಡಲು ಒಂದು farm ಮಾಡಿದ್ದೇವೆ. ಇದರಲ್ಲಿ ತಪ್ಪೇನಿದೆಯೋ ನನಗಂತೂ ಗೊತ್ತಾಗುವುದಿಲ್ಲ. ಅಜ್ಜಂಪುರದಲ್ಲಿ 10 ವರ್ಷಕ್ಕೆ ಒಳಪಟ್ಟ younger cattle ಇಟ್ಟಿದ್ದೇವೆ. ಅದರೊಳಗೆ births are of a high percentage.

ಶ್ರೀ ಬಿ. ಹುಚ್ಚೇಗೌಡ.— 20 ವರ್ಷ ವಯಸ್ಸಿನ ದನಗಳನ್ನು 10 ವರ್ಷಗಳಿಗೇ ತೆಗೆದುಬಿಟ್ಟರೆ ಹೇಗೆ? ಅವುಗಳಿಗೆ ಚೆನ್ನಾಗಿ ಪ್ರಾಯ ಬರುವುದು ಈ ವಯಸ್ಸಿಗೆ. ಆದುದರಿಂದ 10 ವರ್ಷಗಳಿಗೆ ತೆಗೆಯುವುದೆಂದರೆ ಅರ್ಥವಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—Economic farms ನಲ್ಲಿ 10 ವರ್ಷಕ್ಕೆ ಮೇಲ್ಪಟ್ಟ ದನಗಳಿಲ್ಲ. ಅಲ್ಲಿರುವುವೆಲ್ಲ ಚಿಕ್ಕ ವಯಸ್ಸಿನವು. ಇಲ್ಲಿ ಸಾಯುವ ಹೊತ್ತು ಬಂದಾಗ ಅಲ್ಲಿಗೆ ಕಳುಹಿಸಿ, ಸಾಯುವ ಸಂಖ್ಯೆಯನ್ನು ಕಡಿಮೆ ತೋರಿಸುತ್ತೀರಿ.

ಡಾ॥ ಆರ್. ನಾಗನಗೌಡ.—ಕರುಗಳು ಹಾಕದ ಹಸುಗಳನ್ನೆಲ್ಲ ಒಂದು ಕಡೆ ಇಟ್ಟಿದ್ದೇವೆ. ಆದರೊಳಗೆ ಚಿಕ್ಕ ವಯಸ್ಸಿನವುಗಳನ್ನು ಬೆರಸಿಲ್ಲ. There is another farm where we have got these. These have not been added to the four economic farms. I will be able to give more detailed figures later.

ಇನ್ನೊಂದು ಮಾತು ಹೇಳಿದರು, ಕುರಿಕುಪ್ಪೆಯಲ್ಲಿ ರಕ್ತಕ್ಕೆ ದನಗಳಿಗೆ ಏನು ಖರ್ಚಾಗುತ್ತದೆಯೋ ಅದರಲ್ಲಿ ಅರ್ಧ ಭಾಗ ಕೂಡ ಬರುವುದಿಲ್ಲವೆಂದು ಹೇಳಿದರು. ಈ ಫಾರಮನ್ನು ಮದರಾಸು ಸರ್ಕಾರದವರು ನಡೆಸುತ್ತಿದ್ದರು. ಅದನ್ನು ನಡೆಸುವುದಕ್ಕೆ ಎಷ್ಟು ಖರ್ಚು ಮಾಡುತ್ತಿದ್ದರೋ ಅದರೊಳಗೆ ಅರ್ಧಕ್ಕೆ ನಾವು ಈಗ ಕಡಿಮೆ ಮಾಡಿದ್ದೇವೆ. ಸಾಧ್ಯವಾದಷ್ಟು ಖರ್ಚನ್ನು ಕಡಿಮೆಮಾಡಿ ಇಷ್ಟಕ್ಕೆ ಇಳಿಸಿದ್ದೇವೆ. ಅಮೇಲೆ ಕುರಿಕುಪ್ಪೆ ಎಂಬ ಹೆಸರನ್ನು ತೆಗೆಯಬಾರದು ಎನ್ನುವವರಲ್ಲಿ ನಾನೂ ಒಬ್ಬ. It is one of the finest industries in India. ನಮ್ಮ ಮಾನ್ಯ ನಾಗಯ್ಯ ರೆಡ್ಡಿಯವರಿಗೆ ಛಳಿಯಾದಾಗ ಕಂಬಳಿಯನ್ನು ಹೊದ್ದುಕೊಳ್ಳುವುದಕ್ಕೆ ಮಾತ್ರ ಬೇಕು. ಆದರೆ ಈ ಹೆಸರು ಬದಲಾಯಿಸಬೇಕು ಎನ್ನುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ಈ ಪ್ರಾಂತದಲ್ಲಿ ಕುರಿಗಳು ಬಹಳವಾಗಿ ಇರುವುದರಿಂದ ಈ ಹೆಸರು ಬಂದಿದೆ. The area between Kudikuni and Hospet—that valley is suited for sheep rearing.

ಇನ್ನು ಕೋಳಿ ಮೊಟ್ಟೆಗಳ ವಿಷಯದಲ್ಲಿ ನಾವು ಈಗ ಮಾರುತ್ತಿರುವುದು ದುಬಾರಿಯಾಗುತ್ತದೆಂದು ಹೇಳಿದರು. ಕಳೆದ ವರ್ಷ ಎಂದರೆ 1954ನೇ ಡಿಸೆಂಬರು ಮತ್ತು 1955 ನೆಯ ಇಸವಿ ಜನವರಿ ಮತ್ತು ಫೆಬ್ರುವರಿ ಮಾಹೆಗಳಲ್ಲಿ just a little under 13,000 eggs were distributed. ಅವುಗಳ hatching percentage ನೋಡಿದ್ದೇವೆ. It is somewhere near 50 per cent. ಆ ತರುವಾಯ ಇತ್ತೀಚೆಗೆ 2-3 ತಿಂಗಳ ಹಿಂದೆ egg survival ಸ್ಥಿತಿಯನ್ನು ನೋಡಿದ್ದೇವೆ. 25 per cent of them are surviving hens and cocks ಎಲ್ಲ ಜೀವಂತವಾಗಿವೆ. . . .

Mr. DEPUTY SPEAKER.—Now I shall put the Demand to the vote of the House. The question is :

"That a sum not exceeding Rs. 37 09,444 be granted to the Government to defray the charges which will come in course of payment during the year ending 31st day of March 1957, in respect of 'Veterinary'."

The motion was adopted.

Mr. DEPUTY SPEAKER.—We have to fix up the time of meeting for tomorrow. Some Hon'ble Members have expressed their desire to have the session from 2 o'clock tomorrow. Is that aggreable ?

HON'BLE MEMBERS.—Yes.

Mr. DEPUTY SPEAKER.—The House will now adjourn and meet at 11 after lunch.

The House adjourned for Lunch at Thirty Minutes past Ten of the Clock and reassembled at Eleven of the Clock.

[MR. DEPUTY SPEAKER in the Chair.]

DEMAND No. 25—CO-OPERATION.

42. CO-OPERATION.

Mr. DEPUTY SPEAKER.—Motion moved :

"That a sum not exceeding Rs. 19,25,410 be granted to the Government to defray the charges which will come in course of payment during the year ending 31st day of March 1957, in respect of 'Co-operation'."

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಕೋಆಪರೇಟಿವ್ ಸೊಸೈಟಿಗಳು ಅಲ್ಪ ಕಾಲಾವಧಿ ಸಾಲಗಳನ್ನು ರೈತರಿಗೆ ಕೊಡುವುದಕ್ಕೆ ಪ್ರಾರಂಭಿಸಿದಮೇಲೆ ಕೆಲಸ ಮಾಡದೇನೇ ಎರಡು ಮೂರು ವರ್ಷಗಳಿಂದಲೂ ಕೂಡ ಮುಚ್ಚಿದ್ದಂಥ ಅನೇಕ ಮಲ್ಟಿಪರ್ಪಸ್ ಸೊಸೈಟಿಗಳು ಈಗ ಪುನಃ ರಿವೈವಾಗಿ ಚೆನ್ನಾಗಿ ಕೆಲಸಮಾಡುವುದಕ್ಕೆ ಪ್ರಾರಂಭಿಸಿವೆ. ಅಲ್ಪಕಾಲಾವಧಿ ಸಾಲವನ್ನು ಇಷ್ಯೂಮಾಡಿದರು. ಅದರ ನೆಪದಿಂದ ಯಾವ ಸೊಸೈಟಿಗಳು ನಷ್ಟಹೊಂದಿ ಕೆಲಸ ಮಾಡುತ್ತಿರಲಿಲ್ಲವೋ ಆ ಸೊಸೈಟಿಗಳ ಬಾಕಿ ಹಣ ಅನೇಕ ಸೊಸೈಟಿಗಳಲ್ಲಿ ವಸೂಲಾಗಿ ಈಗ ಆ ಸೊಸೈಟಿಗಳೆಲ್ಲಾ ಕೆಲಸ ಮಾಡುವುದಕ್ಕೆ ಪ್ರಾರಂಭಿಸಿವೆ. ಹೋದವರ್ಷ ರೈತರಿಗೆ ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಸುಮಾರು 36-37 ಲಕ್ಷದವರೆಗೂ ಸೊಸೈಟಿಗಳ ಮುಖೇನ ಅಲ್ಪ ಕಾಲಾವಧಿ ಸಾಲವನ್ನು ಕೊಟ್ಟರು. ಈ ವಿಚಾರವನ್ನು ನಾವು ಬಹಳ ಸಂತೋಷದಿಂದಲೂ ಮತ್ತು ಹೆಮ್ಮೆಯಿಂದಲೂ ಹೇಳಬಹುದು. ರೈತರೇನು ಉಪಕಾರ ಮಾಡಬೇಕೆಂದು ಸರ್ಕಾರದವರು ಹೇಳುತ್ತಿದ್ದರೊ ಅದಕ್ಕೆ ತಕ್ಕಂತೆ ನಂಬಿಕೆಯನ್ನುಳಿಸಿಕೊಂಡು ಈಗ ತೆಗೆದುಕೊಂಡಿದ್ದ ಸಾಲವನ್ನೆಲ್ಲಾ ನಿರೀಕ್ಷೆ ಮಾಡಿದ್ದಂತೆ ಸಕಾಲದಲ್ಲಿ ವಾಪಸು ಮಾಡಿದ್ದಾರೆ. ನನಗೆ ನಿನ್ನೆ ಮೊನ್ನೆ ತಿಳಿದ ಹಾಗೆ 36 ಲಕ್ಷ ಚಿಲ್ಲರೆ ರೂಪಾಯಿಗಳ ಸಾಲ ಕೊಟ್ಟಿದ್ದರಲ್ಲಿ ಆಗಲೇ ಸುಮಾರು 35 ಲಕ್ಷದವರೆಗೆ ವಸೂಲಾಗಿವೆಯೆಂದು ಹೆಮ್ಮೆಯಿಂದ ಹೇಳಬಹುದು. ಏಕೆಂದರೆ ನಮ್ಮ ಕಡೆ ಸುಮಾರು 8½ ಲಕ್ಷ ರೂಪಾಯಿ ಸಾಲ ಕೊಟ್ಟಿತ್ತು. ಅದರಲ್ಲಿ ಒಂದು ಕಾಸೂ ಬಾಕಿಯಿಲ್ಲದೆ ಸಕಾಲದಲ್ಲಿ ವಾಪಸು ಕೊಟ್ಟಿದ್ದಾರೆ. ಶಿವಮೊಗ್ಗ ಡಿಸ್ಟ್ರಿಕ್ಟಿಗೆ 8½ ಲಕ್ಷಕ್ಕೆ ಮೇಲ್ಪಟ್ಟು ಕೊಟ್ಟಿದ್ದರು. ಅಲ್ಲಿನವರೂ ಕೂಡ ಎಲ್ಲಾ ಕೊಟ್ಟಿದ್ದಾರೆಂದು ತಿಳಿದಿದ್ದೇನೆ. ಒಟ್ಟಿನಲ್ಲಿ ಕೊಟ್ಟಿದ್ದ ಸಾಲದಲ್ಲಿ ಸುಮಾರು 35 ಲಕ್ಷದವರೆಗೆ ಬಹಳ ಬಾಕಿ ವಾಪಸು ಬಂದಿದೆ. ಇದರಿಂದ ರೈತರಿಗೆ ಉಪಕಾರವಾಗಿರುವುದರಲ್ಲಿ ಯಾವ ಅನುಮಾನವೂ ಕೂಡ ಇಲ್ಲ. ಇದನ್ನೇಕೆ ಹೇಳುವುದೆಂದರೆ ಸರ್ಕಾರದವರು 36 ಲಕ್ಷ ರೂಪಾಯಿಗಳನ್ನು ಹೋದ ವರ್ಷ ಸಾಲವಾಗಿಕೊಟ್ಟರು, ಅದು ವಸೂಲಾಗಿ ಸಕಾಲದಲ್ಲಿ ಬಂದಿರುವುದರಿಂದ ರೈತರಿಗೆ ಇದರ ಉಪಯೋಗ ಚೆನ್ನಾಗಿ ಗೊತ್ತಾಗಿದೆ. ಮುಂದೆ ಈ ಸಾಲವನ್ನು ಇನ್ನೂ ಹೆಚ್ಚಿನ ಮೊಬಲಗಿನಲ್ಲಿ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆಂಬುದು ಚೆನ್ನಾಗಿ ವಿದಿತವಾಗುತ್ತಿದೆ. ಮುಂದೆ ಇದರ ಮೇಲೆ ಅಂದಾಜುಮಾಡಿ ಮೈಸೂರು ಸರ್ಕಾರದವರು ರೈತರಿಗೆ ಅಲ್ಪಕಾಲಾವಧಿ ಸಾಲ, ಮೀಡಿಯಂ ಟರ್ಮ್ ಲೋನ್, ದೀರ್ಘಾವಧಿ ಸಾಲ ಕೊಡಲು ಒಂದು ಕೋಟಿ ರೂಪಾಯಿಗಳನ್ನಾದರೂ ಕೂಡ ಒದಗಿಸಬೇಕಾಗಿತ್ತು; ಒದಗಿಸಿಲ್ಲದಿದ್ದರೆ ಬಹಳ ಜಾಗರೂಕರಾಗಿ ಈಗಲಾದರೂ ಅಷ್ಟು ಹಣ ರೈತರಿಗೆ ಒದಗಿಸಲು ಪ್ರಯತ್ನ ಮಾಡಬೇಕು. ಅದರಲ್ಲೂ ಮೀಡಿಯಂ ಟರ್ಮ್ ಲೋನ್ ರೈತರಿಗೆ ಒದಗಿಸಬೇಕಾದ್ದು ಬಹಳ ಅಗತ್ಯ. ನಾನು ಕೇಳಿದ ಹಾಗೆ ಅಪೆಕ್ಸ್ ಬ್ಯಾಂಕಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕುಗಳಲ್ಲಿ ಷೇರು ಮೊಬಲಗು ಸಾಕಾದಷ್ಟಿಲ್ಲದಿರುವುದರಿಂದ ರಿಸರ್ವ್ ಬ್ಯಾಂಕಿನಿಂದ ಹಣ ಪಡೆಯುವುದಕ್ಕೆ ಸ್ವಲ್ಪ ಕುಂದಕ ಬರಬಹುದೆಂಬ ಶಂಕೆಯಿದೆ. ಆದುದರಿಂದ ಮೈಸೂರು ಸರ್ಕಾರದವರು ಅಪೆಕ್ಸ್ ಬ್ಯಾಂಕಿನಿಂದ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ಷೇರುಗಳನ್ನು ಹೊಸದಾಗಿ ಈಗಾಗಲೇ ಕೊಂಡುಕೊಂಡು ಷೇರು ಮೊಬಲಗನ್ನು ಹೆಚ್ಚುಮಾಡಿಕೊಂಡು ರಿಸರ್ವ್ ಬ್ಯಾಂಕಿ

(ಶ್ರೀ ಜಿ. ಎ. ತಿಮ್ಮಪ್ಪಗೌಡ).

ನಿಂದ ಒಂದು ಕೋಟಿ ರೂಪಾಯಿಗಳ ಹಣವನ್ನು ಒದಗಿಸಲೇ ಬೇಕಾಗುತ್ತದೆ. ಮೀಡಿಯಂ ಟರ್ಮ್ ಲೋನ್ ಮತ್ತು ದೀರ್ಘಾವಧಿಸಾಲ ಸಾಲವನ್ನು ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಮತ್ತು ಸಣ್ಣ ಪ್ರೈಮರಿ ಸೊಸೈಟಿಗಳಿಂದ ಈಗೇನು ರೈತರಿಗೆ ವ್ಯವಸಾಯಕ್ಕಾಗಿ ಒದಗಿಸುತ್ತಿದ್ದರೋ ಅವನ್ನು ಇಂಡಸ್ಟ್ರಿಯಲ್ ಸೊಸೈಟಿಗಳ ಮುಖೇನ, ಅದಕ್ಕೆ ಅಧಿಕಾರಿಗಳಾಗಿರುವ ಶ್ರೀ ಭೀರಪ್ಪನವರ ಮುಖೇನ ಒದಗಿಸುವುದಾಗಿ ಮಾತುಕತೆ ನಡೆದಿದೆಯೆಂದು ಕೇಳಿದ್ದೇನೆ. ಅದು ಕೂಡದು. ವ್ಯವಸಾಯದ ಸಾಲ, ಅಲ್ಪಕಾಲಾವಧಿ ಸಾಲವಾಗಲಿ ಅಥವಾ ಮೀಡಿಯಂ ಟರ್ಮ್ ಸಾಲವಾಗಲಿ ಅಥವಾ ದೀರ್ಘಾವಧಿ ಸಾಲವಾಗಲಿ, ಡಿಸ್ಟ್ರಿಕ್ಟ್ ಬ್ಯಾಂಕುಗಳು ಮತ್ತು ಪ್ರೈಮರಿ ಸೊಸೈಟಿಗಳು ಅದನ್ನು ಎರಡು ವರ್ಷಗಳಿಂದ ಜಯಪ್ರದವಾಗಿ ಕೆಲಸ ಮಾಡಿ ಒದಗಿಸಿರುವುದರಿಂದ ಅವುಗಳ ಮುಖಾಂತರವೇ ಈ ಸಾಲವನ್ನು ಒದಗಿಸಬೇಕಾಗಿದೆ. ನಾನು ಹೇಳುವುದಾದರೆ ಸರ್ಕಾರದವರು ರೈತರಿಗೆ ಸಹಾಯ ಮಾಡಲು ಅನೇಕ ಸ್ಕೀಮುಗಳನ್ನೇನು ಹಾಕಿದ್ದಾರೋ ಅವುಗಳಲ್ಲಿ ಬಹಳ ಜಯಪ್ರದವಾಗಿ ನಡೆದಿರುವ ಒಂದು ಸ್ಕೀಮೆಂದರೆ, ರೈತರಿಗೆ ನೇರವಾಗಿ ಸರ್ಕಾರದವರು ಉಪಕಾರಮಾಡಿರುವ ಸ್ಕೀಮೆಂದರೆ ರೈತರಿಗೆ ಚೆನ್ನಾಗಿ ಮನದಟ್ಟಾಗಿರುವ ಈ ಸಾಲಗಳನ್ನೊದಗಿಸಿರುವ ಸ್ಕೀಮು.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯ ಹೇಳಬೇಕೆಂದರೆ ಪ್ರೈಮರಿ ಸೊಸೈಟಿಗಳಲ್ಲಿ ಸೆಕ್ರೆಟರಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕು ಸೂಪರ್‌ವೈಜರಗಳಿಗೂ ಟ್ರೈನಿಂಗ್ ಕೊಡುವುದು ಅತ್ಯಾವಶ್ಯಕ, ಹೋದವರ್ಷ ಟ್ರೈನಿಂಗ್ ಸ್ಕೂಲನ್ನು ಪ್ರಾರಂಭಿಸಿ ನೂರಾರು ಜನರಿಗೆ ಟ್ರೈನಿಂಗ್ ಕೊಡಬೇಕೆಂದು ಏರ್ಪಾಡು ಮಾಡಿದರು. ಬಳ್ಳಾರಿಯಲ್ಲೂ ಟ್ರೈನಿಂಗ್ ಕೊಡಬೇಕೆಂದು ಪ್ರಯತ್ನ ನಡೆಯಿತು. ಆದರೆ ರೀ-ಆರ್ಗನೈಜೇಷನ್ ಸ್ಕೀಂ ಜಾರಿಗೆ ಬಂದರೆ ತೊಂದರೆಯಾಗಬಹುದೆಂದು ಆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿದರು. ಹೀಗೆ ನಿಲ್ಲಿಸಿದ್ದು ತಪ್ಪು. ಈ ದಿವಸವಾದರೂ ಕೂಡ ಕೂಡಲೇ ಬೆಂಗಳೂರಿನಲ್ಲಿ ಅಥವಾ ಬಳ್ಳಾರಿಯಲ್ಲಿ ಅನುಕೂಲವಿರುವ ಕಡೆ ಟ್ರೈನಿಂಗ್ ಸೆಂಟರ್ ಬೇಗ ಏರ್ಪಾಡು ಮಾಡಬೇಕು.

ಇದೇ ಸಂದರ್ಭದಲ್ಲಿ ಗಾಡಿ ಬಾಡಿಗೆ ವಿಚಾರ ಹೇಳುತ್ತೇನೆ. ಮಲ್ಟಿ ಪರ್ಪಸ್ ಸೊಸೈಟಿಗಳಿಗೆ ನಾಲ್ಕೈದು ವರ್ಷಗಳಹಿಂದೆ ಕೊಡಬೇಕಾದ ಗಾಡಿ ಬಾಡಿಗೆ ವ್ಯವಸಾಯದ ಇಲಾಖೆಯಿಂದ ಮತ್ತು ಆಹಾರ ಇಲಾಖೆಯಿಂದ ಬರಬೇಕಾಗಿದೆ. ಬರಬೇಕಾದ ಸಿಬ್ಬಂದಿ ಖರ್ಚನ್ನು ಕೊಡುವಹಾಗೆ ತೀರ್ಮಾನವಾಗಿದೆಯೆಂದು ಕಂಡುಬಂದಿದೆ ಮತ್ತು ಹಣ ಕೂಡ ಕೊಟ್ಟಿದ್ದಾರೆ. ಜಾಗ್ರತೆ ವ್ಯವಸಾಯದ ಇಲಾಖೆಯಿಂದ ಮತ್ತು ಆಹಾರದ ಇಲಾಖೆಯಿಂದ ಬಾಕಿ ಮೊಬಲಗು ಸೊಸೈಟಿಗಳಿಗೆ ಬರುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆ ಮಾಡಿದರೆ ಈ ಸೊಸೈಟಿಗಳು ಚೆನ್ನಾಗಿ ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ನಾನಾಗಲೇ ಹೇಳಿದ ಹಾಗೆ ಈಗ ಬ್ಯಾಂಕು ಮತ್ತು ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಅವು ವ್ಯವಸ್ಥಿತವಾಗಿ ಮುಂದೆ ಕೂಡ ಶ್ರದ್ಧೆಯಿಂದ ಕೆಲಸ ಮಾಡುವ ರೀತಿಯಲ್ಲಿ ಸರ್ಕಾರದವರು ಏರ್ಪಾಡುಮಾಡಿ, ಅಲ್ಲಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ರಿಜಿಸ್ಟ್ರಾರ್ ಸಿಬ್ಬಂದಿಗಳಿಗೆ ಏನು ಅನುಕೂಲ ಕೊಡಬೇಕೊ ಅದನ್ನೆಲ್ಲಾ ಕೊಡಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ಡಾ॥ ನಾಗನಗೌಡರ ಛಾರ್ಜಿನಲ್ಲಿರುವ ಇಲಾಖೆಗಳಾದ ಸಹಕಾರ, ವ್ಯವಸಾಯ ಮತ್ತು ವೆಟರಿನೆರಿ ಇಲಾಖೆಗಳೇನಿವೆಯೋ ಅವೆಲ್ಲಾ ರೈತರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಹಾಯಕವಾಗುವ ಇಲಾಖೆಗಳು. ಅವು ವ್ಯವಸ್ಥಿತವಾದ ರೀತಿಯಲ್ಲಿ ಚುರುಕಿನಿಂದ ಕೆಲಸಮಾಡಿ ಜನರಿಗೆ ಸಹಾಯ ನೀಡುವಂತೆ ಮಾಡಬೇಕು. ಮಂತ್ರಿಗಳು ಆಸಕ್ತಿವಹಿಸಿ ಜನರಿಗೆ ಉತ್ತಮ ರೀತಿಯಲ್ಲಿ ಸಹಾಯವಾಗುವಂತೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಾನು ಈ ವಿಚಾರದಲ್ಲಿ ಹೊಸದಾಗಿ ಹೇಳತಕ್ಕಂಥ ವಿಚಾರ ಯಾವುದೂ ಇಲ್ಲ. ಆದರೆ ಈಗಾಗಲೇ ಏನು ವಿಚಾರಗಳನ್ನು ಶ್ರೀ ಜಿ. ಎ. ತಿಮ್ಮಪ್ಪಗೌಡರು ಹೇಳಿರುತ್ತಾರೋ ಅದೇ ವಿಷಯಗಳನ್ನೇ ನಾನೀಗ ಒತ್ತಿ ಹೇಳಲು ನಿಂತಿದ್ದೇನೆ.

ಈಗ ಷಾರ್ಟ್ ಟರ್ಮ್ ಲೋನುಗಳಿಗೆ 500 ರೂಪಾಯಿಗಳೇ ಪರಮಾವಧಿ ಎಂದು ಗೊತ್ತು ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಕಬ್ಬಿನ ವ್ಯವಸಾಯಗಾರರಿಗೂ ಮತ್ತು ಮಲೆನಾಡಿನ ಕಾಫಿ ಮತ್ತು ಏಲಕ್ಕಿ ವ್ಯವಸಾಯಗಾರರಿಗೂ ಈ ಮೊಬಲಗು ಏನೇನೂ ಸಾಲದು. 500 ರೂಪಾಯಿಗಳ ಸಾಲ ಪಡೆದುಕೊಳ್ಳುವುದಕ್ಕೂ ರೈತ ಸಾಕಷ್ಟು ಆಸ್ತಿಯನ್ನು ಈಡು ಮಾಡಬೇಕಾಗಿದೆ. ಹೀಗೆ ಆಸ್ತಿ ಈಡು ಮಾಡಿಕೊಡದಿದ್ದರೆ ಸಾಲ ದೊರೆಯುವುದಿಲ್ಲ. ಆದ್ದರಿಂದ ಮಲೆನಾಡಿನಲ್ಲಿ ಅಡಿಕೆ ತೋಟಗಾರರಿಗೂ ಮೈದಾನದಲ್ಲಿ 10 ಎಕರೆ ಭತ್ತದ ವ್ಯವಸಾಯಗಾರರು ಇಲ್ಲವೇ ಐದು ಎಕರೆ ಕಬ್ಬಿನ ವ್ಯವಸಾಯಗಾರರಿಗೆಲ್ಲಾ ಈ ಸಾಲವನ್ನು ಕೊನೇ ಪಕ್ಷ ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿಸತಕ್ಕದ್ದು ಅತ್ಯಗತ್ಯವೆಂದು ನಾನು ಭಾವಿಸಿದ್ದೇನೆ. ಆದಕಾರಣ ಈ ಷಾರ್ಟ್ ಟರ್ಮ್ ಲೋನ್ ಪ್ರಮಾಣವನ್ನು 500 ರೂಪಾಯಿಗಳಿಂದ ಒಂದು ಸಾವಿರಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮೀಡಿಯಂ ಟರ್ಮ್ ಲೋನ್ ವಿಚಾರ—ಈ ಸಾಲವನ್ನು ಕೊಡತಕ್ಕ ಬಗ್ಗೆ ರೂರಲ್ ಕ್ರೆಡಿಟ್ ಸ್ಕೀಂ ಮೇರೆಗೆ ರಿಸರ್ವ್ ಬ್ಯಾಂಕ್‌ನವರು ಎಪೆಕ್ಸ್ ಬ್ಯಾಂಕ್ ಮೂಲಕ ನಡೆಸುವಂತೆ ಏರ್ಪಾಡು ಮಾಡಿಕೊಂಡಿದ್ದಾರೆ. ವ್ಯವಸಾಯಗಾರರಿಗೆ ಬೇಕಾಗುವಂಥ ಸಾಲವನ್ನು ಇಂಡಸ್ಟ್ರಿಯಲ್ - ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಒದಗಿಸಲು ಪ್ರಯತ್ನ ನಡೆಯುತ್ತಿದೆಯೆಂದು ಕೇಳಿದೆ. ಈ ವ್ಯವಸ್ಥೆ ಸರಿಯಾಗುವುದಿಲ್ಲ. ರಾಗಿ ಬೆಳೆಯುವುದಕ್ಕೂ ಅಥವ ಭತ್ತ ಬೆಳೆಸುವುದಕ್ಕೂ ಬೇಕಾದಂಥ ಸಾಲ ಕೈಗಾರಿಕೆಗೆ ಹೀಗೆ ಅನ್ವಯಿಸುತ್ತದೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ರಾಗಿ—ಭತ್ತ ಬೆಳೆಯುವುದನ್ನು ಕೂಡ ಒಂದು ಕೈಗಾರಿಕೆಯೆಂದು ಭಾವಿಸುವುದು ಸರಿಯಲ್ಲ. ಮುಂದೆ ಈ ವ್ಯವಸ್ಥೆಯಲ್ಲಿ ಸಾಲ ಪಡೆಯಲು ತೊಂದರೆಯಾಗಬಹುದು. ಈ ರೀತಿ ಮಾಡಿರತಕ್ಕದ್ದು ತುಂಬಾ ಅಸಮಂಜಸವಾಗಿದೆ. ಕೈಗಾರಿಕೆಗೂ ಮತ್ತು ವ್ಯವಸಾಯೋದ್ಯಮಕ್ಕೂ ಹೀಗೆ ಗಂಟು ಹಾಕುವುದು ಸರಿಯಾದ್ದಲ್ಲ. ಗುದ್ದಲಿಗಳು ಇತ್ಯಾದಿಗಳನ್ನು ಮಾಡುವುದು ಕೈಗಾರಿಕೆಯ ಬಾಬಾಯಿತು. ಅದರಂತೆಯೇ ರಾಗಿ—ಭತ್ತ ಇತ್ಯಾದಿಗಳನ್ನು ಬೆಳೆಯುವುದೂ ಕೂಡ ಒಂದು ವಿಧವಾದ ಕೈಗಾರಿಕೆ ಎಂದು ಭಾವಿಸಿರತಕ್ಕದ್ದು ಸರಿಯಲ್ಲ. ಆದುದರಿಂದ ಈ ಮೀಡಿಯಂ ಟರ್ಮ್ ಲೋನು ಎಂಬುದು ವ್ಯವಸಾಯಗಾರರಿಗೆ ಖಾಯಂ ಕೆಲಸ

ಗಳಿಗೆ ಎಂದರೆ ಪಂಪ್‌ಸೆಟ್ಸ್‌ಗಳನ್ನು ಕೊಂಡುಕೊಳ್ಳುವುದಕ್ಕೂ ಮತ್ತು ಬಾವಿ ಇತ್ಯಾದಿಗಳನ್ನು ತೆಗೆಸುವುದಕ್ಕೂ ಕೊಡತಕ್ಕಂಥ ಸಾಲವಾಗಿದೆ. ಇಂಥಾ ಬಾಬುಗಳಿಗೆ ಕೊಡತಕ್ಕ ಸಾಲವನ್ನು ಯಾವತ್ತೂ ವ್ಯವಸಾಯಕ್ಕೆ ಸಂಬಂಧಪಟ್ಟ ಐಟಂ ಸಾಲವೆಂದು ಕೊಡಬೇಕೇ ಹೊರತು ಕೈಗಾರಿಕಾ ಸಾಲ ಎಂದು ಕೊಡುವುದರಲ್ಲಿ ಅರ್ಥವಿಲ್ಲ. ಈ ವಿಧವಾದಂಥ ಲೋಪದೋಷಗಳ ಬಗ್ಗೆ ನಾನು ಈ ಹಿಂದೆ ಕೂಡ ಟೀಕೆ ಮಾಡಿದ್ದೇನೆ. ಆದುದರಿಂದ ನಾನು ಪ್ರತಿ ಸಾರ್ತಿಯೂ ಈ ಸಂಬಂಧವಾಗಿ ಟೀಕೆ ಮಾಡಬೇಕೆಂದರೆ ನನಗದು ಸರಿಬೀಳುವುದಿಲ್ಲ. ಈ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರ ಸ್ಕೀಂ ಜಾರಿಗೆ ತಂದರು. ಆದರೆ ಈ ದಿವಸ ಅವು ಅಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಸರ್ಕಾರದವರು ಅವುಗಳನ್ನೆಲ್ಲಾ ಯಾವುದೋ ಒಂದು ದೃಷ್ಟಿಯನ್ನಿಟ್ಟುಕೊಂಡು ನೇಮಕ ಮಾಡಿದರು. ನಾನು ಪದೇ ಪದೇ ಆ ವಿಚಾರಗಳನ್ನು ಕೆಣಕುವುದಕ್ಕೆ ನನಗೆ ಆಸೆಯಿಲ್ಲ. ಅವುಗಳನ್ನು ಇಲ್ಲಿಯವರೆಗೂ ಸರಿಯಾದ ವ್ಯವಸ್ಥೆಗೆ ತಂದಿಲ್ಲ. ಯಾವುದೋ ಒಂದು ಕಡೆ ಎಂಟು ಜನ ಬಡಗಿಗಳಿಗೂ, ನಾಲ್ಕು ಜನ ಕುಂಬಾರರಿಗೂ, ನಾಲ್ಕಾರು ಜನ ಕಮ್ಮಾರರಿಗೂ ಸಹಾಯ ನೀಡಿಬಿಟ್ಟಾಕ್ಷಣಕ್ಕೇ ಅದೊಂದು ಇಂಡಸ್ಟ್ರಿಯಲ್ aid ಆಯಿತೆ.? ಇಂಥಾ ಸ್ಕೀಮುಗಳು ಬಹಳ ಕಾಲ ಬಾಳುವುದಿಲ್ಲ. ಇಂಥ ಸ್ಕೀಮುಗಳ ಮೂಲಕ ಈ ಹೊತ್ತು ವ್ಯವಸಾಯಗಾರರಿಗೂ ಸಹಾಯ ಮಾಡುತ್ತೇವೆ ಎಂಬುದಾಗಿ ಹೇಳುತ್ತಿರುವುದನ್ನು ನಂಬುವುದಕ್ಕಾಗುವುದಿಲ್ಲ. ಆದಕಾರಣ ಮೀಡಿಯಂ ಮತ್ತು ಷಾರ್ಟ್ ಟರ್ಮ್ ಲೋನುಗಳನ್ನು ಮಂಜೂರು ಮಾಡತಕ್ಕ ಅಧಿಕಾರವನ್ನು ಇಂಡಸ್ಟ್ರಿಯಲ್ ಸೊಸೈಟಿಗಳಿಗೆ ವಹಿಸಬಾರದೆಂದೂ ಮತ್ತು ಈ ಸಾಲಗಳನ್ನು ರೈತರಿಗೆ ಏಪೆಕ್ಸ್ ಬ್ಯಾಂಕ್ ಮೂಲಕವೇ ದೊರೆಯುವಂತೆ ಮಾಡಬೇಕೆಂದೂ ಸಲಹೆ ಮಾಡುತ್ತೇನೆ.

ಮತ್ತೊಂದು ನನ್ನ ಸಲಹೆ ಏನೆಂದರೆ ಈ ಮೀಡಿಯಂ ಟರ್ಮ್ ಸಾಲದ ಮೊಬಲಗನ್ನು ಮೂರು ಸಾವಿರಕ್ಕೆ ನಿಗದಿ ಮಾಡಿದ್ದಾರೆ. ಇದು ಏತಕ್ಕೂ ಸಾಲದು. ಈ ಮೊಬಲಗನ್ನು ಕನಿಷ್ಟಪಕ್ಷ ಐದು ಸಾವಿರಕ್ಕಾದರೂ ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ. ಈ ದಿವಸ ಒಂದು ಬಾವಿ ತೆಗೆಸಬೇಕೆಂದರೆ ಐದು ಸಾವಿರ ರೂಪಾಯಿಗಳಿಗೆ ಕಡಮೆಯಾಗುವುದಿಲ್ಲ. ಮೀಡಿಯಂ ಟರ್ಮ್ ಲೋನನ್ನು ಕೊಡತಕ್ಕ ಉದ್ದೇಶವೇ ಇದು. ಈ ಸಾಲವನ್ನು ಯಾವಾಗ್ಗೂ ಖಾಯಂ ಕೆಲಸಗಳನ್ನು ಕೈಗೊಳ್ಳಲು ನೀಡಬೇಕೆಂಬುದೇ ಆಗಿರುತ್ತದೆ. ಈ ಸಾಲದ ಪರಮಾವಧಿಯನ್ನು ಐದು ಸಾವಿರಕ್ಕೆ ನಿಗದಿ ಮಾಡಬೇಕು. ಷಾರ್ಟ್ ಟರ್ಮ್ ಲೋನುಗಳನ್ನು ಒಂದು ಸಾವಿರಕ್ಕೆ ನಿಗದಿ ಮಾಡಬೇಕು. ಇಷ್ಟನ್ನು ಮಾತ್ರ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಸಹಕಾರ ಬಾಬು ಎನ್ನತಕ್ಕದ್ದು ರೈತರ ಅಭಿವೃದ್ಧಿಗೆ ಬಹಳ ಸಾಧಕವಾದದ್ದು. ಆದರೆ ಈ ದಿವಸ ಈ ಸಹಕಾರ ಸಂಸ್ಥೆಗಳು ರೈತನಿಗೆ ಯಾವ ರೀತಿ ಉಪಕಾರಮಾಡಬೇಕು ಎಂಬುದನ್ನು ನಿರ್ಧರಿಸತಕ್ಕ ವಿಚಾರಗಳಿಗೆ ಸರ್ಕಾರ ತನ್ನ ಗಮನವನ್ನು ಕೊಟ್ಟಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಒಂದು ಸರಿಯಾದ ಪಾಲಿಸಿ ಇಲ್ಲ. ಈ ಸಂಸ್ಥೆಗಳ ಆಡಿಟ್ಟನ್ನು ಕಾಲಕ್ಕೆ ಸರಿಯಾಗಿ ನಡೆಸುತ್ತಿಲ್ಲ. ಕೆಲವು ಸಂದರ್ಭಗಳಲ್ಲೇನೋ ಕೆಲವು ಸಂಸ್ಥೆಗಳ ಆಡಿಟ್ ಆಗಿದೆ. ಆದರೆ ಅದು ಅಷ್ಟು ತೃಪ್ತಿಕರವಾಗಿಲ್ಲ. ಆದಕಾರಣ ಈ ಸಂಸ್ಥೆಗಳ ಆಡಿಟ್ಟನ್ನು ಇನ್ನೂ ತೃಪ್ತಿಕರವಾದ ರೀತಿಯಲ್ಲಿ ಸಕಾಲಕ್ಕೆ ನಡೆಯುವಂತೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸುತ್ತೇನೆ. ಉದಾಹರಣೆಗೆ, ನಾವು ಈಗ ಪೋಸ್ಟಲ್ ಡಿಪಾರ್ಟ್‌ಮೆಂಟಿನ ವಿಚಾರ ತೆಗೆದುಕ್ಕೊಂಡು ಹೇಳುವುದಾದರೆ, ಮೂರು—ನಾಲ್ಕು ಜಿಲ್ಲೆಗಳಿಗೊಬ್ಬ ಇನ್‌ಸ್ಪೆಕ್ಟರಿರುತ್ತಾರೆ. ಎಲ್ಲಿಯಾದರೂ ಒಂದು ಡಿಫಾಲ್ಕೇಷನ್ ಕೇಸ್ ನಡೆಯಿತೆಂದರೆ ಆ ಬಗ್ಗೆ ತಕ್ಷಣ ಅವರು ಕಾರ್ಯಕ್ರಮಕೈಕೊಂಡು ಕೂಡಲೇ ಆ ಅಕ್ರಮ ನಡೆವಳಿಕೆ ನಡೆಸಿದವನನ್ನು ಶಿಕ್ಷೆಗೆ ಒಳಪಡಿಸುತ್ತಾರೆ. ಆ ಒಂದು ಬಗಿ ಆ ಇಲಾಖೆಯಲ್ಲಿರುವುದರಿಂದ ಅಲ್ಲಿ ಈ ದಿವಸ ದುಡ್ಡು ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ. ಆದರೆ ಈ ಹೊತ್ತು ಈ ನಮ್ಮ ಇಲಾಖೆಗಳಲ್ಲಿ ಪ್ರತ್ಯಕ್ಷವಾಗಿ ಹಣ ದುರುಪಯೋಗವಾಗಿರತಕ್ಕದ್ದು ಅಧಿಕಾರಿಗಳ ಕಣ್ಣಿಗೆ ಬಿದ್ದರೂ ಸಹ ಆ ಆಫೀಸಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿರುವುದಿಲ್ಲವೆಂಬ ನೆಪದಮೇಲೆ ಅಂಥ ಕೇಸುಗಳನ್ನು ಕೈಬಿಟ್ಟು ಕಾಲವನ್ನು ತಳ್ಳಿಕೊಂಡು ಬರುತ್ತಿರುವುದರಿಂದ ಆ ನೌಕರರಿಗೆ ಧೈರ್ಯ ಉಂಟಾಗಿ ಆಡಿಟ್ ನಡೆಯುವ ವೇಳೆಗೆ ಆ ದುಡ್ಡನ್ನೆಲ್ಲಾ ತಿಂದುಹಾಕಿಬಿಟ್ಟಿರುತ್ತಾರೆ. ಈ ಹಿಂದೆ ಶ್ರೀ ಟಿ. ಮರಿಯಪ್ಪನವರ ಕಾಲದಲ್ಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭಿಸಲಾಯಿತು. ಅವುಗಳಮೇಲೆ ನಿಗಾ ನೋಡಿಕೊಳ್ಳಲು ರೆವಿನ್ಯೂ ಇನ್‌ಸ್ಪೆಕ್ಟರಿಗೆ ಅಧಿಕಾರಕೊಡಲಾಗಿತ್ತು. ಅವರೇ ಆ ಹಣವನ್ನೆಲ್ಲಾ ತಿಂದುಹಾಕಿ ಕೂತಿದ್ದಾರೆ. ಆದರೆ ಈ ದಿವಸ ಅವರು ಪತ್ತೆ ಇಲ್ಲ. ಸರ್ಕಾರದವರು ಅವರ ಮೇಲೆ ಸಕಾಲಕ್ಕೆ ಕ್ರಮವನ್ನು ಕೈಗೊಳ್ಳದೆ ಇದ್ದುದರಿಂದ ಅವರು ಪರಾರಿಯಾಗುವುದಕ್ಕೂ ಮತ್ತು ಅವರಿಂದ ಹಣವನ್ನು ವಸೂಲು ಮಾಡಲು ಇದ್ದಂಥ ಅವಕಾಶವನ್ನು ಕಳೆದುಕೊಳ್ಳುವುದಕ್ಕೂ ಕಾರಣವಾಯಿತು.

ಇನ್ನು ಈ ರೈತರಿಗೆ ಸಾಲ ಕೊಡತಕ್ಕ ವಿಚಾರದಲ್ಲಿ ಕೈಗಾರಿಕೆಗಳ ವ್ಯವಹಾರಕ್ಕೂ ಮತ್ತು ವ್ಯವಸಾಯಗಾರರ ವ್ಯವಹಾರಕ್ಕೂ ಯಾವ ಸಂಬಂಧವೂ ಇರಬಾರದು. ಈ ಎರಡೂ ಬೇರೆ ಬೇರೆ ವ್ಯವಹಾರಗಳು. ಇವು ಒಂದಕ್ಕೊಂದು ಬೆರೆಯದಂತೆ ಸ್ವಾತಂತ್ರ್ಯದಿಂದಿರಬೇಕು.

ಈ ದಿವಸ ಸೊಸೈಟಿಗಳ ಮೂಲಕ ರೈತನಿಗೆ ದೊರೆಯುತ್ತಿರುವ ಸಾಲದ ಬಗ್ಗೆ ಬಡ್ಡಿ ದುಬಾರಿ ಆಗಿದೆ. ನಮ್ಮ ದೇಶದ ರೈತರಿಗೆ ಅಷ್ಟು ಹೆಚ್ಚಿನ ಬಡ್ಡಿ ತೆತ್ತು ಸಾಲ ತೀರಿಸುವಷ್ಟು ಶಕ್ತಿ ಇಲ್ಲ. ಈ ದಿವಸ ಆಗಲೇ ರೈತರ ಮೇಲಿರುವ ಸಾಲ 40 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಸಾಲವನ್ನೆಲ್ಲಾ ಅವರು ಈ ಸಹಕಾರ ಸಂಸ್ಥೆಯ ಸಹಾಯದಿಂದ ತೀರಿಸಬೇಕಾಗಿದೆ. ಮದ್ರಾಸ್ ಪ್ರಾಂತ್ಯದಲ್ಲಿರತಕ್ಕ ಸಹಕಾರ ಸಂಘಗಳು ರೈತನಿಗೆ ಬಹಳ ಉಪಕಾರವಾದಂಥವುಗಳಾಗಿರುತ್ತವೆ. ಈ ದಿವಸ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಈ ಸಹಕಾರ ಸಂಘಗಳು ಯಾವ ರೀತಿ ಕೆಲಸ ನಡೆಸುತ್ತಿವೆ ಎಂಬುದನ್ನು ನೋಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಆದುದರಿಂದ ನಮ್ಮ ಸರ್ಕಾರ ಕೂಡ ಆ ಪದ್ಧತಿಯನ್ನೇ ಇಲ್ಲಿಯೂ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಈ ಷಾರ್ಟ್‌ಟರ್ಮ್ ಲೋನಿನ ಬಗ್ಗೆ ಸರ್ಕಾರ ಕನಿಷ್ಟಪಕ್ಷ ಒಂದೊಂದು ಜಿಲ್ಲೆಗೂ ಒಂದು ಕೋಟಿಯಂತೆ

(ಶ್ರೀ ಬಿ. ಹುಚ್ಚೇಗೌಡ)

ಹತ್ತು ಜಿಲ್ಲೆಗೂ 10 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಈ ದಿವಸ ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನವರು ರೈತರಿಗೆ ಮಂಜೂರು ಮಾಡತಕ್ಕ ಸಾಲದ ಬಗ್ಗೆ ಶೇಕಡಾ ಆರೂವರೆಯಂತೆ ಬಡ್ಡಿಯನ್ನು ಹಾಕುತ್ತಿದ್ದಾರೆ. ಆದರೆ ಮದ್ರಾಸ್ ಪ್ರಾಂತ್ಯದಲ್ಲಿ ಅವರು ಶೇಕಡ ಮೂರೂವರೆ ಪ್ರಕಾರ ಬಡ್ಡಿ ಹಾಕುತ್ತಿದ್ದಾರೆಂದು ಕೇಳತ್ತೇನೆ. ಆದುದರಿಂದ ತಾವು ಇಲ್ಲಿ ಬಡ್ಡಿಯ ದರವನ್ನು ಶೇಕಡ ಮೂರಕ್ಕೆ ಇಳಿಸಬೇಕೆಂದು ಹೇಳುತ್ತೇನೆ. ತಾವು ರೈತನನ್ನು ಉದ್ಧಾರವಮಾಡಬೇಕೆಂದಿದ್ದರೆ ಮತ್ತು ಆತನನ್ನು ಸಾಲಗಾರರ ಕಾಟದಿಂದ ಪಾರು ಮಾಡಬೇಕೆಂಬುದಾಗಿದ್ದರೆ, ಈ ಷಾರ್ಟ್ ಮತ್ತು ಮೀಡಿಯಂ ಟರ್ಮ್ ಲೋನುಗಳ ಬಡ್ಡಿ ದರವನ್ನು ಇಳಿಸಿ ಅದನ್ನು ಶೇಕಡಾ ಮೂರಕ್ಕೆ ನಿಲ್ಲಿಸಬೇಕೆಂದು ಹೇಳುತ್ತೇನೆ. ಮದ್ರಾಸ್ ಪ್ರಾಂತ್ಯದಲ್ಲಿ ಸಹ ಈಗ ಶೇಕಡಾ ಮೂರರಂತೆ ಬಡ್ಡಿ ವಿಧಿಸಲಾಗುತ್ತಿದೆಯಂತೆ. ತಾವೂ ಸಹ ಇಲ್ಲಿ ಶೇಕಡಾ ಮೂರರಂತೆ ಬಡ್ಡಿ ವಿಧಾಯಕ ಮಾಡುವುದು ಒಳ್ಳೆಯದು.

ಈ ದಿವಸ ಸೊಸೈಟಿಗಳ ಸೂಪರ್‌ವಿಷನ್ ನೋಡಿಕೊಳ್ಳುತ್ತಿರುವ ಇನ್‌ಸ್ಪೆಕ್ಟರುಗಳು ಓವರ್‌ಲ್ಯಾಪ್ ಆಗಿದ್ದಾರೆ. ಅವರು ಡೂಪ್ಲಿಕೇಟ್ ಆಗಿದ್ದಾರೆ. ಈ ದಿವಸ N.E.S. ಬ್ಲಾಕುಗಳಲ್ಲಿ ಹೇಗೆ ನಾಲ್ಕು-ಐದು ಬ್ಲಾಕುಗಳಿಗೆ ಒಬ್ಬರು ಇನ್‌ಸ್ಪೆಕ್ಟರುಗಳಿದ್ದಾರೋ ಹಾಗೆಯೇ ಈ ಇಲಾಖೆಯಲ್ಲೂ ಮೂರು-ನಾಲ್ಕು ಸೊಸೈಟಿಗಳಿಗೆ ಒಬ್ಬರು ಇನ್‌ಸ್ಪೆಕ್ಟರು ಇದ್ದರೆ ಸಾಕು. ಹೀಗೆ ಇವರನ್ನು ರೀಡಿಸ್ಟ್ರಿಬ್ಯೂಟ್ ಮಾಡಬೇಕು.

ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ರಿಜಿಸ್ಟ್ರಾರ್ ಅವರನ್ನು ರೆವಿನ್ಯೂ ಇಲಾಖೆಯಿಂದ ನೇರವಾಗಿ ತೆಗೆದುಕೊಂಡಿದ್ದಾರೆ. ಇವರನ್ನು ಖಾಯಂ ಆಗಿ ಇಲ್ಲಿಯೇ ಇಟ್ಟುಕೊಳ್ಳುವಹಾಗಿದ್ದರೆ ಇಟ್ಟುಕೊಳ್ಳಬೇಕು, ಇಲ್ಲವಾದರೆ ಇವರನ್ನು ಕೂಡಲೇ ಆ ಇಲಾಖೆಗೆ ವರ್ಗಾಯಿಸಿ ಇಲ್ಲಿಗೆ ಪ್ರತ್ಯೇಕವಾಗಿ ಒಬ್ಬರನ್ನು ನೇಮಕಮಾಡಿಕೊಳ್ಳುವುದು ಅಗತ್ಯ. ಇಲ್ಲವಾದರೆ ಈ ಇಲಾಖೆಯ ಕೆಲಸಗಳು ಅಷ್ಟು ಉಮೇದಿನಿಂದ ನಡೆಸಲು ಅವರಿಗೆ ಅವಕಾಶವಿರುವುದಿಲ್ಲ. ಇಲ್ಲಿಗೆ ಯಾರೇ ಹಂಗಾಮಿಯಾಗಿ ಬಂದರೂ ಅವರಿಗೆ ಈ ರಿಜಿಸ್ಟ್ರಾರ್ ಅವರ ಗ್ರೇಡನ್ನು ಕೊಡಬೇಕು. ಹಾಗೆ ಕೊಡದೆ ಹೋದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ. ಆದಕಾರಣ ಯಾರೋ ಒಬ್ಬರನ್ನು ಹೀಗೆ ಹಂಗಾಮಿಯಾಗಿಟ್ಟುಕೊಂಡು ಅವರಿಗೆ ಸಾಕಷ್ಟು ಉತ್ತೇಜನ ಕೊಡದೆ ಅವರನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಇಲಾಖೆಯ ಹಿತದೃಷ್ಟಿಯಿಂದ ಸಾಧುವಾದ್ದಲ್ಲವೆಂದು ಹೇಳುತ್ತೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಇತ್ತೀಚೆಗೆ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಜಮೀನು ಅಡಮಾನದ ಬ್ಯಾಂಕು ಏನಿದೆ ಅಲ್ಲಿ ಕೆಲವು ಲೋಪದೋಷಗಳಿವೆ, ಅವನ್ನು ಸರಿಪಡಿಸಿ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಐದು ಸಾವಿರದಿಂದ 10 ಸಾವಿರ ರೂಪಾಯಿಗಳ ಸಾಲ ಕೊಡುವುದನ್ನು ಈಗ ಸ್ವಲ್ಪ ವಿಮರ್ಶೆ ಮಾಡಬೇಕಾಗಿದೆ. ನಿಜವಾಗಿಯೂ ರೈತನಿಗೆ ಸಾಲ ಇದೆಯೋ ಇಲ್ಲವೋ ಎಂಬುದನ್ನು ಪತ್ತೇ ಹಚ್ಚಿ ಸಾಲ ಕೊಡಬೇಕು. ಈಗ ಏನಾಗಿದೆ ಎಂದರೆ ಸಾಲ ಇಲ್ಲದೇ ಇದ್ದರೂ ಕೂಡ ಸುಳ್ಳು ಪ್ರಾಮಿಸರಿ ಬಾಂಡ್ ತೋರಿಸಿ ಸಾಲ ತೆಗೆದುಕೊಂಡು ವ್ಯವಸಾಯಕ್ಕೆ ಬೇಕಾದ ಜಮೀನನ್ನು ಕೊಂಡುಕೊಳ್ಳುತ್ತಾ ಇದ್ದಾರೆ. ನಿಜವಾಗಿಯೂ ಇವತ್ತು ಯಾವ ರೈತ ಸಾಲಗಾರನಾಗಿದ್ದಾನೆಯೋ ಅವನಿಗೆ ಸಾಲ ದೊರೆಯದೆ ಅವನು ತೊಂದರೆ ಪಡುತ್ತಾ ಇದ್ದಾನೆ. ಅದೇ ಇನ್ನು ಕೆಲವರು ಯಾವ ಕಷ್ಟವೂ ಇಲ್ಲದೆ ಸಾವಿರ, ಎರಡು ಸಾವಿರ ರೂಪಾಯಿಗಳ ಸಾಲ ಪಡೆಯುತ್ತಿದ್ದಾರೆ. ಇನ್ನು ಕೆಲವರು ಹೆಚ್ಚಿನ ಸಾಲ ತೆಗೆದುಕೊಂಡು ದುರುಪಯೋಗಮಾಡಿಕೊಂಡಿದ್ದಾರೆ. ಆದ್ದರಿಂದ ಸಾಲ ಕೊಡುವಾಗ ನಿಜವಾಗಿಯೂ ಸಾಲ ಇದೆಯೋ ಇಲ್ಲವೋ ಎಂಬುದನ್ನು ವಿಮರ್ಶೆಮಾಡಿ, ಯಾರು ಸಾಲ ಪಡೆಯಲಿಕ್ಕೆ ಅರ್ಹರೋ, ಯಾರಿಗೆ ಆಧಾರವಿದೆಯೋ, ಅವರಿಗೆ ಕೊಡುವಂತೆ ತಕ್ಕ ಏರ್ಪಾಡು ಮಾಡಬೇಕು.

ಆ ಮೇಲೆ ಸಾಲ ತೆಗೆದುಕೊಳ್ಳುವಾಗ ಬಡವರಿಗೆ ಬಹಳ ತೊಂದರೆಯಾಗುತ್ತಾ ಇದೆ. ಏಕೆಂದರೆ ಸಾಲಕ್ಕೆ ಅರ್ಜಿ ಹಾಕಿದರೆ ಒಂದು ವರ್ಷವಾದರೂ ಕೂಡ ಮಂಜೂರಾಗಿ ಬರುತ್ತಿಲ್ಲ. ಹಿಂದೆ 4—5 ವರ್ಷ ಆಗುತ್ತಾ ಇತ್ತು, ಈಗ 2—3 ವರ್ಷದಿಂದ ಸ್ವಲ್ಪಮಟ್ಟಿಗೆ ಜಾಗ್ರತೆಆಗುತ್ತಾ ಇದೆ, ಅದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಇದೇ ರೀತಿ ಸುಲಭವಾಗಿ ರೈತನಿಗೆ ಸಾಲ ದೊರೆಯಬೇಕಾದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕೇಸ್ ವರ್ಕರ್ಸ್‌ನ್ನು ನೇಮಕಮಾಡಬೇಕು. ಯಾವ ರೆಕಾರ್ಡು ಯಾವ ರೀತಿ ಬಿಲ್ಡ್ ಅಪ್ ಮಾಡಬೇಕು ಎಂಬುದು ಗೊತ್ತಿಲ್ಲದೇ ಟ್ರೈನಿಂಗ್ ಇಲ್ಲದೇ ಇರತಕ್ಕ ಸಕ್ರೆಟೆರಿಯನ್ನು ಇಟ್ಟುಕೊಂಡು ಆಯಾಯಾ ತಾಲ್ಲೂಕಿನಿಂದ ರೆಕಾರ್ಡುಗಳನ್ನು ಕೇಂದ್ರ ಅಡಮಾನದ ಬ್ಯಾಂಕಿಗೆ ಕಳುಹಿಸುತ್ತಾರೆ. ಇಲ್ಲಿಂದ ಹತ್ತು ಹದಿನೈದು ಸಾರಿ ಕ್ವೈರಿ ಹಾಕುತ್ತಾರೆ. ಹೀಗಾಗಿ ವರ್ಷ, ಆರು ತಿಂಗಳು ನಿಧಾನವಾಗುತ್ತದೆ. ಆದ್ದರಿಂದ ಅನುಭವಸ್ಥರಾದ ಕೇಸ್ ವರ್ಕರುಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಗೊತ್ತು ಮಾಡಿ, ರೆಕಾರ್ಡ್ ಬಂದ ತಕ್ಷಣ ಅದು ಮಂಜೂರಾಗಿ ರೈತನಿಗೆ ಸಾಲ ದೊರೆಯುವಂತೆ ತಕ್ಕ ಏರ್ಪಾಡು ಮಾಡಬೇಕು.

ಈಗ ಇರತಕ್ಕ ಬಡ್ಡಿ ದರವನ್ನು ಕಮ್ಮಿ ಮಾಡಬೇಕು. ಶ್ರೀ ಹುಚ್ಚೇಗೌಡರು ಹೇಳಿದ, ಹಾಗೆ, ಬಡ್ಡಿ ದರ ಹೆಚ್ಚಾಗಿದೆ, ಅದನ್ನು ಕಮ್ಮಿ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಜಮೀನು ಅಡಮಾನ ಬ್ಯಾಂಕಿನಲ್ಲಿ ಯಾರಿಗೆ ಆಧಾರವಿದೆಯೋ ಅವರಿಗೆ ಸಾಲ ಕೊಡಬೇಕೆಂದು ಶ್ರೀ ಚಿಕ್ಕಣ್ಣನವರು ಹೇಳಿದರು. ಅದೇನೋ ನಿಜ. ಸಾಮಾನ್ಯವಾಗಿ ಗೌರವಸ್ಥರಾಗಿರುವವರು 10 ಸಾವಿರ, 15 ಸಾವಿರ ರೂಪಾಯಿಗಳವರೆಗೂ ಬರೀ ಬಾಯಿ ಮಾತಿನಲ್ಲೇ ಸಾಲ ಪಡೆದುಕೊಂಡಿರುತ್ತಾರೆ. ಒಂದು ರಸೀತಿಯ ಮೂಲಕ ಹಣ ಪಡೆದಿರುವವರೂ ಇದ್ದಾರೆ. ಆದ್ದರಿಂದ ಅವರ ಗೌರವ ಉಳಿದುಕೊಳ್ಳಬೇಕಾಗಿದ್ದರೆ ರಿಜಿಸ್ಟ್ರೇಷನ್ ಬೇಡ, ಏನೂ ಬೇಡ ಅದನ್ನು ಅವರು ತೀರಿಸಲೇಬೇಕು, ತೀರಿಸಿಯೂ ತೀರಿಸುತ್ತಾರೆ. ಸಾಮಾನ್ಯವಾಗಿ ಅಡಮಾನದ ಬ್ಯಾಂಕಿನಲ್ಲಿ ದುಡ್ಡು ತೆಗೆದುಕೊಳ್ಳಬೇಕಾದರೆ ಬಹಳ ತೊಂದರೆ ಇದೆ. ಯಾವ ರೈತನಿಗೆ ದುಡ್ಡಿನ ಅವಶ್ಯಕತೆ ಇದೆಯೋ ಅವನಿಗೆ ಸಾಲ ದೊರೆಯುವಂತೆ ಏರ್ಪಾಡು ಮಾಡಬೇಕು. ಈ ವರ್ಷ ಸಾಲಕ್ಕೆ ಅರ್ಜಿ ಕೊಟ್ಟರೆ ಮುಂದಿನ ವರ್ಷಕ್ಕೂ ಕೂಡ ಸಾಲ ದೊರೆಯುತ್ತಿಲ್ಲ.

ಅರ್ಜಿ ಮಾತ್ರ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹೋಗುತ್ತಾ ಇರುತ್ತದೆ. ಸಾಲ ಮಾತ್ರ ಸಿಕ್ಕೋ ಹಾಗೇ ಇಲ್ಲ. ಇದನ್ನು ಸರಿಪಡಿಸಬೇಕು.

ಇನ್ನೊಂದು ವಿಚಾರ. ಮಲ್ಟಿಪರ್‌ಪಸ್ ಸೊಸೈಟಿ ಎಂದು ಹಿಂದೆ ಪ್ರಾರಂಭವಾಯಿತು. ಅಯಾಯ ತಾಲ್ಲೂಕಿನ ಮುಖಂಡರು, ಮತ್ತು ಆಯಾಯಾ ತಾಲ್ಲೂಕಿನ ಅಮಲ್ದಾರರು ಎಲ್ಲಾ ಸೇರಿ ಜನರಿಂದ ದುಡ್ಡು ಶೇಖರಿಸಿ ಇಂತಿಂಥಾ ಅನುಕೂಲ ಮಾಡಿಕೊಡುತ್ತೇವೆ, ಈ ರೀತಿ ಪ್ರಯೋಜನವಾಗುತ್ತದೆ ಎಂದು ಹೇಳಿ ಆ ಸೊಸೈಟಿಗಳೂ ಕೆಲಸಮಾಡುವುದಕ್ಕೆ ಪ್ರಾರಂಭವಾದುವು. 500—50—10—20 ರೂಪಾಯಿ ಈ ರೀತಿ ಎಲ್ಲಾ ಹಣ ಕೂಡಿಸಿಕೊಟ್ಟರು. ಮೈಸೂರು ತಾಲ್ಲೂಕಿನಲ್ಲಿ ಹೀಗೆ ಹಣ ವಸೂಲಾಯಿತು. ಈಗ ಆ ದುಡ್ಡನ್ನೆಲಾ ಅಲ್ಲಿರುವ ಗುಮಾಸ್ತರು ತಿಂದು ಹಾಕಿದ್ದಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳಲ್ಲೂ ಕೂಡ ಹೋದ ವರ್ಷವೇ ಹೇಳಿದೆ, ಅರ್ಜಿ ಸಹ ಕೊಟ್ಟೆ. ರೆವಿನ್ಯೂ ಇನ್‌ಸ್ಪೆಕ್ಟರು ಸೆಕ್ರೆಟರಿಗಳಾಗಿದ್ದರು. ಯಾರ್ಯಾರಲ್ಲಿ ಎಷ್ಟೆಷ್ಟು ಹಣ ಇದೆ, ಯಾರ್ಯಾರು ಎಷ್ಟೆಷ್ಟು ತಿಂದುಹಾಕಿದ್ದಾರೆ ಎಂಬುದನ್ನೆಲ್ಲಾ ಆಡಿಟ್ ಮಾಡುತ್ತೇವೆ, ಮಾಡಿಸುತ್ತೇವೆ ಎಂದು ಹೇಳಿ ವರ್ಷಾನುಗಟ್ಟಲೆ ಆಯಿತು. ಇನ್ನೂ ಮಾಡಿಸಿಲ್ಲ. ಇವತ್ತಿನವರೆಗೂ ಕೂಡ ಲೆಕ್ಕ ಪತ್ರಗಳು ಏನಾಯಿತು ಎಂಬುದು ಗೊತ್ತಿಲ್ಲ. ಹಣ ಕೊಟ್ಟವರು ವಾಪಸು ಕೊಡಿಸಿ ಎಂದು ನನ್ನನ್ನು ಬಂದು ಪೀಡಿಸುತ್ತಾ ಇದ್ದಾರೆ. ಹೀಗಾಗಿ ಜನಗಳ ಮನಸ್ಸಿನಲ್ಲಿ ಒಂದು ರೀತಿಯ ಕೆಟ್ಟ ಮನೋಭಾವವುಂಟಾಗಿದೆ.

ವಿಶ್ವೇಶ್ವರಯ್ಯನವರ ಯೋಜನೆ ಪ್ರಕಾರ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳನ್ನು ಮಾಡಿದ್ದರು. ಅದರಲ್ಲೂ ಕೂಡ ಜನಗಳಿಂದ ಸಾಧ್ಯವಾದಷ್ಟು ಹಣ ವಸೂಲು ಮಾಡಬೇಕೆಂದುಪ್ರಯತ್ನ ಮಾಡಿದಾಗ ಮೂರು ಕಾಸು ಕೂಡ ಯಾರೂ ಕೊಡಲಿಲ್ಲ. ನಮ್ಮ ಹಣ ತೆಗೆದುಕೊಂಡು ನೀವು ಏನು ಮಾಡುತ್ತೀರಿ ಎಂಬುದು ಗೊತ್ತು, ಅದಕ್ಕೇಕೆ ನಾವು ಕೊಡಬೇಕು ಎಂದು ಜನಗಳು ನಮ್ಮನ್ನ ಕೇಳುತ್ತಾ ಇದ್ದಾರೆ. ಮತ್ತು ಯಾರು ದುಡ್ಡು ವಸೂಲು ಮಾಡುತ್ತಾರೋ ಅಂಥವರೇ ತಿಂದು ಹಾಕುತ್ತಾರೆ ಎಂಬ ಅಪಾದನೆ ನಮ್ಮ ಮೇಲೆ ಇದೆ. ಈ ಅಪಾದನೆ ಹೋಗಬೇಕಾದರೆ ಹಿಂದೆ ದುಡ್ಡು ವಸೂಲು ಮಾಡಿದ್ದನ್ನು ಅವರಿಗೆ ವಾಪಸು ಕೊಡುವಂತೆ ಮಾಡಬೇಕು. ಈ ದುಡ್ಡು ತಿಂದಿರುವವರು ಷರಾಯಿ ಹಾಕಿಕೊಂಡು ಕೋಟು ಹಾಕಿಕೊಂಡು ಷೋಕಾಗಿ ತಿರುಗುತ್ತಾರೆ. ಅವರಿಗೆ ಏನೂ ಶಿಕ್ಷೆ ಮಾಡಿಲ್ಲ. ವರ್ಷಾನುಗಟ್ಟಲೆಯಿಂದ ಹೇಳಿದರೂ ಮನಸ್ಸಿಗೆ ತೆಗೆದುಕೊಂಡಿಲ್ಲ. ಇದು ಹತ್ತು ಜನಗಳ ದುಡ್ಡು. ಸರ್ಕಾರದ ದುಡ್ಡಾದರೆ ಬಿಡುತ್ತಾರೆಯೇ ? ಯಾರು ಜವಾಬ್ದಾರರೋ ಅವರನ್ನು ಮುಟ್ಟ ಹಾಕಿಸಿ ಪೋಲಾಗಿರುವ ದುಡ್ಡನ್ನು ತಕ್ಷಣ ವಸೂಲು ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ನಾನು ಈ ಸಹಕಾರ ಸಂಘಗಳ ವಿಚಾರದಲ್ಲಿ ಮಾತನಾಡಲು ಅಪೇಕ್ಷಿಸುತ್ತೇನೆ. ಈ ಡಿಮ್ಯಾಂಡಿಗೆ ಬೆಂಬಲಕೊಡುತ್ತಾ ಈ ಸಾರಿ ಬೆಂಗಳೂರು ಸಿಟಿಗೆ ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಮಂಜೂರು ಮಾಡಿರುವುದಕ್ಕಾಗಿ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಮಂಜೂರು ಮಾಡಿದ ಮಾತ್ರಕ್ಕೇ ಎಲ್ಲವೂ ಉತ್ತಮವಾಗುವುದಿಲ್ಲ. ಇನ್ನೂ ಆಗಬೇಕಾಗಿರತಕ್ಕ ಕಾರ್ಯಭಾರ ಬಹುಮಟ್ಟಿಗೆ ಇದೆ. ಇದಕ್ಕೆ ವೇರ್‌ಹೌಸ್ ಆಗಬೇಕು, ವೇರ್‌ಹೌಸ್‌ಗೆ ತಕ್ಕ ಶಿಬ್ಬಂದಿ ವ್ಯವಸ್ಥೆ ಆಗಬೇಕು. ಅಷ್ಟೇ ಅಲ್ಲದೆ ಹೋದ ಅಧಿವೇಶನದಲ್ಲೂ ಕೂಡ ಒತ್ತಾಯ ಮಾಡಿದೆ ಈಗಲೂ ಮಾಡುತ್ತಾ ಇದ್ದೇನೆ: ಮೈಸೂರು ಸಂಸ್ಥಾನದಲ್ಲೆಲ್ಲಾ ಅಳತೆ ಮತ್ತು ತೂಕ ಯೂನಿಫಾರಂ ಆಗಿ ಇರುವಂತೆ ಮಾಡಬೇಕು. ಯೂನಿಫಾರಂ ವೇಟ್ಸ್ ಅಂಡ್ ಮೆಷರ್ಸ್ ಇಲ್ಲದೆ ಬಹಳವಾಗಿ ಮೋಸ ಆಗುತ್ತಾ ಇದೆ. ಅದನ್ನು ತಮ್ಮ ಗಮನಕ್ಕೆ ತಂದೂ ಕೂಡ ಇನ್ನೂ ಅದಕ್ಕೆ ಗಮನ ಕೊಟ್ಟಿಲ್ಲ. ಆ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಸಾಲ ಕೊಡುವ ವಿಚಾರದಲ್ಲಿ ನಮ್ಮ ಸ್ನೇಹಿತರು ಈಗಾಗಲೇ ಅನೇಕ ವಿಷಯಗಳನ್ನು ಹೇಳಿದ್ದಾರೆ. ಒಳ್ಳೆಯದು. ಇನ್ನು ಹೆಚ್ಚು ಹೆಚ್ಚಾಗಿ ಸಾಲಗಳನ್ನು ಕೊಡಿ. ಆದರೆ ಅವುಗಳ ವಸೂಲಾತಿ ಮಾತ್ರ ಕರಾರುವಾಕ್ಕಾಗಿ ಆಗಬೇಕು. ಆ ರೀತಿ ಆಗಬೇಕಾದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಬಹಳ ಜಾಗ್ರತೆಯಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ, ಹೋಗಿ ತನಿಖೆ ಮಾಡಿ, ಪರಿಶೀಲನೆ ನಡೆಸಬೇಕಾಗುತ್ತದೆ. ಅದಕ್ಕೆ ಬೇಕಾಗತಕ್ಕ ವಾಹನ ಸೌಕರ್ಯ ಮುಂತಾದುವುಗಳನ್ನು ಮಾಡಿಕೊಡಬೇಕೆಂದು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಈ ಸಹಕಾರ ಸಂಸ್ಥೆಗಳಲ್ಲಿ ಬಹಳ ಜಾಗರೂಕತೆಯಿಂದ ಆಡಿಟ್‌ಮಾಡಿಸಬೇಕು. ಇಲಾಖೆಯಲ್ಲಿರುವವರೇ ಅಲ್ಲದೆ ಖಾಸಗೀ ಮನುಷ್ಯರೂ ಕೂಡ ಇಲ್ಲಿ ಹಣ ದುರುಪಯೋಗವಾಗುವುದಕ್ಕೆ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಆಡಿಟ್ ಮಾಡಿಸಿ ಫಂಡ್ಸ್ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ಕಂಡು ಬಂದಾಗ ನಿದಾರ್ಕ್ಷಿಣ್ಯವಾಗಿ ಯಾವಪ್ರಭಾವಗಳಿಗೂ ಒಳಗಾಗದೇ ತಪ್ಪಿ ತಸ್ತರನ್ನು ಶಿಕ್ಷೆಗೆ ಒಳಪಡಿಸಬೇಕು. ಈ ಪ್ರಭಾವಗಳಿ ಗೊಳಗಾದರೆ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕೆ ತಕ್ಕ ಗಮನ ಮಾಡುವುದಕ್ಕೆ ಕೊಡಬೇಕೆಂದು ಹೇಳುತ್ತೇನೆ.

ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಮರಿಯಪ್ಪನವರು ಯಾವ ದೃಷ್ಟಿಯಿಂದ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶ ಬಹಳ ಒಳ್ಳೆಯದು. ಅದರಿಂದ ಬೇಕಾದಷ್ಟು ಪ್ರಯೋಜನ ಆಯಿತು. ಅದರೆ ಕೆಲವು ಕಡೆ ಸರಿಯಾಗಿ ನಡೆಯಿತು, ಕೆಲವು ಕಡೆ ಸರಿಯಾಗಿ ನಡೆಯಲಿಲ್ಲ. ಅದು ಆಯಾಯ ಸೊಸೈಟಿಗಳು ಮಾಡತಕ್ಕ ಕೆಲಸದ ಮೇಲೆ ಹೋಗುತ್ತದೆ. ಚೆನ್ನಾಗಿ ಕೆಲಸ ಮಾಡಿದರೆ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವೇ ಇಲ್ಲ. ಅದಕ್ಕೆ ನೂರಾರು ದೃಷ್ಟಾಂತಗಳು ಇವೆ. ಸಹಕಾರ ಸಂಘಗಳಲ್ಲಿ ಹಣ ಪೋಲಾಗದಂತೆ ನೋಡಿಕೊಳ್ಳಬೇಕಾಗಿದ್ದರೆ ತಾಲ್ಲೂಕು ಇನ್‌ಸ್ಪೆಕ್ಟರುಗಳು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು watch dogs ಇದ್ದ ಹಾಗೆ ಇರಬೇಕು. ಹಾಗಿದ್ದರೆ ಮಾತ್ರ ಈ ಕೋ-ಆಪರೇಟಿವ್ ಮೂವ್‌ಮೆಂಟು ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ.

ಈಗ ರೂರಲ್ ಕ್ರೆಡಿಟ್ ಸೊಸೈಟಿಗಳು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳು ಎಂದು ಅನೇಕ ಸೊಸೈಟಿಗಳನ್ನು ಪ್ರಾರಂಭ ಮಾಡಿದ್ದೀರಿ. ಇವು ಒಂದಕ್ಕೊಂದು overlap ಆಗುತ್ತವೆ.

11-30 P.M.

ಈ overlap ಆಗುವುದನ್ನು ತಪ್ಪಿಸಿ ಒಂದು ಇಲಾಖೆಯಲ್ಲಿಯೇ concentrate ಮಾಡಿ ಕೆಲಸ

(ಶ್ರೀ ಕೆ. ವಿ. ಬೈರೇಗೌಡ)

ಮಾಡಿದರೆ ನಿಜವಾಗಿಯೂ ಸಹಕಾರ ತತ್ವಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಮಾನ್ಯ ಮಂತ್ರಿಗಳು ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಸಾಮಾನ್ಯವಾಗಿ ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿಗಳ ಬೀಜದ ಆಲೂಗೆಡ್ಡೆ ಹಾಸನ ಜಿಲ್ಲೆಗೆ ಕೋಲಾರದಿಂದ ಬರುತ್ತಿದೆ. ಕೋ-ಆಪರೇಟಿವ್ ಇಲಾಖೆ ಪ್ರಾರಂಭವಾಗಿ ಇಷ್ಟು ವರ್ಷಗಳಾದರೂ, ಪ್ರೊವಿನ್ಷಿಯಲ್ ಮಾರ್ಕೆಟಿಂಗ್ ಸೊಸೈಟಿಯ ಮುಖಾಂತರವಾಗಲಿ ಅಥವಾ ಬೇರೆ ರೀತಿಯಿಂದಲಾಗಲಿ ತರಿಸಿ ಹಂಚುವ ಏರ್ಪಾಡು ಮಾಡಲಿಲ್ಲ. ಹಾಗೆ ಮಾಡಿದರೆ ರೈತರು ಬಹಳಮಟ್ಟಿಗೆ ಉದ್ಧಾರವಾಗುತ್ತಾರೆ. ನನಗೆ ಗೊತ್ತಿರುವಂತೆ ಆಲೂಗೆಡ್ಡೆ ವರ್ತಕರುಗಳು ಒಂದು ಮೂಟೆಗೆ 20 ರೂಪಾಯಿ 30 ರೂಪಾಯಿ ಲಾಭ ತೆಗೆದುಕೊಂಡು ಮಾರುತ್ತಾರೆ. ಇಷ್ಟು ಲಾಭ ಕೊಟ್ಟು ರೈತನು ಬೀಜ ಕೊಂಡುಹೋಗಿ ಸಂಪಾದಿಸುವುದೇನು? ಇದೊಂದು ಮುಖ್ಯವಿಷಯ. ಆದ್ದರಿಂದ ಕೋ-ಆಪರೇಟಿವ್ ಇಲಾಖೆಯು ಮುಖಾಂತರ ರೈತನಿಗೆ ಹಂಚುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಇಂಥ ಅನುಕೂಲಗಳನ್ನು ಮಾಡಿಕೊಟ್ಟು ಕೋ-ಆಪರೇಟಿವ್ ಇಲಾಖೆಯಿಂದ ರೈತರು ಏನು ಕೆಲಸವಾಗಬೇಕೆಂದು ನಿರೀಕ್ಷಿಸುತ್ತಾರೋ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಮೈಸೂರು ದೇಶದಲ್ಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಯೆಂದು ಹಿಂದೆ ಎಲ್ಲಾ ಕಡೆಯಲ್ಲೂ ಷುರು ಮಾಡಿದರು. ಈಗ ಆ ಸೊಸೈಟಿಗಳ ಗತಿಯೇನಾಗಿದೆ? ಆ ಸೊಸೈಟಿಗಳಿಗೆ ಯಾರ್ಯಾರು ಷೇರುಗಳನ್ನು ತೆಗೆದುಕೊಂಡಿದ್ದಾರೋ ಅವರಿಗೆ ಈಗ ಷೇರು ಹಣವೂ ಕೂಡ ವಾಪಸು ಬಂದಿಲ್ಲ. ಅತ್ತ ಸೊಸೈಟಿಗಳೂ ನಡೆಯುತ್ತಿಲ್ಲ. ಅವುಗಳ ದೆಶೆ ಈ ರೀತಿಯಾಗಿದೆ. ಜನರಲ್ ಬಾಡಿ ಮೀಟಿಂಗ್‌ಗಳೆಂಬುದೇ ಇಲ್ಲ. ಇವುಗಳನ್ನೆಲ್ಲಾ ನೋಡಿ ಜನರಿಗೆ ಸಹಕಾರ ತತ್ವದಲ್ಲಿದ್ದ ನಂಬಿಕೆಯೇ ಸಡಿಲವಾಗುತ್ತಿದೆ. ಆದ್ದರಿಂದ ಮಲ್ಟಿಪರ್ಪಸ್ ಸೊಸೈಟಿಗಳು ಎಲ್ಲೆಲ್ಲಿ ಸ್ಥಾಪಿತವಾಗಿವೆಯೋ ಅಲ್ಲಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸುವುದಲ್ಲದೆ ಜನರಲ್ ಬಾಡಿ ಮೀಟಿಂಗ್‌ಗಳು ನಡೆಯುವುದಕ್ಕೆ ಅವಕಾಶವಿದ್ದರೆ ನಡೆಯಿಸಿ, ಇಲ್ಲದಿದ್ದರೆ ಷೇರು ಹಣವನ್ನಾದರೂ ವಾಪಸು ಕೊಡಲು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಮಲ್ಟಿಪರ್ಪಸ್ ಸೊಸೈಟಿಗಳಿಗೆ ರೇಷನ್ ಕಾಲದಲ್ಲಿ ಗಾಡಿ ಬಾಡಿಗೆ ಕೊಡಬೇಕೆಂದಿತ್ತು. ರೇಷನ್ ಕೊಡುವುದು ನಿಲ್ಲಿಸಿ ನಾಲ್ಕೈದು ವರ್ಷಗಳಾದರೂ ಇನ್ನೂ ಆ ಗಾಡಿ ಬಾಡಿಗೆ ಬಾಕಿಯನ್ನು ಫೈಸಲು ಮಾಡಿಲ್ಲ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಆದಷ್ಟು ಜಾಗ್ರತೆ ಈ ಹಣವನ್ನು ಪಾವತಿ ಮಾಡುವ ಏರ್ಪಾಡು ಮಾಡಬೇಕು. ಹಿಂದಿನ ವರ್ಷವೂ ಕೂಡ ಇದನ್ನು ಹೇಳಿದ್ದೆವು. ಆದರೂ ಕೂಡ ಇದರ ಬಗ್ಗೆ ಇನ್ನೂ ಏನೂ ಮಾಡಿಲ್ಲ.

ರೈತರಿಗೆ ಸುಲಭವಾಗಿ ಸಾಲ ದೊರಕಿಸಿ ಕೊಡುವುದಕ್ಕಾಗಿ Land Mortgage Bank ಗಳನ್ನು ಏರ್ಪಡಿಸಿದ್ದೀರಿ. ಆದರೆ, ಈ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದು ಅರ್ಜಿ ಹಾಕಿದರೆ ಮೂರು ವರ್ಷದ ಹೊತ್ತಿಗೆ ಇಲ್ಲ, ಉಂಟು, ಎಂದು ಉತ್ತರ ಬರುತ್ತದೆ. ಹೀಗೆ ನಿಧಾನವಾದರೆ ಸಹಕಾರ ತತ್ವದಲ್ಲಿ ರೈತರಿಗೆ ನಂಬಿಕೆ ಇದ್ದೀತೇ? ಸಾಲಕ್ಕೆ ಒಂದು ಅರ್ಜಿ ಕೊಟ್ಟರೆ 2-3 ತಿಂಗಳಲ್ಲಿಯಾದರೂ ಸಾಲ ಸಿಕ್ಕುತ್ತದೆ ಅಥವಾ ಇಲ್ಲ ಎಂಬ ಭರವಸೆ ಸಿಕ್ಕದೆ ಹೋದರೆ, ವರ್ಷವೆಲ್ಲಾ ಅವನು ತಿರಗಿ 500 ರೂಪಾಯಿ ಸಾಲಕ್ಕೆ ನೂರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಸೆಂಬ್ಲಿಯಲ್ಲಿ ಈ ಪ್ರಶ್ನೆಗಳನ್ನೆತ್ತಿದ್ದರೆ ಸರ್ಕಾರದವರೇನಾದರೂ ಸರಿಪಡಿಸುತ್ತಾರೆಂದು ತಿಳಿದಿದ್ದೆವು. ಆದರೆ ಈಗ ನೋಡಿದರೆ ಮೊದಲು ಹೇಗಿತ್ತೋ ಈಗಲೂ ಹಾಗೆಯೇ ಇದೆ. ಅರ್ಜಿಗಳಲ್ಲಿ ಏನು ನ್ಯೂನತೆಯಿವೆಯೋ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಕಳುಹಿಸುವಂತೆ ಏರ್ಪಾಡುಮಾಡಿ ಕಾಗದಗಳು ವ್ಯಥಾ ಓಡಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಸಹಕಾರ ಸಂಘಗಳು ನಮ್ಮ ಮೈಸೂರು ದೇಶದಲ್ಲಿ ವಿಶೇಷವಾಗಿವೆ. ಆದರೆ ಈ ಸೊಸೈಟಿಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅವು ಕೆಲಸ ಮಾಡುತ್ತಿವೆಯೇ ಇಲ್ಲವೇ ಎಂದು ಯಾರೂ check ಮಾಡುತ್ತಿಲ್ಲ. ಎಷ್ಟೋ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ. ಹೀಗೆ ಕೆಲಸ ಮಾಡದಿರುವ ನೂರಾರು ಸೊಸೈಟಿಗಳಿರುವ ಬದಲು ಸರಿಯಾಗಿ ಕೆಲಸ ಮಾಡುವ ನಾಲ್ಕಾರು ಸೊಸೈಟಿಗಳಿದ್ದರೆ ಮೇಲು. ಅಂಥವುಗಳಿಂದ ಮಾತ್ರ ರೈತರಿಗೆ ಸೊಸೈಟಿಗಳಲ್ಲಿ ನಂಬಿಕೆ ಈಗ ಬರುತ್ತವೆ. N.E.S. ಬ್ಲಾಕ್‌ಗಳಲ್ಲಿ ಸಹಕಾರ ಪದ್ಧತಿಯನ್ನು ರೂಢಿಗೆ ತಂದು ಅಲ್ಪಾವಧಿಯ ಸಾಲ, ದೀರ್ಘಾವಧಿಯ ಸಾಲ ಮುಂತಾದುವುಗಳನ್ನೆಲ್ಲಾ ಕೊಡುತ್ತಾರೆ. N.E.S. ರೆವಿನ್ಯೂ ಇನ್ಸ್ಪೆಕ್ಟರು N.E.S. ಬ್ಲಾಕ್ ಆಫೀಸರೂ ಇಬ್ಬರೂ ಸೇರಿ ಜಮೀನನ್ನು inspect ಮಾಡಿ, ರಿಕಾರ್ಡ್‌ನ್ನು build up ಮಾಡಬೇಕೆಂದಿದೆ. ಆದರೆ ಅವರಿಬ್ಬರೂ ಸೇರುವುದೇ ಕಷ್ಟ. ಹೀಗಾಗಿ ರಿಕಾರ್ಡ್‌ಗಳು ಯಾವುದೂ ಮೇಲಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಸಾಲದ ಅರ್ಜಿಗಳ ಜಾಗ್ರತೆ ಫೈಸಲಾತಿಯ ದೃಷ್ಟಿಯಿಂದ ಯಾರಾದರೂ ಒಬ್ಬರು ರಿಕಾರ್ಡ್‌ಗಳನ್ನು ಮಾಡುವಂತೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಹೇಗಿದ್ದರೂ village workers ಗಳಿಗೆ training ಆಗಿರುತ್ತದೆ. ಅವರಿಗೆ ರಿಕಾರ್ಡುಗಳನ್ನು ತಯಾರಿಸುವುದಕ್ಕೆ ಶಕ್ತಿಯಿರುತ್ತದೆ. ಆದ್ದರಿಂದ ಜಾಗ್ರತೆ ರಿಕಾರ್ಡ್ ನಡೆಸಿ ಬೇಗ ಸಾಲ ದೊರೆಯುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಕಡೆಯದಾಗಿ ಮಲ್ಟಿಪರ್ಪಸ್ ಸೊಸೈಟಿಗಳ ವಿಚಾರದಲ್ಲಿ ನಾನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇನೆ. ಅನೇಕ ಷೇರುದಾರರು ಈ ಸೊಸೈಟಿಗಳಿಗೆ ಷೇರು ಕೊಟ್ಟಿದ್ದಾರೆ. ಸೊಸೈಟಿಗಳು ಪ್ರಾರಂಭವಾಗಿ ಎಷ್ಟು ದಿವಸವಾದರೂ ಅವರಿಗೆ ಒಂದು ಕಾಸು ಡಿವಿಡೆಂಡೂ ಬಂದಿಲ್ಲ. ಇತ್ತ ಸೊಸೈಟಿಗಳೂ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಯಾವ್ಯಾವ ಸೊಸೈಟಿಗಳು ಕೆಲಸ ಮಾಡುತ್ತಿಲ್ಲವೋ ಅವುಗಳ ಸಂಬಂಧದಲ್ಲಿ ಷೇರು ಮೊಬಲಗುಗಳನ್ನಾದರೂ ವಾಪಸು ಮಾಡುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

[SRI G. DUGGAPPA in the Chair].

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಕೋ-ಆಪರೇಟಿವ್ ಇಲಾಖೆಗೆ ಸಂಬಂಧಪಟ್ಟ ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಎರಡು ವಿಷಯಗಳನ್ನು ಮಾತ್ರ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಪ್ರಥಮತಃ ಕೋ-ಅಪರೇಟಿವ್ ತತ್ವದ ವಿಷಯವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ, ಇಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆಯೆಂಬುದನ್ನು ಯೋಚನೆ ಮಾಡುವುದಾದರೆ, ನಮ್ಮ ದೇಶದವರು ಸಹಕಾರ ತತ್ವದ ಅರಿವನ್ನೇ ಇನ್ನೂ ಹೊಂದಿಲ್ಲವೆನ್ನಬೇಕು. ಹಾಲೆಂಡ್, ಸ್ವಿಟ್ಸರ್‌ಲ್ಯಾಂಡ್ ಮುಂತಾದ ದೇಶಗಳಲ್ಲಿ ನಿಜವಾಗಿ ಸಹಕಾರ ಪದ್ಧತಿ ರೂಢಿಯಲ್ಲಿವೆಯೆನ್ನಬೇಕು. ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾದರೆ ಸಹಕಾರ ತತ್ವದ ಅರ್ಥದ ಅರಿವನ್ನು ಉಂಟುಮಾಡಿಕೊಳ್ಳುವುದು ಬಹಳ ಮುಖ್ಯ. ನಮ್ಮ ಜನರಿಗೆ ಇದರ ಅರಿವನ್ನು ಮೊದಲು ಉಂಟು ಮಾಡಿಕೊಟ್ಟರೆ, ಈ ಇಲಾಖೆಯಲ್ಲಿ ಕಂಡುಬರುವ ಅನೇಕ ಲೋಪದೋಷಗಳು ಸರಿಹೋಗುತ್ತವೆಂದು ನಾನು ತಿಳಿದಿದ್ದೇನೆ. ಒಂದು ವಿಚಾರವನ್ನು ಹೇಳುವುದಾದರೆ, ಆಯಾ ಪ್ರದೇಶಗಳಲ್ಲಿರುವ ಸಹಕಾರ ಸಂಘಗಳು ಆಯಾ ಪ್ರದೇಶದಲ್ಲಿ ಶ್ರಮಪಟ್ಟು ಬಹು ಮುಖ್ಯವಾಗಿ Debt Survey ಮಾಡಬೇಕು. ಸಾಲ ಎಷ್ಟೆಷ್ಟಿದೆ, ಸಾಲದ ಸ್ವಭಾವವೇನು, short-term loans ಮೂಲಕ ತೀರಿಸಬಹುದೇ, immoveable property ಸಾಲವನ್ನು ಕೊಡಬಹುದೆ ಎಂಬುದನ್ನು ಅವರು ಸುಲಭವಾಗಿ ಕಂಡು ಹಿಡಿಯಬಹುದು. ಆದುದರಿಂದ ಕೂಡಲೇ debt survey ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ, ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳ ವಿಷಯದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ; ಅದಕ್ಕೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅಲ್ಲಿ ರಿಕಾರ್ಡುಗಳು ಬಹಳ ತಡವಾಗುತ್ತಿವೆ, procedure ಬದಲಾಯಿಸಿ ಜಾಗ್ರತೆವಿಲೇ ಆಗುವಂತೆ ಮಾಡಬೇಕೆಂದು ಸೂಚಿಸಿದ್ದೆ. ಅದನ್ನು ಪರಿಶೀಲಿಸಲು ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಇದರ ಫಲವಾಗಿ ಸಾಲದ ಹೊರೆ ಇರುವ ರೈತರಿಗೆ ಆದಷ್ಟು ಬೇಗ ಪರಿಹಾರ ದೊರೆಯುತ್ತದೆಂದು ನಂಬಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳನ್ನು ಏರ್ಪಾಡು ಮಾಡಬೇಕು; ಗ್ರಾಮಾಂತರದ ಜನರಿಗೆ ಇದರಿಂದ ಮನೆಗಳನ್ನು ಕಟ್ಟಿಸಿಕೊಳ್ಳಲು ಅನುಕೂಲವಾಗುತ್ತದೆಂದು ಪದೇಪದೇ ಹೇಳುತ್ತಿದ್ದೇನೆ. ಇಂಡಿಯಾ ಸರ್ಕಾರದವರು ಕೋಟ್ಯಾಂತರ ರೂಪಾಯಿ ಇದಕ್ಕಾಗಿ ಕೊಡುತ್ತಿದ್ದಾರೆ. ಕಡಮೆ ಸಂಬಳ ಪಡೆಯುವ ನೌಕರರಿಗೂ ಅಲ್ಪ ವರಮಾನದವರಿಗೂ ಗೃಹ ನಿರ್ಮಾಣ ಮಾಡಿ ಕೊಟ್ಟು ಸಹಾಯ ಮಾಡುವುದಕ್ಕಾಗಿ ಇಂಡಿಯಾ ಸರ್ಕಾರದವರು ಕೊಡುತ್ತಿರುವ ಹಣವನ್ನು ಹೋಬಳಿ ಹೆಡ್ ಕ್ವಾರ್ಟರುಗಳಿಗೂ ಗ್ರಾಮಾಂತರಗಳಿಗೂ ಕೊಟ್ಟರೆ ಗುಡಿಸಲುಗಳಲ್ಲಿ ವಾಸಮಾಡುತ್ತಿರುವ ಬಡ ಜನರಿಗೆ ಮನೆ ಕಟ್ಟಿ ಕೊಳ್ಳಲು ಸಹಾಯವಾಗುತ್ತದೆ. ಇದನ್ನು ಶೀಘ್ರವಾಗಿ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ. ರಾಷ್ಟ್ರೀಯ ವಿಸ್ತರಣಾ ಯೋಜನೆಯಿರುವ ಸ್ಥಳಗಳಲ್ಲಿ ರಿಕಾರ್ಡುಗಳನ್ನು build up ಮಾಡುವುದರಲ್ಲಿ ತೊಂದರೆಯಿದೆ. ರೆವಿನ್ಯೂ ಇನ್‌ಸ್ಪೆಕ್ಟರಿಗೂ ಜನರಿಗೂ ಜಿಜ್ಞಾಸೆ ಬಂದು ಜಾಗ್ರತೆ ಮಾಡುವುದಕ್ಕೆ ಕೆಲವು ತೊಂದರೆಗಳು ಬಂದಿವೆ. ರೆವಿನ್ಯೂ ಇನ್‌ಸ್ಪೆಕ್ಟರು ಶಾನುಭೋಗರು ಪಟೇಲರನ್ನು ಆಶ್ರಯಿಸಬೇಕು, ಇಲ್ಲದಿದ್ದರೆ ಸರ್ವೆ ನಂಬರುಗಳೇ ಸಿಕ್ಕುವುದಿಲ್ಲ. ಅಮಲ್ದಾರರು ಇದನ್ನು ಮಾಡಬೇಕೆಂದಿದೆ. ಎರಡನೆಯದಾಗಿ village workers ಮಾಡಬೇಕೆಂದಿದೆ. ಇದರಲ್ಲಿ ಕೆಲವು ಕಷ್ಟಗಳಿವೆ. Village Workers ರೆವಿನ್ಯೂ ಇನ್‌ಸ್ಪೆಕ್ಟರುಗಳ ಜೊತೆಗೆ ಹೋಗಿ, ಆದಷ್ಟು ಬೇಗ ಅಮಲ್ದಾರರು ಜಾಗ್ರತೆ ವಿಲೇ ಮಾಡಲು ಅವಕಾಶ ಮಾಡಬೇಕು. Short loan ಬೇಗ ವಿಲೇ ಮಾಡಬೇಕು. ನಾಲ್ಕೈದು ತಿಂಗಳಲ್ಲಿ ಸಾಲವನ್ನು ವಾಪಸು ಕೊಡಬೇಕಾಗಿರುವುದರಿಂದ ಇದನ್ನು ಪರಿಶೀಲನೆ ಮಾಡಬೇಕು. ಮಧ್ಯವರ್ತಿಗಳಿಂದಾಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡಬೇಕು.

ಮಲ್ಟಿ ಪರ್ಪಸ್ ಸೊಸೈಟಿಗಳು ಯಾವ ಉದ್ದೇಶದಿಂದ ಸ್ಥಾಪನೆಯಾದುವೋ ಅದು ಸಾರ್ಥಕವಾಗುತ್ತಿಲ್ಲ. ಸಹಕಾರ ತತ್ವವನ್ನೇ ಅರ್ಥ ಮಾಡಿಕೊಳ್ಳದಿರುವವರಿಂದ ಆ ಇಲಾಖೆಗೆ ಕೆಟ್ಟ ಹೆಸರು ಬಂದಿದೆ. ಈ ಸಂಘಗಳಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ಪರಿಶೀಲಿಸಲು ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಒಂದು ಸಮಿತಿ ಮಾಡಬೇಕು. ಯಾವಯಾವ ಸಂಘದಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ಈ ಸಮಿತಿಯ ಪರಿಶೀಲನೆಗೆ ಬಿಟ್ಟು, ಆ ಸಮಿತಿ ಕೂಲಂಕಷವಾಗಿ ಪರಿಶೀಲನೆ ನಡೆಸಿದ ಮೇಲೆ, ಸರ್ಕಾರದವರು ಈ ಸಭೆಯಲ್ಲಿ ಒಂದು ಹೇಳಿಕೆ ಕೊಟ್ಟರೆ, ಈ ಸಂಘಗಳ ವಿಷಯದಲ್ಲಿ ಜನರಿಗಿರುವ ಸಂದೇಹ ನಿವಾರಣೆಯಾಗುತ್ತದೆಯಲ್ಲದೆ ದುರುಪಯೋಗವಾಗಿರುವ ಹಣದ ವಿಚಾರವೂ ಇತ್ಯರ್ಥವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಮೊದಲು ಸರ್ಕಾರದಿಂದ ಒಂದು ಭರವಸೆ ಬೇಕಾಗಿದೆ. ಒಂದು ಅನುಮಾನವಿರುವುದರಿಂದ ಹೀಗೆ ಕೇಳುತ್ತಿದ್ದೇನೆ. ನಾವು ಏನಾದರೂ ಹೇಳಿದರೆ ಅದನ್ನು ಸ್ವಲ್ಪ serious ಆಗಿ ತೆಗೆದುಕೊಂಡು ಪರಿಶೀಲನೆ ಮಾಡಿ ಜವಾಬು ಹೇಳುತ್ತೀರಾ, ನಾವು ಹೇಳುವುದರಲ್ಲಿ ಏನಾದರೂ ಸತ್ಯಾಂಶವಿದ್ದರೆ ಅದನ್ನು ಗಮನಿಸಿ ಲೋಪದೋಷಗಳನ್ನು ಸರಿಪಡಿಸುತ್ತೀರಾ, ಹೀಗೆ ಪ್ರಯತ್ನಪಡುವುದಕ್ಕೆ ನಿಮಗೆ ಶಕ್ತಿ ಇದೆಯೋ ಎಂದು ಸರ್ಕಾರದವರನ್ನು ಮೊದಲು ಕೇಳುತ್ತೇನೆ.

ಸಭಾಪತಿಯವರು (ಶ್ರೀ ಜಿ. ದುಗ್ಗಪ್ಪನವರು).—ಪ್ರಯತ್ನ ಮಾಡುವುದಕ್ಕೆ ಶಕ್ತಿ ಇದೆ; ತಾವು ಹೇಳುವುದನ್ನು ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ಶಕ್ತಿ ಇದ್ದಿದ್ದರೆ ನಾನು ಈ ಉಪೋದ್ಘಾತವನ್ನು ಹೇಳುವ ಆವಶ್ಯಕತೆಯಿರಲಿಲ್ಲ.

ಸಹಕಾರ ಸಂಘಗಳು ಕೆಲಸ ಮಾಡುತ್ತಿರುವುದು ಹೇಗಿದೆಯೆಂದರೆ, ಎಲ್ಲಿ ಅಸಹಕಾರವಿದೆ ಎಂಬುದನ್ನು ಹುಡುಕಬೇಕಾದರೆ, ಇಲ್ಲೇ ಇರುವುದು, ಇನ್ನೆಲ್ಲಿಯೂ ಇಲ್ಲ. ಅದರಲ್ಲಿಯೂ ದೊಡ್ಡ ಪಟ್ಟಣಗಳಲ್ಲಿ, ಮೈಸೂರು ಬೆಂಗಳೂರಿನಲ್ಲಿರುವ ಸಹಕಾರ ಸಂಘಗಳು cliques ಆಗಿವೆ. ಇಲ್ಲಿರತಕ್ಕ ಹೊಲಸು ವ್ಯವಹಾರ ಇನ್ನೆಲ್ಲಿಯೂ ಇಲ್ಲ. ಇದಕ್ಕೆ ಇವುಗಳ ಸದಸ್ಯರಷ್ಟೇ ಜವಾಬ್ದಾರರಲ್ಲ, ಸರ್ಕಾರೀ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಉದಾಹರಣೆಗೆ ಮೈಸೂರು ನಗರದಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ಪ್ರತಿ ವರ್ಷವೂ ಚುನಾವಣೆ ನಡೆಯಬೇಕೆಂದಿದೆ. 1955 ನೆಯ ಸಾಲಿನಲ್ಲಿ ಯಾವುದಾದರೂ ಸಂಘದಲ್ಲಿ ಡೈರೆಕ್ಟರ ಚುನಾವಣೆ ನಡೆದಿದೆಯೋ ಎಂಬುದನ್ನು ಸರ್ಕಾರದವರು ಹೇಳಲಿ. ಒಂದು ವರ್ಷವಾದರೂ ಚುನಾವಣೆ ಸರಿಯಾಗಿ, ಕಾನೂನು ಪ್ರಕಾರ ನಡೆದಿಲ್ಲ. ಒಂದು ವೇಳೆ

(ಶ್ರೀ ಕೆ. ಪುಟ್ಟಸ್ವಾಮಿ).

ಚುನಾವಣೆಯಾದರೆ, ಅದರಲ್ಲಿ ಲೋಪವಿದೆಯೆಂಬ ಭಾವನೆಯಿಂದ ಯಾರಾದರೂ ಒಂದು ಅರ್ಜಿ ಹಾಕಿದರೆ, ಅದಕ್ಕೆ stay order ಕೊಡುವುದು; ಅದನ್ನು ಎಷ್ಟು ವರ್ಷವಾದರೂ ತೀರ್ಮಾನ ಮಾಡುವುದಿಲ್ಲ. 1953ನೆಯ ಇಸವಿಯಲ್ಲಿ ಚುನಾಯಿತರಾದ ಡೈರೆಕ್ಟರುಗಳೇ ಈ ಹೊತ್ತಿನವರೆಗೂ ರಾಜ್ಯಭಾರ ನಡೆಸುತ್ತಿದ್ದಾರೆ. ಅದಕ್ಕೆ ಹೊಸ ಚುನಾವಣೆಗೆ ಅರ್ಜಿ ಮಾಡುವುದಿಲ್ಲ. ಒಂದು ಅರ್ಜಿಯ ಮೇಲೆ stay order ಮಾಡುತ್ತಾರೆ, ಇನ್ನೊಂದು ಪಾರ್ಟಿಯವರು ಬಂದರೆ ಅವರ ಅರ್ಜಿಯ ಮೇಲೂ stay order ಮಾಡುತ್ತಾರೆ. ಎಕ್ಸೈಕ್ವರಿಗೆ ದಿನವನ್ನು ಗೊತ್ತು ಮಾಡಿದರೂ ಆ ದಿನ ಎಕ್ಸೈಕ್ವರಿ ಮಾಡುವುದಿಲ್ಲ. ವಿರೋಧ ಬರುತ್ತದೆಂದು ಮಾಡುವುದಿಲ್ಲ. ಇದಾದರೂ ಹೋಗಲಿ, ಮಾಡದಿದ್ದರೂ ಚಿಂತೆಯಿಲ್ಲ. ಕೊನೆಗೆ ಆ ಸಾಲು ಕಳೆದ ಮೇಲೂ ಎರಡನೆಯ ಸಾಲಿಗೂ ಇನ್ನೊಂದು ಚುನಾವಣೆ ಆಗುವವರೆಗೆ ಅಧಿಕಾರದಲ್ಲಿ ಅವರೇ ಇರಬಹುದೆಂದು ಹೇಳಿದರೂ ಹೇಳಬಹುದು. 1954ನೆಯ ಇಸವಿಯಲ್ಲಿ ಆಗದೆ 1955ರಲ್ಲೂ ಚುನಾವಣೆ ನಡೆಸದೇಯಿರುವುದಕ್ಕೆ ಇವರಿಗೆ ಅಧಿಕಾರವಿದೆಯೇ? ಎಷ್ಟು ಸಾರಿ ಅಧಿಕಾರಿಗಳಲ್ಲಿ ಹೋದರೂ ಇದಕ್ಕೆ ಪರಿಹಾರ ದೊರೆಯುತ್ತಿಲ್ಲ. ಒಂದು ವೇಳೆ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರು ಏನಾದರೂ ಒಂದು ಆರ್ಡರ್ ಮಾಡಿದರೆ, ಸರ್ಕಾರ ಇನ್ನೊಂದು ಆರ್ಡರ್ ಕೊಡುತ್ತಾರೆ. ಹೀಗಾಗಿ ಸಾರ್ವಜನಿಕರ ಹಣ ಯಾರು ಗುಂಪನ್ನು ಕಟ್ಟಿಕೊಂಡು ಯಾವುದಾದರೂ ರೀತಿಯಿಂದ ಚುನಾಯಿತರಾಗಿ ಬಂದು ಅಧಿಕಾರಕ್ಕೆ ಬರುತ್ತಾರೋ ಅವರ ಕೈಯ್ಯಲ್ಲೇ ಇರುವ ಹಾಗಾಗಿದೆ, ಅವರೇ ಭದ್ರವಾಗಿ ಕುಳಿತು ಕೊಳ್ಳುತ್ತಾರೆ. ಮೈಸೂರಿನಲ್ಲಿರುವ ದೊಡ್ಡ ಸಂಘಗಳಲ್ಲಿಯೂ ಇದೇ ಹಣೆ ಬರಹ. 1954ರಲ್ಲಿ ಚುನಾಯಿತರಾಗಿರುವವರು 1955 ರಲ್ಲೂ ಇದ್ದಾರೆ, ಏನು ಕಾರಣವೆಂದರೆ, ಡೈಮಂಡ್ ಜ್ಯೂಬಿಲಿ ಆಗಬೇಕಾಗಿದೆ, ಆದುದರಿಂದ ಅದನ್ನು ನಡೆಸಲು ನಾವೇ ಇರಬೇಕೆಂದು ಹೇಳುತ್ತಾರೆ. ಬೇರೆಯವರು ಮಾಡುವುದಕ್ಕಾಗುವುದಿಲ್ಲವೇ? ಏಕೆ ಈ ರೀತಿ ವ್ಯವಹಾರ ನಡೆಸುತ್ತಿದ್ದಾರೋ ಗೊತ್ತಾಗುವುದಿಲ್ಲ. ಇದಲ್ಲದೆ, ಸಾಲಕೊಡುವ ಸಂಸ್ಥೆಗಳಲ್ಲಿ ಒಂದು ಸಹಕಾರ ಸಂಘಕ್ಕೆ ಸದಸ್ಯರಾಗಿರುವವರು ಬೇರೆ ಕಡೆ ಸದಸ್ಯರಾಗಿರಬಾರದೆಂಬ ನಿಯಮವಿದೆ. ಆದರೆ ಬೇರೆ ಸಂಘಗಳಿಗೂ ಸದಸ್ಯರಾಗಬೇಕೆಂದು ಕೇಳಿ ಕೊಂಡ ಪ್ರತಿಯೊಬ್ಬರಿಗೂ ಅನುಮತಿ ಕೊಡುತ್ತಾರೆ. ಒಂದು ಗುಂಪಿನವರು ಸಹಕಾರ ಕ್ಷೇತ್ರದಲ್ಲಿ 10 ಸಂಘಗಳಿದ್ದರೆ, ಎಲ್ಲ ಕಡೆಯೂ ಹಂಚಿಕೊಳ್ಳುತ್ತಾರೆ. ಒಂದು ಸಂಘದಲ್ಲಿ ಪ್ರೆಸಿಡೆಂಟ್ ಆಗಿರುವವರು ಇನ್ನೊಂದರಲ್ಲಿ ಸೆಕ್ರೆಟರಿ, ಇನ್ನೊಂದರಲ್ಲಿ ವೈಸ್ ಪ್ರೆಸಿಡೆಂಟ್ ಹೀಗೆ ವ್ಯವಹಾರ ನಡೆಸುತ್ತಿದ್ದಾರೆ.

ಪ್ರತಿವರ್ಷ ಚುನಾವಣೆಗಳನ್ನು ನಡೆಸುವುದಕ್ಕೆ ಏನು ಅಡ್ಡಿ ಇದೆ, ಯಾತಕ್ಕೆ ಈ ರೀತಿ ಉಪೇಕ್ಷೆ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಆದರಲ್ಲಿಯೂ ನಾನು ಹೇಳುವುದು ಮೈಸೂರು ನಗರದಲ್ಲಿರತಕ್ಕ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಯಾರಾದರೂ ಡೈರೆಕ್ಟರ್ ಆದರು ಎಂದರೆ ಅವರು ಯಾತಕ್ಕೂ ಪ್ರಯೋಜನವಿಲ್ಲವೆಂಡ ಹಾಗಾಗಿದೆ ಅದಕ್ಕಿಂತ ಕೆಟ್ಟದ್ದು ಬೇರೆ ಇಲ್ಲ. ಕೋ ಆಪರೇಟಿವ್ ಸೊಸೈಟಿಗಳ ಡೈರೆಕ್ಟರಾದರೆ ಸಾಕು ? ಅದಕ್ಕಿಂತ ಹೆಚ್ಚಿಗೆ ಪ್ರಯತ್ನಪಟ್ಟು ಕೆಟ್ಟ ಹೆಸರು ತೆಗೆದುಕೊಳ್ಳಬೇಕಾಗಿಲ್ಲ. ಇಂಥ ದುಸ್ಥಿತಿ ಇದೆ. ಸಮಾಧಾನವಾಗಿ, ಸಾವಧಾನವಾಗಿ ಕೇಳುತ್ತೇನೆ, ಇದಕ್ಕೆ ಯಾವ ಪರಿಹಾರವನ್ನು ಮಾಡಿದ್ದೀರಿ? ಇದಕ್ಕೆ ನಾನು ಹೇಳುವುದೇನೆಂದರೆ ಸರ್ಕಾರದ ಗಮನಕ್ಕೆ ಇಂಥ ವಿಷಯಗಳು ಬಂದಾಗ ಅವುಗಳನ್ನು ಪರಿಹಾರ ಮಾಡಬೇಕು ಎಂಬ ಮನಸ್ಸಿದ್ದರೆ ದಯವಿಟ್ಟು ಯಾವಯಾವ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಚುನಾವಣೆ ನಡೆದಿಲ್ಲವೋ ಅಲ್ಲೆಲ್ಲ ತಕ್ಷಣವೇ ಚುನಾವಣೆಗಳು ನಡೆಯಬೇಕು ಎಂದು ಆಜ್ಞೆಮಾಡಿ, ಚುನಾವಣೆಗಳನ್ನು ನಡೆಸಿ. ಅಲ್ಲಿಯವರೆಗೂ ಆ ಸೊಸೈಟಿಗಳ ಆಡಳಿತವನ್ನೆಲ್ಲ ಎಲ್ಲ ಕಡೆಗಳಲ್ಲಿ Official Secretary ನೇಮಕ ಮಾಡಬೇಕೆಂದಿರುವುದರಿಂದ, ಹಾಗೆಮಾಡಿ ಅವರಿಗೆ ವಹಿಸಿಬಿಡಿ.

ಸರ್ಕಾರದವರು Official Secretary ಗಳನ್ನು ನೇಮಕ ಮಾಡದಹಾಗೆ ಅನೇಕ ಸೊಸೈಟಿಗಳವರು ದಬಾವಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಪ್ರತಿಯೊಂದಕ್ಕೂ ಒಂದು ರೆಸಲ್ಯೂಷನ್‌ಮಾಡಿ Official Secretary ನೇಮಕವಾಡಲು 6 ತಿಂಗಳ ಅವಕಾಶ ಕೊಡಿ ಎಂದು ಅಷ್ಟು ಅವಧಿ ಪಡೆಯುತ್ತಾರೆ. ನಂತರ ಒಂದುವರ್ಷ ಪಡೆಯುತ್ತಾರೆ. ನಂತರ ಒಂದೂವರೆ ವರ್ಷ ಹೀಗಾಗಿದೆ. ಸಾಮಾನ್ಯವಾಗಿ ಒಂದುಸಲ 6 ತಿಂಗಳ ಅವಕಾಶಕೊಟ್ಟರೆ ಪುನಃ ಒಂದು ತಿಂಗಳೋ ಅಥವ ಎರಡು ತಿಂಗಳೋ ಕೊಡುವುದು ಸ್ವಾಭಾವಿಕ. ಅದು ಬಿಟ್ಟು ಮೊದಲು 6 ತಿಂಗಳು, ನಂತರ ಒಂದು ವರ್ಷ ಹೀಗೆ ಹೆಚ್ಚಿಸಿಕೊಂಡು ಹೋಗುವುದು ಸರಿಯಾದ ಮಾರ್ಗವಲ್ಲ. ಆದುದರಿಂದ ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದನ್ನು ಜಾರಿಗೆ ಕೊಡಬೇಕು. ಈ ರೀತಿ ಮಾಡಬೇಕೆಂಬ ಮನಸ್ಸಿಲ್ಲದೆ ಹೋದರೆ ಏನು ತಾನೇ ಮಾಡುವುದಕ್ಕಾಗುತ್ತದೆ. ಈ ವಿಚಾರದಲ್ಲಿ ಮನಸ್ಸಿಲ್ಲದೆ ಕೆಲಸ ಮಾಡುತ್ತಿದ್ದೀರಿ. ಬಾಯಲ್ಲಿ ಹೇಳುವುದೊಂದು, ಕಾರ್ಯದಲ್ಲಿ ಮಾಡುವುದೊಂದು ಆಗಿದೆ. ಒಂದು ಸೊಸೈಟಿಯಲ್ಲಿ ಎರಡು ಗುಂಪುಗಳಿದ್ದರೆ—ಸಾಧಾರಣವಾಗಿ ಇದ್ದೇ ಇರುತ್ತದೆ—ಆ ಎರಡು ಗುಂಪುಗಳಿಗೂ ಸಮಾಧಾನ ಪಡಿಸಿಕೊಂಡು ಹೋಗಬೇಕೆಂದು ಸರ್ಕಾರ ಪ್ರಯತ್ನಪಟ್ಟರೆ ಅದು ಸಾಧ್ಯವಾಗುತ್ತದೆಯೇ! ಸರ್ಕಾರದವರು ತಾವು ಮಾಡಬೇಕಾದ ಕಾರ್ಯವನ್ನು ಸರಿಯಾಗಿ ಮಾಡದೆ ಉದಾಸೀನದಿಂದ ಇರುವುದರಿಂದಲೇ ಸೊಸೈಟಿಗಳು ಹಾಳಾಗುತ್ತಿವೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಸಹಕಾರ ಸಂಸ್ಥೆಗಳ ವಿಚಾರವಾಗಿ ಈಗಾಗಲೇ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ಸಹ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು Multi-purpose Co-operative Societies ಎಂದು ಪ್ರಾರಂಭವಾಯಿತು. ಅದರ ಜೊತೆಗೆ Rural Industrial Co-operative Societies ಎಂದು ಮತ್ತೊಂದು ಸೇರಿತು. ಮೊದಲಿನಿಂದಲೂ Apex Bank ಮತ್ತು Land Mortgage Bank ಇದ್ದೇ ಇವೆ. ಒಟ್ಟು ನಾಲ್ಕು ಆಯಿತು. ಇದರ ಜೊತೆಗೆ ಈಗೀಗ ಅನೇಕ ಸೊಸೈಟಿಗಳು ಪ್ರಾರಂಭವಾಗುತ್ತಿವೆ. ಅಂದರೆ ಕೋ-ಆಪರೇಟಿವ್ ಸೊಸೈಟಿಗಳು ಹೆಚ್ಚಾಗುತ್ತಿವೆ. ಆದರೆ ಎಲ್ಲದರಲ್ಲಿಯೂ ನಡೆಯತಕ್ಕ ಕಾರ್ಯಗಳು ಒಂದೇ ಬಗೆಯವು. ಆದುದರಿಂದ ಎಲ್ಲ ಸಹಕಾರ ಸಂಸ್ಥೆಗಳ ಕಾರ್ಯದ ಪರಿಮಿತಿ ಏನಿದೆ ಅದನ್ನು ಒಂದು ಯೋಜನೆಯ ಪ್ರಕಾರವಾಗಿ ನಡೆಸುವುದು ಅತ್ಯಾವಶ್ಯಕ. ಈಗ ಒಂದು ಉದಾಹರಣೆ ಕೊಡಬೇಕಾದರೆ, Land Mortgage Bank ಇದೆ, Multi-purpose Co-operative Society

ಇದೆ, Rural Industrial Co-operative Society ಇದೆ. ಇವು ಮೂರು ಸಂಸ್ಥೆಗಳೂ ಮಾಡತಕ್ಕ ಕೆಲಸ ಒಂದಲ್ಲ ಒಂದು ವಿಧದಲ್ಲಿ ಒಂದೇ ಆಗಿದೆ. ಆದರೆ ಇವು ಮೂರು ಸಂಸ್ಥೆಗಳೂ ಇದ್ದು ಆ ಕಡೆ ಒಂದು ಸೊಸೈಟಿಗೆ ಸಾಲಕ್ಕೆ ಹಾಕಿ, ಈ ಕಡೆ ಇನ್ನೊಂದು ಸಹಕಾರ ಸಂಸ್ಥೆಗೆ ಸಾಲಕ್ಕೆ ಹಾಕಿ, ಮತ್ತೊಂದು ಕಡೆ Land Mortgage Bankನಲ್ಲಿಯೂ ಸಾಲಕ್ಕೆ ರೈತನು ಹಾಕುತ್ತಾನೆ. ಹೀಗೆ ಮೂರು ಕಡೆಯೂ ಸಾಲಕ್ಕೆ ಹಾಕಿ, ರೈತನಾದವನು ತಿರುಗುವುದಕ್ಕೆ ಪ್ರಯತ್ನ ಮಾಡಿದರೆ ಮೂರು ಸಂಸ್ಥೆಗಳಲ್ಲಿಯೂ ಅವನಿಗೆ ಸಾಲವೇ ಸಿಕ್ಕುವುದಿಲ್ಲ. ಹೀಗಾಗಿ ಸಹಕಾರಕ್ಕೆ ಬದಲಾಗಿ ಅಸಹಕಾರ ಹೆಚ್ಚಿದೆ. Short-term credit ಸೊಸೈಟಿಗಳು ಈಚೀಚೆಗೆ ಪ್ರಾರಂಭವಾಗಿವೆ. ಇದರಲ್ಲಿ ಸಹ ಸಾಲವೇನೋ ಕೊಡುತ್ತಾರೆ. ಕೊಟ್ಟರೂ ಬಹಳ ದಿನಗಳು ಕಳೆದುಹೋಗುತ್ತವೆ. ಇದರಿಂದ ಸಹಕಾರ ಸಂಸ್ಥೆ ಯಾವುದೇ ಆಗಲಿ ಯಾವ ಉದ್ದೇಶಕ್ಕಾಗಿ ಪ್ರಾರಂಭಮಾಡಿದೆವೋ, ರೈತರಿಗೆ ಅನುಕೂಲವಾಗಲಿ, ಕೈಗಾರಿಕಾ ಕೆಲಸಗಳನ್ನು ಮಾಡುವವರಿಗೆ ಅನುಕೂಲವಾಗಲಿ ಎಂದು ಪ್ರಯತ್ನಮಾಡಿದೆವೋ, ಆ ಉದ್ದೇಶ ಫಲಕಾರಿಯಾಗುವುದಿಲ್ಲ. Jack of all but master of none ಎಂದು ಹೇಳಿದ ಹಾಗಾಗುತ್ತದೆ. ಆದುದರಿಂದ ಯಾವ ಸಂಸ್ಥೆಯಲ್ಲಿಯೇ ಆಗಲಿ ಖಚಿತವಾದ, ನಿರ್ದಿಷ್ಟವಾದ ಒಂದು ಯೋಜನೆಯನ್ನು ಹಾಕಿಕೊಂಡು ಅದರಲ್ಲಿ ರೈತರಿಗೆ ಎಷ್ಟು ಸಾಲಕೊಡಬಹುದು, ಸಾಲಮಾಡಿದ್ದಾರೆಯೇ, ಇಲ್ಲವೇ ಮಾಡಿದ್ದರೆ ಎಷ್ಟು ಸಾಲಮಾಡಿದ್ದಾರೆ, ಅವರ ಶಕ್ತಿ ಮತ್ತು ಸಾಮರ್ಥ್ಯ, ಕಾರ್ಯಚತುರತೆ ಇವನ್ನು ತಿಳಿಯಲು concentrate ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಯಾಕೆಂದರೆ ಎಲ್ಲ ಸಹಕಾರ ಸಂಸ್ಥೆಗಳೂ ವಿವಿಧ ರೀತಿಗಳಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭಿಸಿರುವುದರಿಂದಲೇ. ಈ ಯೋಜನೆ ಏನಾಗಿದೆ, ಅದರಿಂದ ಅನುಕೂಲವಾಗಿದೆಯೋ, ಏನು ಸಹಾಯವಾಗುತ್ತಿದೆ, ಎಷ್ಟರಮಟ್ಟಿಗೆ ಕೆಲಸ ನಡೆಯುತ್ತಿದೆ ಎನ್ನುವುದನ್ನು ಅರ್ಥಮಾಡಿ ಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಸರ್ಕಾರದವರು ಎಲ್ಲ ಸಹಕಾರ ಸಂಸ್ಥೆಗಳ ಕೆಲಸ ಕಾರ್ಯಗಳನ್ನೆಲ್ಲಾ ಕೇಂದ್ರೀಕರಿಸಿ ಯಾವುದಾದರೂ ಒಂದು ರೀತಿಯಲ್ಲಿ, ರೈತರಿಗೆ ಸಹಾಯವನ್ನು ಒದಗಿಸತಕ್ಕದ್ದು ಉಚಿತವೆಂದು ಭಾವಿಸಿ ಕೊಂಡಿದ್ದೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).— ಸ್ವಾಮಿ, ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಮೊದಲು ಆಡಳಿತವರ್ಗದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ವೆಟೆರಿನರಿ ಇಲಾಖೆಯಲ್ಲಿ ಹೇಗೆ ಖಾಯಂ ಆದ ಒಬ್ಬರು ಮುಖ್ಯಾಧಿಕಾರಿಗಳಿಲ್ಲವೋ ಹಾಗೆಯೇ ಸಹಕಾರದ ಇಲಾಖೆಯಲ್ಲಿಯೂ ಖಾಯಂ ಆದ ಮುಖ್ಯಾಧಿಕಾರಿಗಳು ಇಲ್ಲದ ಹಾಗಾಗಿದೆ. ಈಗಿರುವವರೇ ಇನ್ನು ಮುಂದೆಯೂ ಇರುತ್ತಾರೆಯೋ ಇಲ್ಲವೇ ಎಂಬ ನಂಬಿಕೆ ಇಲ್ಲದಹಾಗಾಗಿದೆ. ಈಗಿರುವವರಿಗೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಶಕ್ತಿ ಇದೆ, ಅನುಭವವಿದೆ. ಆದರೆ ಅವರಿಗೆ ನಿರ್ದಿಷ್ಟವಾದ ಒಂದು ಸ್ಥಳವಿಲ್ಲದೆ ಹೋದರೆ ಹೇಗೆ ಅವರು ಅಧಿಕಾರ ನಡೆಸುತ್ತಾರೆ, ಯಾವ ಭರವಸೆಯಿಂದ, ನಡೆಸುತ್ತಾರೆ. ಅವರು ಎಷ್ಟು ದಿವಸ ಅಲ್ಲಿರಬೇಕು ? ರಿಜಿಸ್ಟ್ರಾರ್ ಒಂದು ಕಡೆ, ಡೆಪ್ಯುಟಿ ರಿಜಿಸ್ಟ್ರಾರ್ ಒಂದು ಕಡೆ ಹೀಗಾಗಿ ಇಲಾಖೆಗೆ ಸರಿಯಾದ ಅಧಿಕಾರಿಗಳಿಲ್ಲ. ರಿಜಿಸ್ಟ್ರಾರ್‌ರವರಿಗೆ ಖಾಯಂ ಆದ ಸ್ಥಾನವೇ ಇಲ್ಲದ ಹಾಗಾಗಿದೆ. ಹೀಗಾಗಿ ಡಾಕ್ಟರ್ ನಾಗನಗೌಡರ ಆಡಳಿತಾಧಿಕಾರದಲ್ಲಿರತಕ್ಕ ವೆಟೆರಿನರಿ ಇಲಾಖೆಯ ವಿಚಾರದಲ್ಲಿ ಹೇಗೆ ಹೇಳಿದೆನೋ ಇದಕ್ಕೂ ಹಾಗೆಯೇ ಹೇಳಬೇಕಾಗಿದೆ. ಒಂದು ವರ್ಷವೇ, ಎರಡು ವರ್ಷವೇ, ವರ್ಷಾನುಗಟ್ಟಲೆ ಖಾಯಂ ಆದ ಏರ್ಪಾಡು ಮಾಡಬೇಡವೇ ? ಹಾಗೆ ಮಾಡದೆ ಇದ್ದರೆ ಕೆಲಸ ಕಾರ್ಯಗಳು ಹೇಗೆ ನಡೆಯುತ್ತವೆ ?

ಅನೇಕ ಕಡೆ ಹಣ ದುರುಪಯೋಗವಾಯಿತು ಎಂದು ಹೇಳುತ್ತಾರೆ. ಸೊಸೈಟಿಗಳಿಗೆ audit system ಎಂದು ಮಾಡಿದ್ದಾರೆ. ಈ ಕೆಲಸಕ್ಕೆ ಹಿಂದೆ ಇನ್ಸ್‌ಪೆಕ್ಟರುಗಳಾಗಿದ್ದು, ಎಷ್ಟು ಮೀಟಿಂಗ್ ಆಯಿತು, ರೆಸಲ್ಯೂಷನ್ ಏನೇನಾಯಿತು ಎಂದು ನೋಡುತ್ತಿದ್ದವರೆಲ್ಲ ಇವೊತ್ತು ಆಡಿಟರುಗಳಾದರೆ, ಆಡಿಟ್ ಎನ್ನುವುದನ್ನೇ ತಿಳಿಯದೇ ಇರುವವರು ಆಡಿಟರುಗಳಾದರೆ, ಅವರು ಲೆಕ್ಕಗಳನ್ನು ಎಷ್ಟು ಮಾತ್ರ ಆಡಿಟ್ ಮಾಡಬಲ್ಲರು ? ಇಂಥ ಕೆಲಸಕ್ಕೆ ಆಡಿಟ್ ಫೀ ಎಷ್ಟೆಂದರೆ ಆಯಾ ಸೊಸೈಟಿಗಳ ಲಾಭದಲ್ಲಿ ಸೇಕಡ ಹತ್ತರಷ್ಟು ಕೊಡಿ ಎಂದು ಹೇಳುತ್ತಾರೆ. ದುಡ್ಡು ಹಾಕಿ, ಬಂಡವಾಳವನ್ನು ಹಾಕಿ ವ್ಯವಹಾರವನ್ನು ನಡೆಸುವ ಸೊಸೈಟಿಗಳು ತಮ್ಮ ಷೇರುದಾರರಿಗೆ ಶೇಕಡ 6¼ ರೂಪಾಯಿಗಿಂತಲೂ ಹೆಚ್ಚಾಗಿ ಕೊಡಕೂಡದು. ಆದರೆ ಆಡಿಟರುಗಳಿಗೆ ಮಾತ್ರ ಶೇಕಡ 10 ರೂಪಾಯಿ ಕೊಡಬೇಕು. ಇದು ಯಾವ ನ್ಯಾಯ. ಅನೇಕ ಸೊಸೈಟಿಗಳಲ್ಲಿ ಬಂದ ಲಾಭವೆಲ್ಲ ಆಡಿಟರಿಗೇ ಹೋಗುವುದು. ಹಿಂದಿನ ವರ್ಷ ಈ ವಿಷಯವನ್ನು ಹೇಳಿದುದಕ್ಕೆ ಯೋಚನೆ ಮಾಡುತ್ತೇವೆಂದು ತಿಳಿಸಿದರು. ವರ್ಷಾನುಗಟ್ಟಲೆ ಯೋಚನೆ ಮಾಡುವ ಅಧಿಕಾರಿಗಳಿಂದ ಏನು ಕೆಲಸವಾಗುತ್ತದೆ ? ಯಾವುದಕ್ಕೇ ಆಗಲೀ ಆಲೋಚನೆ ಮಾಡಲಾಗುತ್ತದೆ, under consideration ಎಂದು ಹೇಳುತ್ತಾರೆ. ಆದರೆ ಅದರ ಬಗ್ಗೆ ಏನೂ ಕಾರ್ಯ ತೆಗೆದುಕೊಳ್ಳುವುದಿಲ್ಲ.

ಎರಡನೆಯದಾಗಿ consolidate ಮಾಡುವುದಕ್ಕೆ ಅನೇಕ types of societies ಮಾಡಿದ್ದೇವೆ, ಅವಕ್ಕೆ trained personnel ಬೇಕು ಎಂದು ಹೇಳುತ್ತಾರೆ. ಒಂದು institution ಮಾಡಿ, ಟ್ರೈನಿಂಗ್ ಕೊಟ್ಟು, trained personnel ಹಾಕಿ ಕೆಲಸಗಳನ್ನು ನಡೆಸಲಿ. ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ subsidise ಮಾಡಿ ಅಧಿಕಾರಿಗಳನ್ನು ನೇಮಿಸಿ ಕೆಲವು ವರ್ಷಗಳು ತಮ್ಮ ಕಾಲುಗಳ ಮೇಲೆ ತಾವು ನಿಲ್ಲುವಂತೆ ಮಾಡಲು ಏರ್ಪಡಿಸಿದರು. ಕೆಲಸಕಾರ್ಯಗಳನ್ನು ನಿರ್ವಹಿಸಲು ದಕ್ಷತೆ ಇಲ್ಲದೆ ಅನೇಕ ಕಡೆ ತೊಂದರೆಯಾಗಿದೆ. ಅಂಥಕಡೆ ನೀವು ಅಧಿಕಾರಿಗಳನ್ನು ಹಾಕುತ್ತಿಲ್ಲ. ದುಡ್ಡು ಕೊಡಿ ಹಾಕುತ್ತೇವೆ ಎಂದರೆ ಎಷ್ಟು ದುಡ್ಡು ಕೊಡುವುದು ! ಸರ್ಕಾರಕ್ಕೆ ಆಡಿಟ್ ಫೀಗಾಗಿ ಶೇಕಡ 10ರಷ್ಟು ಕೊಟ್ಟ ಮೇಲೆ ಉಳಿಯುವುದು ಏನು ! ಕೋ-ಆಪರೇಟಿವ್ ಸೊಸೈಟಿಗಳು ಹೇಗೆ ಕೆಲಸಮಾಡಬೇಕು ? ಆ ಮೇಲೆ Agricultural Co-operative Society, Co-operative Farm ಎಂದು ಹೇಳಿದ್ದೀರಿ. ಇವು ಸರಿಯಾಗಿ ಕೆಲಸ ಮಾಡುತ್ತಿದೆಯೋ ? ಸರಿಯಾದ trained personnel ನೇಮಕ ಮಾಡಿದ್ದೀರಾ ? ಅದರ ಆದಾಯ ವೆಚ್ಚಗಳು ಏನೂ ಒಂದೂ ಗೊತ್ತಿಲ್ಲ. ಇನ್ನು ಮುಂದೆ ಪ್ರತ್ಯೇಕವಾದ Co-operative Committee ನಮ್ಮಲ್ಲಿ ಆಗಬೇಕು ಎನ್ನುವಾಗ ಅದರಲ್ಲಿ ಜನಗಳಿಗೆ ನಂಬಿಕೆ ಇಲ್ಲದ ಪರಿಸ್ಥಿತಿ ಉಂಟಾಗುತ್ತಿದೆ.

ಇಂಡಿಯಾ ಸರ್ಕಾರದವರು ಜನತೆಗೆ ಶೇಕಡ 4-5ರ (4 or 5 per cent ಒಳಗಾಗಿ ಹಣಸಿಗಬೇಕು ಎಂಬ ತತ್ವವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ, 6½ 7, 7½ per

(ಶ್ರೀ ಎ. ಭೀಮಪ್ಪನಾಯಕ್.)

cent ಹೀಗೆ ಕೊಡುತ್ತ ಇದ್ದೀರಿ. ಕೇಂದ್ರದಿಂದ ನಾಲ್ಕು ಪರ್‌ಸೆಂಟ್ ಪ್ರಕಾರ ಬರುವ ಹಣ ರೈತನಿಗೆ ಸೇರುವುದರೊಳಗಾಗಿ ಎಂಟು ಪರ್‌ಸೆಂಟ್ ಆಗಿರುತ್ತದೆ? ಕೇಂದ್ರ ಸರ್ಕಾರದವರು ಕೊಡತಕ್ಕ ದರದ ಮೇಲೆ ಶೇಕಡ ಒಂದಕ್ಕಿಂತ ಜಾಸ್ತಿ ಇರಕೂಡದು ಎಂದು ಮಾಡಬೇಕು. There are more middle men than the Society people can bear. ಸೆಂಟ್ರಲ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು, ಡಿಸ್ಟ್ರಿಕ್ಟ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು, ಲೋಕಲ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು. ಸೆಂಟ್ರಲ್

12 NOON.

ಸೊಸೈಟಿ, ಡಿಸ್ಟ್ರಿಕ್ಟ್ ಸೊಸೈಟಿ, ಲೋಕಲ್ ಸೊಸೈಟಿ ಇವೆಲ್ಲಾ ಆಡಿಟ್ಟಿಗೆ ಇಷ್ಟು ಪರ್ಸೆಂಟೇಜ್ ತೆಗೆದುಕೊಳ್ಳಬೇಕು. ಇಷ್ಟು ತೆಗೆದುಕೊಂಡರೆ ಮನುಷ್ಯನ ಮೇಲೆ ಹೊರೆ ಎಷ್ಟು ಬೀಳುತ್ತದೆಂಬುದನ್ನು ಯೋಚನೆಮಾಡಿದ್ದೀರಾ? ಕಡಮೆ ತೆಗೆದುಕೊಂಡರೆ ಸರ್ಕಾರವೇ ಆಡಿಟ್ ಫೀಜು, ಮೇಲ್ವಿಚಾರಣೆಗೆ ಅಧಿಕಾರಿಗಳಿಗೆ ಕೊಡಬೇಕಾದ ಖರ್ಚು ಇದೆಲ್ಲಾ ಕೊಡಬೇಕು. ಇದನ್ನು ಆರ್ಗನೈಸ್ ಮಾಡಿಲ್ಲ. ಒಂದು ಡಿಸ್ಟ್ರಿಕ್ಟಿನಲ್ಲಿ ಎಷ್ಟು ತರಹ ಸೊಸೈಟಿಗಳಿವೆ, ಹೇಗೆ ಕೆಲಸಮಾಡುತ್ತಿವೆ, ಎಷ್ಟು ಕೆಲಸವಾಗಿದೆ ಎಂದು ನೋಡಿ ಮಾಡಿಲ್ಲ. ಟ್ರೈನಿಂಗ್ ಕೂಡ ಇಲ್ಲ. ಇನ್ನೂ ಮುಂದೆ ಹೋಗಿ ಹೇಳಬೇಕಾದರೆ ಕೆಲವು ಯಾವಾಗಲೂ ಒಂದೇ ರೀತಿಯಲ್ಲಿವೆ; ಪ್ರಪಂಚ ಹುಟ್ಟಿದ ಲಾಗಾಯ್ತು ಒಂದೇ ರೀತಿ ಒಬ್ಬರೇ ಒಂದೇ ಮನೆತನದವರೇ ನಡೆಸಿಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಾರೆ. ಇದಕ್ಕೊಂದು ಲಾ ಮಾಡಿದರು; ಈ ಇಲಾಖೆಯವರೇ ಮಾಡಿದರು. ಅದರಿಂದೇನೂ ವ್ಯತ್ಯಾಸವಾಗಿಲ್ಲ. ಚುನಾವಣೆಯ ರೀತಿ ನೀತಿ ಸಹ ಬದಲಾವಣೆಯಾಗಿಲ್ಲ. ಹಿಂದಿನಿಂದ ಯಾರು ಮೇಯುತ್ತಿದ್ದರೋ ಅವರೇ ಈಗಲೂ ಇದ್ದಾರೆ, ಮೇಯುವುದೇನೂ ಕಡಮೆಯಾಗಿಲ್ಲ. ಇದನ್ನೆಲ್ಲಾ ದಯವಿಟ್ಟು ಸರಿಪಡಿಸಬೇಕು. ಈ ಡಿಮ್ಯಾಂಡ್ ಮನವಿಯನ್ನು ನಾನು ಒಪ್ಪುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಮೈಸೂರು ಸಂಸ್ಥಾನದಲ್ಲಿ ರೈತರಿಗೆ ಅನುಕೂಲವಾಗಬೇಕಾದರೆ ಸಂಸ್ಥಾನದಲ್ಲಿ ರೈತರಿಗೆ ಎಷ್ಟು ಸಾಲವಿದೆಯೆಂದು ಸರ್ವೆಮಾಡಿಸಿ ಅದಷ್ಟು ಕಡಮೆ ದರದಲ್ಲಿ ಬಡ್ಡಿ ಹಾಕಿ ರೈತರಿಗೆ ಸರ್ಕಾರ ಸಾಲ ಒದಗಿಸುವುದು ಬಹಳ ಸೂಕ್ತವೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಮಾರವಾಡಿಗಳ ಕೈಗೆ ಮತ್ತು ಶ್ರೀಮಂತರ ಕೈಗೆ ಸಿಕ್ಕಿರುವುದರಿಂದ ರೈತರಿಗೆ ಬಹಳ ಕಿರುಕುಳವಾಗಿದೆ. ಆದ್ದರಿಂದ ನಾನು ಹೇಳಿದ ಏರ್ಪಾಡ ಮಾಡುವುದು ಸಾಧುವಾದುದೆಂದು ಸೂಚಿಸುತ್ತೇನೆ.

ಎರಡನೆಯದಾಗಿ ಈಗ ಅಲ್ಪಕಾಲಾವಧಿ ಸಾಲವನ್ನು 36 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದ್ದರು. ಅದನ್ನು ರೈತರು ತೆಗೆದುಕೊಂಡು ಆರೇಳು ತಿಂಗಳಲ್ಲಿ ಸರ್ಕಾರಕ್ಕೆ ವಾಪಸು ಕೊಟ್ಟರು. ಈ ರೀತಿಯಲ್ಲಿ ಸುಮಾರು 35 ಲಕ್ಷ ಚಿಲ್ಲರೆ ರೂಪಾಯಿಗಳಯಾಗಿ ಸಾಲವನ್ನು ವಾಪಸು ಕೊಟ್ಟಿರುತ್ತಾರೆ. ಇದೇ ರೀತಿಯಾಗಿ ಈ ವರ್ಷ ಕೂಡ ಈ ಬಾಬಿಗೆ ಹೆಚ್ಚು ಹಣ ಒದಗಿಸಿ ರೈತರಿಗೆ ಅನುಕೂಲ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಮೊದಲು ಬಡ್ಡಿದರ ಬಹಳ ಕಡಮೆಯಿತ್ತು. ಶೇಕಡ ನಾಲ್ಕರಂತೆ ಇದ್ದುದನ್ನು ಶೇಕಡ 7½ಗೆ ಏರಿಸಿದ್ದಾರೆ. ಇದು ಸರಿಯಲ್ಲ. ಈಗ ಶ್ರೀ ಅನಂತರಾಮನ್‌ರವರು ಅದರ ಆಡಳಿತ ನೋಡಿಕೊಳ್ಳುತ್ತಾರೆಂದು ಕಾಣುತ್ತದೆ. ಅವರು ಬಂದ ಮೇಲೆ ಅಲ್ಲಿ ಶೇಕಡ 6½ ಗೆ ಬಡ್ಡಿದರ ಇಳಿಸಿದ್ದಾರೆ. ಶೇಕಡ 5ಕ್ಕೆ ಮೇಲ್ಪಟ್ಟು ಎಲ್ಲೂ ಹಾಕಿಲ್ಲ. ಈಗಲಾದರೂ ಆ ಬ್ಯಾಂಕಿನವರು ಶೇಕಡ 5 ರಂತೆ ಬಡ್ಡಿ ಹಾಕಿ ರೈತರಿಗೆ ಹೆಚ್ಚು ಸಹಾಯಮಾಡುವಂತೆ ಏರ್ಪಾಡು ಮಾಡಬೇಕೆಂದು ಮನವಿ ಮಾಡುತ್ತೇನೆ.

ಈಗ ಸಾಲ ಕೊಡುವ ವ್ಯವಸ್ಥೆ ಮೂರು ನಾಲ್ಕು ಕಡೆಯಿರುವುದರಿಂದ ಎಲ್ಲಿ ಸಿಕ್ಕುತ್ತದೆಂಬುದು ರೈತರಿಗೆ ಗೊತ್ತಾಗಿಲ್ಲ. ಅನೇಕ ಕಡೆ ಸರ್ಕಾರದವರೇ ಕೊಡುವುದಕ್ಕೆ ಏರ್ಪಾಡು ಮಾಡುವುದಕ್ಕೆ ಬದಲಾಗಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು 10-15 ಕಡೆ ಕೊಡಲು ಏರ್ಪಾಡು ಮಾಡಿದೆ. ಎರಡನೆಯದಾಗಿ ಅಲ್ಪಕಾಲಾವಧಿ ಸಾಲವನ್ನು ಕೊಡುವ ರೀತಿಯಲ್ಲಿ ಏರ್ಪಾಡು ಮಾಡಿ ಒಂದೇ ಕಡೆ ದೀರ್ಘಾವಧಿ ಮತ್ತು ಅಲ್ಪಕಾಲಾವಧಿ ಸಾಲ ಇವೆರಡನ್ನೂ ಕೊಡುವಂತೆ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದು. ಮೂರು ನಾಲ್ಕು ಕಡೆ ಇಂಡಸ್ಟ್ರಿಯಲ್ ಲೋನ್ ವಗೈರೆ ಕೊಡುತ್ತೇವೆಂದು ಹೇಳುವುದಕ್ಕೆ ಬದಲಾಗಿ ಮಿಡ್ಲ್‌ಮೆನ್‌ಗೆ ಅನುಕೂಲವಾಗುವುದನ್ನು ತಪ್ಪಿಸಿ ಒಂದು ಕಡೆ ಕೊಡಲು ಏರ್ಪಾಡು ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

ಈಗ ಅನೇಕ ಕಡೆ ಸಾಲ ಕೊಡುವಾಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಕೊಡುವ ಪರ್ಸೆಂಟೇಜ್ ಸ್ವಲ್ಪ ಕಡಮೆಯಾಗಿದೆ. ಮೊದಲು ತೀರ್ಮಾನ ಮಾಡಬೇಕಾದರೆ ಒಂದು ವರ್ಷ ಎರಡು ವರ್ಷ ಬೇಕಾಗುತ್ತಿತ್ತು. ಈಗ ಅದನ್ನು ಮಾರ್ಪಾಡು ಮಾಡಿದೆಯೆಂದು ಹೇಳುತ್ತಾರೆ. ಇನ್ನೂ ಮಾರ್ಪಾಡು ಮಾಡಿ ಜಾಗ್ರತೆ ದೊರೆಯುವ ಹಾಗೆ ಮಾಡಬೇಕು. ಈ ಬ್ಯಾಂಕಿನ ಕೆಲಸ ಸುಲಲಿತವಾಗಿ ನಡೆಯುವಂತೆ ಸರ್ಕಾರ ಗಮನ ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಸಂಸ್ಥಾನಾ ಮಳೆ ರೈತರನ್ನು ತಮ್ಮ ಸಾಲ ಸೋಲಗಳಿಂದ ಪಾರು ಮಾಡತಕ್ಕ ಬಗ್ಗೆ ನಮ್ಮ ಸರ್ಕಾರದವರು ನಾನಾ ಮುಖವಾಗಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ರೈತರಿಗೆ ಈ ನಾನಾ ರೀತಿಯ ಸಾಲಗಳನ್ನು ಮಂಜೂರು ಮಾಡುತ್ತಿರುವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಜನರಿಗೆ ಇನ್ನೂ ಹೆಚ್ಚು ಹೆಚ್ಚಿನ ರೀತಿಯಲ್ಲಿ ಸಾಲಕೊಡಬೇಕಾದ್ದು ಅತ್ಯಗತ್ಯ. ರೈತರಿಗೆ ಹೀಗೆ ಅನೇಕ ರೀತಿಯಲ್ಲಿ ಸಾಲಗಳನ್ನು ಒದಗಿಸಿ ರೈತಾಪಿ ಜನರ ಅರ್ಥಿಕ ಪರಿಸ್ಥಿತಿ ಉತ್ತಮಗೊಂಡು, ಅವರು ಇನ್ನೂ ಪ್ರಗತಿದಾಯಕವಾದ ರೀತಿಯಲ್ಲಿ ಮುಂದುವರೆಯಲು ಅನುಕೂಲವಾಗುವಂತೆ ನಮ್ಮ ಸರ್ಕಾರ ಸಹಾಯವನ್ನು ನೀಡುತ್ತಿರುವುದು ತುಂಬಾ ಸಂತೋಷದ ಮತ್ತು ಅಭಿನಂದನೀಯವಾದಂಥ ವಿಚಾರ. ಇದಕ್ಕಾಗಿ ನಾನು ಸರ್ಕಾರದವರನ್ನು ವಂದಿಸಬೇಕಾಗಿದೆ. ಆದರೆ ಇದರಲ್ಲಿ ಕೆಲವು ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಈ ದಿವಸ ಈ ಹಿಂದಿನ ಸಾಲಗಳ ಬಗ್ಗೆ ಎಲ್ಲೆಲ್ಲಿ ಡಿಕ್ರಿಯಾಗಿವೆಯೋ ಅಲ್ಲೆಲ್ಲಾ ಆ ಮೊಬಲಗನ್ನು ವಸೂಲ್ಮಾಡುವುದು ಅಗತ್ಯ. ಎಲ್ಲೆಲ್ಲಿ ಈ ಸೊಸೈಟಿಗಳ ಆಡಿಟ್ ಕೆಲಸ ಪೂರೈಸಿಲ್ಲವೋ ಅವುಗಳನ್ನು ಬೇಗ ಆಡಿಟ್ ಮಾಡಿಸಬೇಕು. ಅಷ್ಟೇ

ಅಲ್ಲದೆ ಈ ಸಂಸ್ಥೆಗಳನ್ನು ತಾವು ಸರಿಯಾದ ರೀತಿಯಲ್ಲಿ ಪುನರುಜ್ಜೀವನಗೊಳಿಸಿ ಇವು ನವಚೈತನ್ಯದಿಂದ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು. ಈ ಕೆಲಸದಲ್ಲಿ ಸರ್ಕಾರ ಪೂರ್ಣ ಆಸಕ್ತಿಯನ್ನು ವಹಿಸಬೇಕಾಗಿದೆ.

ಇನ್ನು ಈ ಮಧ್ಯಮ ತರಗತಿಯ ಸೊಸೈಟಿಗಳನ್ನು ಹಿಂದಿನ ಮಂತ್ರಿಗಳು ನಿರ್ಮಾಣ ಮಾಡಿದ್ದರು. ಅದರೆ ತಂದೆ ಹಾಕಿದ ಮರವನ್ನು ಮಗನೂ, ಮಗನು ಹಾಕಿದ ಮರವನ್ನು ಮೊಮ್ಮಗನೂ ಅವುಗಳನ್ನು ಬೆಳಸಿ— ಉಳಿಸಿಕೊಂಡು ಹೋಗಬೇಕೆಂಬುದು ಒಂದು ಹಿರಿಯ ಸಾಂಪ್ರದಾಯ. ಇಂಥಾ ಒಂದು ಒಳ್ಳೆಯ ಸಾಂಪ್ರದಾಯವನ್ನು ನಾವು ಆಚರಣೆಗೆ ತಾರದೆ ಹೋದರೆ ನಮ್ಮ ಮುಂದಿನ ಜನಾಂಗಕ್ಕೆ ಮತ್ತು ಆ ಮುಂದಿನ ಪೀಳಿಗೆಗೆ ಬಹಳ ಅನಾನುಕೂಲವಾಗುತ್ತದೆ ಮತ್ತು ಮುಂದಿನ ಜನ ನಮ್ಮ ಬಗ್ಗೆ ಬಹಳ ನೊಂದುಕೊಳ್ಳುತ್ತಾರೆ. ಆದರೆ ಆ ಮಂತ್ರಿಗಳು ಆ ದಿವಸ ಸ್ಥಾಪಿಸಿದಂಥ ಸೊಸೈಟಿಗಳು ಈ ಹೊತ್ತು ಯಿಲ್ಲ. ಹೀಗಾಗಬಾರದಾಗಿತ್ತು. ಈಗಿನ ಕಾಲದಲ್ಲಿ ಅನೇಕರು ಸೆಕ್ರೆಟರಿಗಳಾಗಿರತಕ್ಕವರೇ ಈ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದುಕೊಂಡು ಈ ಸಂಘ ಸಂಸ್ಥೆಗಳ ಲೆಕ್ಕಪತ್ರಗಳನ್ನೂ ಸಹ ಆಡಿಟ್ ಮಾಡಿಸದೆ ಹಣದ ದುರುಪಯೋಗಕ್ಕೆ ಅವಕಾಶವಾಗಿದೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ಪೋಲಾಗಿರುವ ಹಣವನ್ನು ವಸೂಲ್ಮಾಡಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ನಡೆಸಬೇಕು. ಎಲ್ಲಿಯವರೆಗೆ ಸರ್ಕಾರದ ಆಜ್ಞೆಗಳಿಗೆ ಗೌರವ ಮನ್ನಣೆಗಳಿರುವುದಿಲ್ಲವೋ ಅಲ್ಲಿಯವರೆಗೆ ಈ ಆಡಳಿತದಲ್ಲಿ ಬಿಗಿ ಇರುವುದಿಲ್ಲ. ಕೆಲಸಗಳೂ ಸಹ ಕುಂಠಿತಗೊಳ್ಳುತ್ತವೆ. ಆದ್ದರಿಂದ ಸರ್ಕಾರದವರು ತಮ್ಮ ಗೌರವ ಮತ್ತು ಕೀರ್ತಿಗಳನ್ನು ಉಳಿಸಿಕೊಳ್ಳತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ಇಂಥ ವಿಷಯಗಳಲ್ಲಿ ಸರ್ಕಾರದವರು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲವೆಂಬ ಅಂಶವನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ದಿವಸ ದೇಶಗಳ ಏಳಿಗೆ ಮತ್ತು ಜನಾಂಗದ ಅಭಿವೃದ್ಧಿಗಳೆಲ್ಲಾ ಈ ಸಹಕಾರ ಮನೋಭಾವದಮೇಲೇ ನಿಂತಿರುತ್ತವೆ. ಹೀಗೆ ಇಡೀ ಜಗತ್ತಿನ ಕಲ್ಯಾಣಕ್ಕೇ ಮೂಲಾಧಾರವಾಗಿರತಕ್ಕಂಥ ಮನೋಭಾವ ಸಹಕಾರಗಳನ್ನು ಬೆಳೆಸಿಕೊಂಡು ಬರಲು ಸಹಾಯಕವಾಗಿರತಕ್ಕಂಥ ಈ ಮಹಾ ಸಂಸ್ಥೆಗಳನ್ನು ಸಹಕಾರ ಸಂಘಗಳನ್ನು ಯಾರೇ ಸ್ಥಾಪಿಸಲಿ ಅವುಗಳನ್ನು ಜೀರ್ಣೋದ್ಧಾರಗೊಳಿಸಿಕೊಂಡು ಬರಬೇಕಾದ್ದು ತುಂಬಾ ಆವಶ್ಯಕ. ಈ ದಿವಸ ಲ್ಯಾಂಡ್‌ಮಾರ್ಟಿಗೇಜ್ ಬ್ಯಾಂಕಿಗೆ ಖಾಯಂ ಆದ ಒಬ್ಬ ಡೈರೆಕ್ಟರ್ ಇದ್ದಾರೆ. ತಾವು ಈ ಪದ್ಧತಿಯನ್ನು ತಪ್ಪಿಸಿ ಈ ಹುದ್ದೆಯಲ್ಲಿರತಕ್ಕಂಥವರನ್ನು ಮೂರು ವರ್ಷಗಳಿಗೊಮ್ಮೆ ಬದಲಾವಣೆ ಆಗುವಂಥ ಏರ್ಪಾಡನ್ನು ಮಾಡಬೇಕು. ಈ ಸಂಸ್ಥೆಗಳ ಆಡಳಿತ ಕ್ರಮವು ಎಲ್ಲಾ ಜನರ ಮನಸ್ಸಿಗೆ ಸಂತೋಷಕರವಾಗಿರತಕ್ಕಂಥ ರೀತಿಯಲ್ಲಿ ಮತ್ತು ದೇಶಕ್ಕೆ ಫಲದಾಯಕವಾಗಿರುವಂಥ ಮಾದರಿಯಾಗಿರುವ ಹಾಗೆ ಏರ್ಪಾಡು ಮಾಡಬೇಕು. ಹೀಗೆ ಈ ಇಲಾಖೆಯನ್ನು ಪುನರ್ ವ್ಯವಸ್ಥೆಗೊಳಿಸಿ ಇವುಗಳನ್ನು ಪೂರ್ಣ ಯಶಸ್ವಿಗೊಳಿಸುವಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಈ ಇಲಾಖಾ ಮಂತ್ರಿಗಳಿಗೂ ಮತ್ತು ಈ ಇಲಾಖಾ ಶಿಬ್ಬಂದಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ. ಮತ್ತು ನನಗೆ ಈ ಎರಡು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಾದ ತಮಗೂ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri T. MARIAPPA (Mysore—North).—I would like to make one or two observations only on this subject. I have heard the various suggestions offered by the members. I would like the Government to take note of the keen feeling that has been expressed on the floor of this House. We are on the eve of real revolution in the co-operative field. That is the reason why the members have been urging the Government to take stock of the entire situation before they embark on new measures of reforming this field. Sir, may I bring to the notice of the Government the need for co-ordination both at the taluk, district and State levels so far as the co-operative movement is concerned? My friend Sri Bheemappa Naik happened to remark that there are varied types of societies and there is no proper co-ordination among them. Sir, we have come to a stage where we have to abolish most of the inactive societies; and all the languishing societies have to be regenerated and they must be put on their feet so that they should be made to serve the real purpose for which they were established. There is also another aspect of the question which I want the Government to take note of, namely, that after the establishment of rural credit committees, the real time has come when the whole thing has to be reorganised on a very rational basis. But today, the short-term credit, medium-term credit is going to play a very vital role in the regeneration of this area. Sir, as the Committee has happened to remark, we need nearly Rs. 750 crores to circulate in the rural areas if we are really to help the rural population. Sir, what is the percentage of money that the Government and the co-operative institutions are furnishing now to the rural people? It is hardly 6 per cent and 94 per cent of the huge amount is being furnished by the local money-lenders and the big zamindars. Therefore we have to set up an organisation which will be able to handle all this money in the course of the next at least 5 or 10 or 15 years, so that the

(SRI T. MARIAPPA.)

Co-operative Department has to be reorganised on a rational basis. It has to be strengthened and trained people have to be put in various places. It is only then that the Department would be able to handle this huge task of regenerating the rural life. Sir, may I say that the Department has got highly inadequate staff and what is more, unfortunately, recruits are posted to several places without proper training? Therefore, there is need to open at least three or four training centres and as and when people are recruited, they must be trained properly and posted to various places.

Sir, there is another point which I want the Government to take note of, namely that at the taluk level, there is a number of co-operative institutions with diverse purposes. The Government must also consider the feasibility or the desirability of bringing about co-ordination of these various types of societies. For example, the Land Mortgage Bank works in its own way; the Multi-purpose Co-operative Societies are working in their own way; and short term credit institutions in taluk head-quarters are working in their own way. Sir, is it not possible to have a set-up which will bring about co-ordination so that at least the investigating agencies may be one for all these types of societies? Therefore, the Government must have a rational reorganisation of the Department. They must strengthen the staff of the Department and then only they will be able to tackle this big problem. My friend Sri Byre Gowda wanted the most immediate establishment of a regulated market. Sir, regulated markets are part and parcel of the measures which are conceived in the best interests of the agriculturists, namely, producers. Therefore, side by side with the establishment of regulated market, they must also set up warehouses. The Government of India have already introduced a separate department. Suppose that is enacted into law here also, then there will be heavy responsibility on the State Government to set up warehouse corporation and warehouses all over the State. Therefore, they must now alone take measures with a view to rationalise this Department and the various institutions conceived in the best interests of the country must be set up properly and manned properly and they should be made to develop in their own fashion.

One point Sri Puttaswamy has been able to say how unfortunately party factions have eclipsed the co-operative movement. I think Government should look into it immediately and try to eliminate all those anti-social elements which have entered the co-operative field. Let them take power; let them amend the law with regard to co-operation; let them enact a new law so that they could take power and wherever they find mal-practices they must immediately take over such institutions as they take over the local bodies and rehabilitate them and make them function properly and then hand them over to non-official persons. The House will not grudge to give that power to Government. It is much better they look into all these aspects of the case and try to rehabilitate the entire field of co-operation in the best interests of the country.

MR. CHAIRMAN.—Now the Hon'ble Minister will reply.

SRI M. PALANIYAPPAN (Ulsoor).—I raise a point of order, Sir. Already the House has agreed to allot time for the members who have tabled cut motions. But the members who have tabled cut motions have not been given an opportunity to speak.

MR. CHAIRMAN.—There is no point of order. The Hon'ble Member may remember that it was agreed to allot time only to a few members who have tabled cut motions. The Hon'ble Minister will require at least 15 minutes to reply. Therefore there is no point of order. Now the Hon'ble Minister will reply to the debate.

*DR. R. NAGAN GOWDA (Minister for Agriculture).—Mr. Speaker, Sir, a large number of Hon'ble members have spoken on this demand and I appreciate the serious thought that they have given for this important activity of the Government. I may not be able to meet and answer all the points

that have been raised, but I have noted all the points that they have said and will seriously consider them and take action about them.

One of the important things that a very large number of members mentioned was about the multi-purpose societies that were started and the irregularities that have been noticed in some of them. Sir, I might mention here that since December 1954 we have carried on audit work in all these societies and the audit staff have covered about 95 per cent of the societies; in the year 1953-54 they have audited about 90 per cent of the societies and we have collated the societies, we have brought together the societies where they have been irregularities and things like that and we are taking systematic action to set right these irregularities and also take action against people that have been responsible for any mismanagement or misuse of the funds of the societies. I may assure the Hon'ble members here that the Government are very serious about this matter and are taking action in all these matters.

One of the members said that the public have invested in these societies shares and deposits and unless action is taken they would loose the confidence in the co-operative movement. I will only assure them that we are taking all action in this matter. One other important matter that the Hon'ble Member for Mysore Sri K. Puttaswamy suggested was about the disputes and Sri Mariappa also mentioned about that. Now a large number of disputes are filed with the Assistant Registrars and the Registrar. As regards the delay in the disposal of these disputes and the stay orders not vacating in time, I will certainly look into these matters and see that no room is given for any sort of complaints.

Another serious point that was brought to the notice of this House is that we should have election once in every year and no society or the Board of Directors of the Societies should so manupalate to stay in the Society for any length of time. Sir, one of the general questions that was raised by many of the Hon'ble Members was co-ordination of the activities of the various societies in the State. One of the things that has been suggested by the Reserve Bank is that we should have a few large size Co-operative Societies in the State.

We propose to have 400 large size Co-operative Societies this year. Hon'ble Member Sri Mariappa suggested about the godowns for these societies. These societies will be provided with 300 godowns. And then we are going to have also Marketing Societies. Taluk Multi-purpose Societies were organised years ago and have collected huge amount of share capital and deposits. It is our intention to convert these Taluk Multi-purpose Societies into Marketing Societies and provide godowns for these societies. I appreciate the suggestions offered by the Hon'ble Members. So, it is the intention of Government to organise Marketing Societies where the produce that has been taken over from the small societies which have issued credit on short term, will be brought over and sold.

Along with the taluk multi-purpose co-operative societies, a large number of hobli circle societies were organised. A few of these will be converted into societies for giving short term loans for the agriculturists. We propose to rectify, if there are any defects and organise if they are dormant.

Regarding the Regulated Marketes, we have organised a number of markets. Recently we have started a few more and it is the intention of the Government to start Regulated Markets wherever people come for it. In the first place, we need in these matters the co-operation of both the traders and the growers. In some places we come across difficulties but afterwards we find the people there welcoming it.

Hon'ble Sri Hutche Gowda suggested we should get 40 crores of rupees for cultivators. I wish we could find that much money to meet the needs of the cultivators. I think it was 23 crores. 40 crores was the original figure. According to the Second Five-Year Plan, we have been thinking of giving

(DR. R. NAGAN GOWDA.)

about four crores of rupees as long term loans. That is the proposal we have. But the need for a much greater amount being given through the Land Mortgage Bank is recognised by the Government. During the course of the five years, through the rapid way in which the Land Mortage Bank is distributing these loans and the large amount of business it is doing probably we will reach the target much before earlier than five years, for dealing business in large amounts greater organisation is required and also considerable amount of share capital.

A few remarks were made about the delay in Land Mortgage Banks. . . .

SRI G. A. THIMMAPPA GOWDA (Arkalgud).—What about securing one crore of rupees for short-term loans ?

DR. R. NAGAN GOWDA.—I will come to it. Here I would like to take this opportunity to mention that within the last one year, the Land Mortgage Bank has been able to do good work. It has been able to so organise that the loans are disposed of much more quickly. Also it is to their credit that they have been able to reduce the rate of interest from 7½ per cent to six per cent, which is very considerable. I wish we could reduce it much further. I think Madras has now been giving loans at three per cent. I know that in ceded districts they reduced it to four per cent. But it was subsidised by the Madras Government by one per cent. Lower than that, I do not know if it has been given anywhere.

Sri Thimmappa Gowda wanted to know about our securing loan to the extent of one crore of rupees for giving loans for the next year as short-term loans. It may be possible to give later on. But right now, in the Second Five-Year Plan, we have a programme to give 70 lakhs this year. I wish we could make out a little more. We have given this year 38 lakhs. In the coming year after Ugadi onwards, we will be able to give 30 lakhs as short term credit and we are proposing to give 15 lakhs as medium credit loans. This is something new. It was not in existence up to now. We propose to give short-term loans and whatever share capital that is needed, we will be able to provide and enable the Apex Bank to take that loan.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಾನ್ಯ ಸದಸ್ಯರು ಕೆಲವರು ಇಲಾಖಾ ಮುಖ್ಯಾಧಿಕಾರಿಗಳನ್ನು ಸರ್ಕಾರದವರು recognise ಮಾಡಿದ್ದಾರೆಯೇ ಇಲ್ಲವೇ, ರಿಜಿಸ್ಟ್ರಾರ್ ಯಾರು, ಡೆಪ್ಯುಟಿ ರಿಜಿಸ್ಟ್ರಾರ್ ಯಾರು, ಜಾಯಿಂಟ್ ರಿಜಿಸ್ಟ್ರಾರ್ ಯಾರು, ಎಂದು ಕೇಳಿದರು. ಸಿವಿಲ್ ಲಿಸ್ಟ್ ನೋಡಿದರೆ 'vacant' ಎಂದು ಇದೆ. ಇದನ್ನು ಸ್ವಲ್ಪ ತಿಳಿಸಬೇಕು.

ಶ್ರೀ ಬಿ. ಹುಚ್ಚೇಗೌಡ.—ಯಾರಾದರೂ ಒಬ್ಬ ಖಾಸಗಿಯವರನ್ನು ನೇಮಿಸಲು ಯೋಚನೆ ಮಾಡುತ್ತಿದ್ದೀರಾ ?

DR. R. NAGAN GOWDA.—Sir, the post of Registrar of Co-operative Societies has never been occupied by non-officials. It is always occupied, so far as I know, by members of the permanent service. The post of the Registrar has now been kept vacant and the Joint Registrar has been carrying on the work of the Registrar. He is in charge of the whole Department and he is doing the work.

SRI A. BHEEMAPPA NAIK.—If he has been doing the work for a considerable length of time, why do you not put him down permanently as the Head of the Department ?

DR. R. NAGAN GOWDA.—That question of filling up the post of Registrar will be considered in due course. The opinion expressed by the Hon'ble Members here will be kept in mind and will be considered.

Then Sir, there was a very important point raised by Sri H. K. Veeranna Gowdha and that was to increase the individual borrowing power of the borrowers up to Rs. 1000. It is Rs. 500 now as it has been fixed. But in places where it is necessary to raise the limit, I think Government has no objection to consider if any recommendation comes from the societies in places were there are wet crops like paddy and sugarcane crops and other garden crops.

SRI A. BHEEMAPPA NAIK.—What about reducing the audit fees ? We have been asking you times without remember.

DR. R. NAGAN GOWDA.—Since that system was introduced, audit of

societies has taken place all over the State and we have covered 95 per cent of the societies. Whatever has not been covered, it is only because books were not available as they were in law courts. As regards audit fees, I have to say that we have recently made some reduction—may be that it has not come to the notice of the Hon'ble Member. The representation made on the floor of this House has not gone in vain.

There is only one more point and that is about the Training Institute that many of the members mentioned.

12-30 P.M.

At one time it was decided that it should be in Bellary. For some reason we could not start it. But, in the meanwhile, it has become necessary that we should have not one, but two; one will be in Bellary and one in Bangalore. We will start them as quickly as possible.

Mr. CHAIRMAN.—The question is:

"That a sum not exceeding Rs. 19,25,410 be granted to the Government to defray the charges which will come in course of payment during the year ending 31st day of March 1957, in respect of 'Co-operation'."

The motion was adopted.

Mr. CHAIRMAN.—The House will now adjourn and meet tomorrow at Two O'clock.

The House adjourned at Thirty-two Minutes past Twelve of the Clock to meet at Two of the Clock on Sunday, 25th March 1956.

WD 2896—GPB—550—13-7-56.